# ಅಂಗವಿಕಲರ ಹಕ್ಕುಗಳ ಕಾಯಿದೆ, 2016

(ಸನ್ 2016 ರ ಸಂಖ್ಯೆ 49)

27 ಡಿಸೆಂಬರ್ 2016

ಸಂಯುಕ್ತ ರಾಷ್ಟ್ರಗಳ ಒಕ್ಕೂಟದ ಅಂಗವಿಕಲರ ಹಕ್ಕುಗಳ ಒಡಂಬಡಿಕೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಜಾರಿಗೊಳಿಸಿರುವ ಕಾಯಿದೆ.

ಸಂಯುಕ್ತ ರಾಷ್ಟ್ರಗಳ ಒಕ್ಕೂಟದ ಸಾರ್ವಜನಿಕ ಮಹಾಸಭೆ ಸನ್ 2006ರ ಡಿಸೆಂಬರ್ 13ನೇ ತಾರೀಕಿನಂದು ಅಂಗವಿಕಲರ ಹಕ್ಕುಗಳ ಒಡಂಬಡಿಕೆಯನ್ನು ಅಂಗೀಕರಿಸಿದೆ. ಈ ಒಡಂಬಡಿಕೆ ಅಂಗವಿಕಲರ ಸಬಲೀಕರಣಕ್ಕೆಂದು ಈ ಕೆಳಗಿನ ತತ್ವಗಳನ್ನು ನಮೂದಿಸಿದೆ.

ಎ) ಅಂಗವಿಕಲ ವ್ಯಕ್ತಿಗಳ ಘನತೆ ಸ್ವಾಯತ್ತತೆ ಮತ್ತು ವೈಯಕ್ತಿಕ ಆಯ್ಕೆಗಳನ್ನು ಮಾಡಲು ಇರುವ ಅವರ ಸ್ವಾತಂತ್ರ್ಯದ ಬಗ್ಗೆ ಗೌರವ;

ಬಿ) ಭೇದಭಾವ ಇಲ್ಲದಿರುವಿಕೆ.

ಸಿ) ಅಂಗವಿಕಲರು ಸಮಾಜದಲ್ಲಿ ಸಂಪೂರ್ಣವಾಗಿ ಹಾಗೂ ಸಕ್ರಿಯವಾಗಿ ಭಾಗವಹಿಸುವಿಕೆ.

ಡಿ) ಮನುಷ್ಯರ ನಡುವಿನ ಸಹಜ ವ್ಯತ್ಯಾಸಗಳು ಮತ್ತು ವೈವಿಧ್ಯತೆಯನ್ನು ಗೌರವಿಸುವ ಅಂಗವಾಗಿ ಅಂಗವಿಕಲರನ್ನು ಸ್ವೀಕರಿಸುವುದು.

ಇ) ಸಮಾನ ಅವಕಾಶಗಳನ್ನು ಕಲ್ಪಿಸುವುದು.

ಎಫ್) ಅಂಗವಿಕಲರು ಭಾಗವಹಿಸಲು ಅಡಚಣೆಗಳಿಲ್ಲದ ವ್ಯವಸ್ಥೆ.

ಜಿ) ಪುರುಷ ಮತ್ತು ಮಹಿಳೆಯವರ ನಡುವೆ ಸಮಾನತೆ

ಹೆಚ್) ಅಂಗವಿಕಲ ಮಕ್ಕಳ ಬೆಳವಣಿಗೆ ಮತ್ತು ವಿಕಾಸದ ಶಕ್ತಿಯ ಬಗ್ಗೆ ಗೌರವ ಮತ್ತು ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವ ಅವರ ಹಕ್ಕಿನ ಮನ್ನಣೆ.

ಭಾರತ ಈ ಒಡಂಬಡಿಕೆಗೆ ಸಹಿ ಹಾಕಿರುವುದರಿಂದಲೂ ಮತ್ತು ಅಕ್ಟೋಬರ್ 1, 2007 ರಂದು ಒಡಂಬಡಿಕೆಯನ್ನು ಅನುಮೋದಿಸಿರುವುದರಿಂದಲೂ ಈಗ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರುವ ಅಗತ್ಯವಿದೆ. ಭಾರತ ಗಣರಾಜ್ಯದ ಈ 67ನೇ ವರ್ಷದಲ್ಲಿ ಈ ಕೆಳಕಂಡ ಕಾಯಿದೆಯನ್ನು ಸಂಸತ್ತು ಜಾರಿಗೊಳಿಸಿದೆ.

# ಅಧ್ಯಾಯ – 1
## ಪ್ರಾರಂಭಿಕ

ಕಾಯಿದೆಯ ಶೀರ್ಷಿಕೆ ಮತ್ತು ಆರಂಭ

**1**. 1) ಈ ಕಾಯಿದೆಯ ಹೆಸರು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯಿದೆ, 2016

2) ಕೇಂದ್ರ ಸರ್ಕಾರ ರಾಜಪತ್ರ (ಗಜೆಟ್)ದ ಮೂಲಕ ಗೊತ್ತುಪಡಿಸಿದ ತಾರೀಖಿನಂದು ಈ ಕಾಯಿದೆ ಜಾರಿಗೆ ಬರಲಿದೆ. (ಕಾಯಿದೆ ಡಿಸೆಂಬರ್ 27, 2016 ರಂದು ರಾಷ್ಟ್ರಪತಿಗಳ ಒಪ್ಪಿಗೆ ಪಡೆದು ಜಾರಿಗೆ ಬಂದಿದೆ)

ವ್ಯಾಖ್ಯೆಗಳು/ ಪರಿಭಾಷೆ

**2**. ಈ ಕಾಯಿದೆಯಲ್ಲಿ, ಸಂದರ್ಭಕ್ಕೆ ವಿರೋಧವಿಲ್ಲದಿದ್ದಲ್ಲಿ, ಕೆಳಕಂಡ ಪದಗಳ ಅರ್ಥಗಳು ಈ ಕೆಳಗೆ ನಮೂದಿಸಿರುವಂತೆ ಇರುತ್ತದೆ.

ಎ) **"ಮೇಲ್ಮನವಿ ಅಧಿಕಾರ"** ಎಂದರೆ, ಸಂದರ್ಭಾನುಸಾರ, ಸೆಕ್ಷನ್ 14ರ ಖಂಡ (3), ಅಥವಾ ಸೆಕ್ಷನ್ 53ರ ಖಂಡ (1) ಅಥವಾ ಸೆಕ್ಷನ್ 59ರ ಖಂಡ (1)ರ ಕೆಳಗೆ ನಿಯೋಜಿಸಲಾಗಿರುವ ಅಧಿಕಾರ.

ಬಿ) **"ಸೂಕ್ತ ಸರ್ಕಾರ"** ಎಂದರೆ,

1) ಕೇಂದ್ರ ಸರ್ಕಾರ ಸ್ಥಾಪಿಸಿರುವ ಸಂಸ್ಥೆ, ಸ್ಥಾಪನೆಗಳು, ಕೇಂದ್ರ ಸರ್ಕಾರದಿಂದ ಪೂರ್ಣ ಪ್ರಮಾಣದ ಅಥವಾ ಗಣನೀಯ ಮೊತ್ತದ ಹಣ ಸಹಾಯ ಪಡೆಯುತ್ತಿರುವ ಸ್ಥಾಪನೆಗಳು ಅಥವಾ ದಂಡು ಕಾಯಿದೆ 2006ರ ಕೆಳಗೆ ಸ್ಥಾಪಿಸಲಾಗಿರುವ ದಂಡು ಮಂಡಳಿ ಇವುಗಳಿಗೆ ಸಂಬಂಧಪಟ್ಟಿರುವುದಾದರೆ ಸೂಕ್ತ ಸರ್ಕಾರವೆಂದರೆ ಕೇಂದ್ರ ಸರ್ಕಾರವಾಗಿರುವುದು. 2006ರ 41

2) ರಾಜ್ಯ ಸರ್ಕಾರ ಸ್ಥಾಪಿಸಿರುವ ಸಂಸ್ಥೆ, ಸ್ಥಾಪನೆಗಳು, ರಾಜ್ಯ ಸರ್ಕಾರದಿಂದ ಪೂರ್ಣ ಪ್ರಮಾಣದ ಅಥವಾ ಗಣನೀಯ ಮೊತ್ತದ ಹಣ ಸಹಾಯ ಪಡೆಯುತ್ತಿರುವ (ದಂಡು ಮಂಡಳಿಗಳನ್ನು ಹೊರತು ಪಡಿಸಿ) ಸ್ಥಾಪನೆಗಳಾದರೆ ರಾಜ್ಯಸರಕಾರ–ವಾಗಿರುವುದು.

ಸಿ) **"ತಡೆ ಅಥವಾ ತಡಚಣೆ"**: ಅಂಗವಿಕಲರು ಸಂಪೂರ್ಣವಾಗಿ ಹಾಗೂ ಸಮರ್ಥವಾಗಿ ಪಾಲ್ಗೊಳ್ಳಲು ತಡೆ ಅಥವಾ ಅಡಚಣೆ ಒಡ್ಡುವ ಸಂವಹನ, ಭಾಷೆ, ಸಾಂಸ್ಕೃತಿಕ, ಆರ್ಥಿಕ, ಪರಿಸರದಲ್ಲಿನ, ಸಾಂಸ್ಥಿಕ, ರಾಜಕೀಯ ಅಥವಾ ಸಾಮಾಜಿಕ ಸಂಗತಿಗಳಾಗಿರಬಹುದು, ಜನರ ಧೋರಣೆಯಾಗಿರಬಹುದು ಅಥವಾ ಸಾರ್ವಜನಿಕ ಕಟ್ಟಡ, ನಕ್ಷೆ ಅಥವಾ ಇತರ ವಿನ್ಯಾಸವಾಗಿರಬಹುದು.

ಡಿ) **'ಪೋಷಕರು'** ಎಂದರೆ ಅಂಗವಿಕಲ ವ್ಯಕ್ತಿಗೆ ಆರೈಕೆ, ಸಹಾಯ ಅಥವಾ ಆಸರೆ ನೀಡುವ ವ್ಯಕ್ತಿಗಳು. ಇವರು ತಂದೆ–ತಾಯಿ ಅಥವಾ ಕುಟುಂಬದ ಸದಸ್ಯರು ಆಗಿರಬಹುದು. ಅವರು ತಮ್ಮ ಕೆಲಸಕ್ಕೆ ಹಣ ಪಡೆಯುವವರು ಆಗಿರಬಹುದು. ಅಥವಾ ಹಣ ತೆಗೆದುಕೊಳ್ಳದೆ ಪೋಷಣೆ ನೀಡುವವರಾಗಿರಬಹುದು.

ಇ) **'ಪ್ರಮಾಣೀಕರಿಸುವ ಅಧಿಕಾರಿ'** ಎಂದರೆ, ಸೆಕ್ಷನ್ 57ರ ಖಂಡ (1)ರ ಕೆಳಗೆ ನಿಯುಕ್ತವಾಗಿರುವ ಅಧಿಕಾರಿ.

ಎಫ್) **'ಸಂವಹನ'** ಎಂದರೆ ಕೆಳಕಂಡ ಎಲ್ಲ ರೀತಿಯ, ಸಂವಹನಕ್ಕೆಂದು ಬಳಸಲಾಗುವ, ಸ್ಪರ್ಶ ರೂಪದ ಸಂವಹನೆ, ಚಿನ್ಹೆ / ಸಂಕೇತ, ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿರುವುದು. ಬಹುರೂಪಿ ಮಾಧ್ಯಮ, ಬರಹ / ಶ್ರವಣ / ದೃಶ್ಯ ರೂಪದ (ವಿಡಿಯೊ) ಪ್ರದರ್ಶನ, ಸಾಂಕೇತಿಕ ಭಾಷೆ, ಸಾದಾ ಭಾಷೆ, ದೃಷ್ಟಿ ಹೀನರಿಗೆ ಓದುವ ವ್ಯಕ್ತಿ ಮತ್ತು ಇತರ ಎಲ್ಲಾ ಸುಧಾರಿತ ಅಥವಾ ಪರ್ಯಾಯ ಮಾದರಿಯ ಸಂವಹನ, ಅಂಗವಿಕಲರಿಗೆ ತಲುಪುವ ಮಾಹಿತಿ ಮತ್ತು ತಂತ್ರಜ್ಞಾನಗಳು ಎಲ್ಲವನ್ನೂ ಒಳಗೊಂಡಿದೆ.

ಜಿ) 'ಸಕ್ಷಮ ಪ್ರಾಧಿಕಾರ' ಎಂದರೆ ಸೆಕ್ಷನ್ 49ರ ಕೆಳಗೆ ನಿಯುಕ್ತಗೊಂಡಿರುವ ಪ್ರಾಧಿಕಾರ ಅಥವಾ ಅಧಿಕಾರ.

ಹೆಚ್) 'ಭೇದಭಾವ' ಅಂಗವಿಕಲತೆಗೆ ಸಂಬಂಧಪಟ್ಟಿರುವಲ್ಲಿ, ಅಂಗವಿಕಲತೆಯ ಕಾರಣದಿಂದ ಭೇದ ಮಾಡಿ ದೂರ ಇಡುವುದು, ಹೊರತುಪಡಿಸುವುದು, ನಿರ್ಬಂಧಿಸುವುದು, ಈ ಮೂಲಕ ಅಂಗವಿಕಲರು ಇತರರೊಡನೆ ಸಮಾನ ರೀತಿಯಲ್ಲಿ ಮನ್ನಣೆ ಪಡೆಯುವುದನ್ನು, ಅವರ ಮಾನವ ಹಕ್ಕುಗಳನ್ನು ಮೂಲಭೂತ ಸ್ವಾತಂತ್ರ್ಯವನ್ನು, ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ನಾಗರಿಕ ಕ್ಷೇತ್ರಗಳಲ್ಲಿ ಅನುಭವಿಸುವಲ್ಲಿ ಅಡಚಣೆ ಅಥವಾ ಧಕ್ಕೆ ಉಂಟು ಮಾಡುವುದು; ಎಲ್ಲ ರೀತಿಯ ಭೇದಬಾವ ಮತ್ತು ಅಂಗವಿಕಲರಿಗೆ ನೀಡಬೇಕಾದ ಯುಕ್ತ ಸೌಕರ್ಯ ನೀಡದಿರುವುದು 'ಭೇದ ಭಾವ' ಎನಿಸಿಕೊಳ್ಳುತ್ತದೆ.

ಐ) "ಸ್ಥಾಪನೆ" ಎಂದರೆ ಸರ್ಕಾರಿ ಮತ್ತು ಖಾಸಗಿ ಸ್ಥಾಪನೆಗಳನ್ನು ಒಳಗೊಂಡಿರುವುದು.

2013ರ 18

ಜೆ) "ನಿಧಿ" ಎಂದರೆ ಸೆಕ್ಷನ್ 86ರ ಕೆಳಗೆ ಸ್ಥಾಪಿಸಲಾಗಿರುವ ರಾಷ್ಟ್ರೀಯ ನಿಧಿ.

ಕೆ) "ಸರ್ಕಾರಿ ಸ್ಥಾಪನೆ" ಎಂದರೆ ಕೇಂದ್ರ ಅಥವಾ ರಾಜ್ಯ ಸರ್ಕಾರ, ಕಾಯಿದೆಯ ಮೂಲಕ, ಸ್ಥಾಪಿಸಿರುವ ನಿಗಮ ಅಥವಾ ಯಾವುದೇ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಮಂಡಳಿ ಅಥವಾ ಸನ್ 2013ರ ಕಂಪನಿಗಳ ಕಾಯಿದೆ ಸೆಕ್ಷನ್ 2ರ ಕೆಳಗೆ ಗುರುತಿಸಲಾಗುವ ಸರ್ಕಾರಿ ಕಂಪನಿ ಅಥವಾ ಸರ್ಕಾರಿ ಇಲಾಖೆಗಳೂ ಈ ವ್ಯಾಖ್ಯೆಯ ಪರಿಧಿಯೊಳಗೆ ಇರುತ್ತವೆ.

ಎಲ್) "ಅಧಿಕ ಆಸರೆ" ಎಂದರೆ ಶೇ.40% ಅಥವಾ ಹೆಚ್ಚಿನ ಅಂಗವಿಕಲತೆ ಇರುವ ವ್ಯಕ್ತಿಗೆ ಈ ಕೆಳಕಂಡ ವಿಷಯಗಳಲ್ಲಿ ಅಗತ್ಯವಿರುವಷ್ಟು ಆಸರೆ: ತನ್ನ ದೈನಂದಿನ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು, ಒಂದು ವಿಷಯವನ್ನು ಅರ್ಥ ಮಾಡಿಕೊಂಡು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು, ಸೌಕರ್ಯಗಳನ್ನು ಪಡೆದುಕೊಳ್ಳಲು, ವಿದ್ಯಾಭ್ಯಾಸ ಮತ್ತು ನೌಕರಿ ಪಡೆಯಲು, ಕೌಟುಂಬಿಕ ಹಾಗೂ ಸಾಮಾಜಿಕ ಜೀವನದಲ್ಲಿ ಪಾಲ್ಗೊಳ್ಳಲು ಮತ್ತು ತನಗೆ ಅಗತ್ಯವಾದ ಚಿಕಿತ್ಸೆ ಮತ್ತು ವ್ಯಾಯಾಮವನ್ನು ಪಡೆಯಲು ಅವಶ್ಯವಾದ ಆಸರೆ.

ಎಮ್) "ಸಂಯೋಜಿತ ಶಿಕ್ಷಣ" ಎಂದರೆ ಅಂಗವಿಕಲತೆ ಇರುವ ಮತ್ತು ಇಲ್ಲದಿರುವ ವಿದ್ಯಾರ್ಥಿಗಳು ಒಂದಾಗಿ ಕಲಿಯುವ ವ್ಯವಸ್ಥೆ. ಇಲ್ಲಿ ವಿವಿಧ ಅಂಗವಿಕಲತೆ ಇರುವ ವಿದ್ಯಾರ್ಥಿಗಳು ಕಲಿಯಲು ಸಾಧ್ಯವಾಗುವಂತೆ ಶೈಕ್ಷಣಿಕ ಪದ್ಧತಿಯನ್ನು ಸೂಕ್ತವಾಗಿ ಮಾರ್ಪಡಿಸಿರಬೇಕು.

ಎನ್) "ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ" ಎಂದರೆ ಮಾಹಿತಿ ಮತ್ತು ಸಂವಹನಕ್ಕೆ ಸಂಬಂಧಪಟ್ಟ ಎಲ್ಲ ಸೇವೆ ಆವಿಷ್ಕಾರಗಳು ಸೇರಿದ್ದು, ದೂರವಾಣಿ, ಅಂತರ್ಜಾಲ, ಮುದ್ರಣ, ವಿದ್ಯುನ್ಮಾನ (Digital and Virtual) ಮಾಧ್ಯಮದ ಎಲ್ಲ ಸೇವೆಗಳನ್ನು ಒಳಗೊಂಡಿದೆ.

ಒ) "ಸಂಸ್ಥೆ" ಎಂದರೆ ಅಂಗವಿಕಲ ವ್ಯಕ್ತಿಗಳನ್ನು ಇರಿಸಿಕೊಳ್ಳುವ, ಅವರಿಗೆ ಪೋಷಣೆ,
2006ರ 41 ರಕ್ಷಣೆ, ಶಿಕ್ಷಣ, ತರಬೇತಿ ಪುನರ್ವಸತಿ ಮುಂತಾದ ಸೇವೆ ಮತ್ತು ಚಟುವಟಿಕೆಗಳನ್ನು ನೀಡುವ ಸಂಸ್ಥೆ.

ಪಿ) "ಸ್ಥಳೀಯ ಪ್ರಾಧಿಕಾರ" ಅಂದರೆ ಸಂವಿಧಾನದ ಅನುಚ್ಛೇದ 243p ಯ ಕಲಂ (e) ಮತ್ತು (f) ಗಳಲ್ಲಿ ಹೇಳಿರುವಂತೆ ದಂಡು ಕಾಯಿದೆ 2006ರ ಕೆಳಗೆ ರಚಿಸಲಾಗಿರುವ ದಂಡು ಮಂಡಳಿ; ಮತ್ತು ಕೇಂದ್ರದ ಹಾಗೂ ರಾಜ್ಯದ ಕಾಯಿದೆಯಡಿ, ನಾಗರಿಕ ಆಡಳಿತಕ್ಕೆಂದು ರಚಿಸಲಾಗಿರುವ ಪ್ರಾಧಿಕಾರ.

ಕ್ಯು) "ಅಧಿಸೂಚನೆ" ಅಥವಾ "ಪ್ರಕಟಣೆ" ಎಂದರೆ ಸರ್ಕಾರಿ ರಾಜಪತ್ರ ಅಥವಾ ಗೆಜೆಟ್‌ನಲ್ಲಿ ಪ್ರಕಟವಾಗಿರುವುದು, ಅಂತೆಯೇ 'ಪ್ರಕಟಿಸು' ಮತ್ತು 'ಪ್ರಕಟಿಸಲಾಗಿದೆ' ಇತ್ಯಾದಿ.

ಆರ್) ಕಾನೂನು "ಅಂಗವಿಕಲ" (ಬೆಂಚ್‌ಮಾರ್ಕ್ ಅಂಗವಿಕಲತೆ ಇರುವ) ವ್ಯಕ್ತಿ, ಎಂದರೆ ಶೇ. 40 ಅಥವಾ ಇನ್ನೂ ಹೆಚ್ಚಿನ ನಿರ್ದಿಷ್ಟ ಅಂಗವಿಕಲತೆ ಇರುವ ವ್ಯಕ್ತಿ; ಮತ್ತು ಯಾವುದೇ ಅಂಗವಿಕಲತೆಯ ಪ್ರಮಾಣವನ್ನು ಮಾಡಲಾಗದು ಎಂದಿದ್ದರೆ, ಪ್ರಮಾಣೀಕರಿಸುವ ಅಧಿಕಾರಿಯಿಂದ "ಅಂಗವಿಕಲತೆ ಇರುವ ವ್ಯಕ್ತಿ" ಎಂದು ಪ್ರಮಾಣ ಪತ್ರ ಪಡೆದಿರುವ ವ್ಯಕ್ತಿ.

ಎಸ್) "ಅಂಗವಿಕಲ ವ್ಯಕ್ತಿ": ದೀರ್ಘಕಾಲೀನ ದೈಹಿಕ, ಮಾನಸಿಕ, ಬೌದ್ಧಿಕ ಅಥವಾ ಜ್ಞಾನೇಂದ್ರಿಯಗಳ ತೊಂದರೆ ಇದ್ದು, ಪರಿಸರದಲ್ಲಿನ ಅಡಚಣೆ, ತಡೆಗಳೊಡನೆ ಸೇರಿ, ಆ ವ್ಯಕ್ತಿ ಸಮಾಜದಲ್ಲಿ ಇತರರಂತೆ ಸಮರ್ಥವಾಗಿ ಮತ್ತು ಸಂಪೂರ್ಣವಾಗಿ ಪಾಲ್ಗೊಳ್ಳಲು ತಡೆಯುತ್ತಿದ್ದರೆ, ಅಂತಹ ವ್ಯಕ್ತಿ ಅಂಗವಿಕಲ ವ್ಯಕ್ತಿ ಎನಿಸಿಕೊಳ್ಳುತ್ತಾರೆ

ಟಿ) "ಅಧಿಕ ಆಸರೆ ಅವಶ್ಯವಿರುವ ಅಂಗವಿಕಲ ವ್ಯಕ್ತಿ" ಸೆಕ್ಷನ್ 58ರ ಖಂಡ 2(a) ಪ್ರಕಾರ ಅಧಿಕ ಆಸರೆ ಅವಶ್ಯವಿರುವ ವ್ಯಕ್ತಿ ಎಂದು ಪ್ರಮಾಣ ಪತ್ರ ಪಡೆದಿರುವ, ಶೇ. 40% ಕ್ಕೂ ಹೆಚ್ಚಿನ (ಬೆಂಚ್ ಮಾರ್ಕ್) ಅಂಗವಿಕಲತೆ ಇರುವ ವ್ಯಕ್ತಿ.

ಯು) "ನಿಯಮಿಸಿರುವುದು" ಎಂದರೆ ಈ ಕಾಯಿದೆಯಡಿ ರೂಪಿಸಿರುವ ನಿಯಮಗಳ ಪ್ರಕಾರ ನಿಗದಿಸಿರುವುದು.

ವಿ) "ಖಾಸಗಿ ಸ್ಥಾಪನೆ" ಎಂದರೆ ಸರಕಾರ, ಪ್ರಕಟಣೆಯ ಮೂಲಕ, ನಮೂದಿಸಿರುವ ಯಾವುದೇ ಕಂಪನಿ, ಸಂಸ್ಥೆ, ಸಹಕಾರಿ ಸಂಘ, ನ್ಯಾಸ, ಉದ್ದಿಮೆ, ಒಕ್ಕೂಟ, ಸಂಘಟನೆ, ಮುಂತಾದವು.

ಡಬ್ಲ್ಯೂ) "ಸಾರ್ವಜನಿಕ ಕಟ್ಟಡ" ಎಂದರೆ ಸಾರ್ವಜನಿಕರು ಬಳಸುವ ಸರಕಾರಿ ಅಥವಾ ಖಾಸಗಿ ಕಟ್ಟಡ : ಶಿಕ್ಷಣ, ತರಬೇತಿ, ಕೆಲಸ, ವ್ಯಾಪಾರ, ವ್ಯವಹಾರ, ಸಾರ್ವಜನಿಕ ಸೌಕರ್ಯ ಸೇವೆ, ಧಾರ್ಮಿಕ, ಸಾಂಸ್ಕೃತಿಕ, ಮನರಂಜನೆ, ವಿಹಾರ, ವೈದ್ಯಕೀಯ ಅಥವಾ ಆರೋಗ್ಯ ಸೇವೆ, ಕಾನೂನು/ ವ್ಯವಸ್ಥೆಗೆ ಸಂಬಂಧಪಟ್ಟ ವ್ಯವಹಾರಗಳು, ಪುನರ್ವಸತಿ, ನ್ಯಾಯಾಲಯ, ರೈಲ್ವೆ/ಬಸ್/ವಿಮಾನ/ ದೋಣಿ/ಜಹಜು/ನಿಲ್ದಾಣಗಳು ಮುಂತಾದ, ಸಾರ್ವಜನಿಕರು ಬಳಸುವ ಏರ್ಪಾಡು ಅಥವಾ ವ್ಯವಸ್ಥೆ.

ಎಕ್ಸ್) "ಸಾರ್ವಜನಿಕ ಸೇವೆಗಳು/ಸೌಕರ್ಯಗಳು" : ಸಾರ್ವಜನಿಕರಿಗೆ ಒದಗಿಸುವ ವಿವಿಧ ಸೇವೆ/ಸೌಕರ್ಯಗಳು ಉದಾ: ಮನೆ/ವಸತಿ, ಶಿಕ್ಷಣ, ತರಬೇತಿ, ಉದ್ಯೋಗ, ನೌಕರಿ, ಅಂಗಡಿ, ಮುಂಗಟ್ಟು, ಮಾರುಕಟ್ಟೆ, ಬ್ಯಾಂಕು, ವಿಮೆ, ಮನರಂಜನೆ, ವೈದ್ಯಕೀಯ, ಆರೋಗ್ಯ, ಪುನರ್ವಸತಿ, ಅಂಚೆ, ನ್ಯಾಯಾಲಯ, ಸಾರ್ವಜನಿಕ ಸೌಕರ್ಯಗಳು, ಸಾರಿಗೆ ಇತ್ಯಾದಿ.

ವೈ) 'ಯಕ್ತ ಏರ್ಪಾಡು': ಒಂದು ಸ್ಥಳದಲ್ಲಿ ಅಂಗವಿಕಲರೂ ಇತರರಂತೆ ವ್ಯವಹರಿಸಲು ಮತ್ತು ಸುಲಭವಾಗಿ ಉಪಯೋಗಿಸಲು ಅಲ್ಲಿಯ ಸಜಾವಣೆ ಸಲಕರಣೆಗಳನ್ನು ಅತಿಯಾದ ಶ್ರಮ ಮತ್ತು ವೆಚ್ಚವಿಲ್ಲದೆ ಮಾರ್ಪಡಿಸುವುದು.

ಝೆಡ್) 'ನೋಂದಾಯಿತ ಸಂಸ್ಥೆ': ಕೇಂದ್ರ ಅಥವಾ ರಾಜ್ಯ ಸರಕಾರದ ಕಾಯಿದೆಯಡಿ ನೋಂದಾವಣೆಗೊಂಡು ಅಂಗವಿಕಲರ ಕಲ್ಯಾಣಕ್ಕೆಂದು ದುಡಿಯುತ್ತಿರುವ ಸಂಸ್ಥೆ, ಅಂಗವಿಕಲರ ಸಂಘ/ಸಂಸ್ಥೆ, ಅಂಗವಿಕಲರ ಪೋಷಕರ ಸಂಘ, ಅಂಗವಿಕಲರು ಮತ್ತು ಅವರ ಕುಟುಂಬದ ಸದಸ್ಯರು ಸೇರಿ ಮಾಡಿಕೊಂಡಿರುವ ಸಂಘ ಅಥವಾ ಸ್ವಯಂ ಸೇವಾ ಸಂಸ್ಥೆ, ಲಾಭರಹಿತ ಸಂಸ್ಥೆ ಮುಂತಾದವು

ಝೆಡ್.ಎ) 'ಪುನರ್ವಸತಿ': ಅಂಗವಿಕಲರು ತಮ್ಮ ದೈಹಿಕ ಐಂದ್ರಿಕ ಮಾನಸಿಕ, ಬೌದ್ಧಿಕ ಸಾಮರ್ಥ್ಯವನ್ನು ಗರಿಷ್ಟ ಮಟ್ಟಕ್ಕೆ ಬೆಳೆಸಿಕೊಳ್ಳಲು ಮಾಡುವ ಏರ್ಪಾಡು ಅಥವಾ ವ್ಯವಸ್ಥೆ.

ಝೆಡ್.ಬಿ) 'ವಿಶೇಷ ಉದ್ಯೋಗ ವಿನಿಮಯ ಕೇಂದ್ರ': ಸರ್ಕಾರ ಸ್ಥಾಪಿಸಿ ನಿಭಾಯಿಸುತ್ತಿರುವ ಕೆಳಕಂಡ ವಿವರಗಳನ್ನು ಒದಗಿಸುವ ಸಂಸ್ಥೆ:

1) ಅಂಗವಿಕಲರಿಗೆ ಉದ್ಯೋಗ/ನೌಕರಿ ಕೊಡಲು ಬಯಸುವವರ ವಿವರಗಳು

2) ಉದ್ಯೋಗ ಬಯಸುತ್ತಿರುವ ಅಂಗವಿಕಲರ ವಿವರಗಳು

3) ಉದ್ಯೋಗ ಬಯಸುತ್ತಿರುವ ಅಂಗವಿಕಲರು ಮಾಡಬಹುದಾದ ಖಾಲಿ ಇರುವ ಕೆಲಸಗಳ ವಿವರಗಳು.

ಝೆಡ್.ಸಿ) 'ನಿರ್ದಿಷ್ಟ ಅಂಗವಿಕಲತೆ': ಎಂದರೆ ಕಾಯಿದೆಯ ಅನುಸೂಚಿಯಲ್ಲಿ ನಮೂದಿಸಿರುವ ಅಂಗವಿಕಲತೆಗಳು.

ಝೆಡ್.ಡಿ) "ಸಾರಿಗೆ ವ್ಯವಸ್ಥೆ": ಎಂದರೆ ರಸ್ತೆ, ರೈಲು, ವಿಮಾನ, ಜಲ ಮಾರ್ಗ, ಆಕಾಶ ಮಾರ್ಗ (ಪ್ಯಾರಶೂಟ್)ಗಳಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾಗೂ ಕಡೆಯ ಗಮ್ಯ ಸ್ಥಳದವರೆಗೂ ಮುಟ್ಟಿಸಲು ಇರಬೇಕಾದ ವ್ಯವಸ್ಥೆ.

ಝೆಡ್.ಇ) "ಸಾರ್ವತ್ರಿಕ ನಮೂನೆಗಳು": ಎಲ್ಲ ತರಹದ ಅಂಗವಿಲರೂ ಬಳಸಬಹುದಾದ, ಸಾಧ್ಯವಾದಷ್ಟು ಮಟ್ಟಿಗೆ ವಿಶೇಷ ಮಾರ್ಪಾಡುಗಳ ಅವಶ್ಯಕತೆ ಇಲ್ಲದೆ, ಗರಿಷ್ಠ ಅನುಕೂಲತೆಯುಳ್ಳ ನಮೂನೆಗಳು. ಇದು ಸಹಾಯಕ ಸಲಕರಣೆಗಳಾಗಿರಬಹುದು ಅಥವಾ ನಿರ್ದಿಷ್ಟ ಅಂಗವಿಕಲತೆಯುಳ್ಳವರಿಗೆ ಅವಶ್ಯವಾದ ಉನ್ನತ ತಂತ್ರಜ್ಞಾನವಿರಬಹುದು.

***ಅನುವಾದಕರ ಸೂಚನೆಗಳು:–***

*ಅ) ಈ ಕಾಯಿದೆಯಲ್ಲಿ "ಅಂಗವಿಕಲರು" ಎನ್ನುವಲ್ಲಿ "ಬೆಂಚ್ ಮಾರ್ಕ್ ಅಂಗವಿಕಲತೆಯುಳ್ಳವರು" ಎಂಬ ಶಬ್ದವನ್ನು ಬಳಸಲಾಗಿದೆ. ಹಿಂದಿನ 2005ರ ಕಾಯಿದೆಯಲ್ಲಿ ಅಂಗವಿಕಲರು ಎಂದು ಹೇಳಿರುವ ಶಬ್ದಕ್ಕೂ ಈ ಹೊಸ ಪದಪುಂಜಕ್ಕೂ ಅರ್ಥದಲ್ಲಿ ಹಾಗೂ ಇಂಗಿತದಲ್ಲಿ ವ್ಯತ್ಯಾಸವಿಲ್ಲ.*

*ಆ) ಕಾಯಿದೆಗಳಲ್ಲಿ ಕೆಲವು ಸೆಕ್ಷನ್ ಅಥವಾ ಖಂಡಗಳಲ್ಲಿ Proviso ಎಂದು ಇರುತ್ತದೆ. ಇದನ್ನು ಅಪವಾದ ಅಥವಾ ವಿಶೇಷ ಸೂಚನೆ ಎಂದು ಹೇಳಬಹುದು. ಸೆಕ್ಷನ್ ಅಥವಾ ಖಂಡದಲ್ಲಿ ಹೇಳಿರುವುದೆಲ್ಲ ಇಂತಹ ಅಪವಾದಕ್ಕೆ ಅಥವಾ ಶರತ್ತಿಗೆ ಒಳಪಟ್ಟಿರುತ್ತವೆ.*

## ಅಧ್ಯಾಯ – 2

## ಹಕ್ಕುಗಳು ಮತ್ತು ಅರ್ಹತೆಗಳು

ಸಮಾನತೆ ಮತ್ತು ಭೇದ ಇಲ್ಲದಿರುವಿಕೆ

**3.** 1) ಆಯಾ (ಕೇಂದ್ರ ಮತ್ತು ರಾಜ್ಯ) ಸರ್ಕಾರಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಅಂಗವಿಕಲರಿಗೆ ಸಮಾನ ಹಕ್ಕುಗಳು ಇರುವಂತೆ ಮತ್ತು ಅವರು ಇತರರಂತೆ ಗೌರವಯುತ ಜೀವನ ನಡೆಸಲು ಸಾಧ್ಯವಾಗುವಂತೆ ನೋಡಿಕೊಳ್ಳಬೇಕು.

2) ಅಂಗವಿಕಲರು ತಮ್ಮ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅನುವಾಗುವಂತಹ ಪರಿಸರವನ್ನು ಕಲ್ಪಿಸಿಕೊಡಬೇಕು.

3) ಅಂಗವಿಕಲತೆಯ ಕಾರಣದಿಂದ ಒಬ್ಬ ವ್ಯಕ್ತಿಯನ್ನು ಭೇದಭಾವಕ್ಕೆ ಗುರಿಪಡಿಸಲಾಗದು. ಒಂದು ವೇಳೆ ಹಾಗೆ ಮಾಡಿದರೆ, ಆ ಉದ್ದೇಶಕ್ಕೆ ಅಗತ್ಯವಾದಷ್ಟೇ ಭೇದಭಾವ ಮಾಡುವ ಅನಿವಾರ್ಯತೆ ಇತ್ತು ಎಂಬುದು ಸ್ಪಷ್ಟವಾಗಿ ತಿಳಿಯಬೇಕು.

4) ಅಂಗವಿಕಲತೆಯ ಕಾರಣ ಮಾತ್ರದಿಂದಲೇ ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗದು.

5) ಸರ್ಕಾರ ಅಂಗವಿಕಲರಿಗೆ ಯುಕ್ತ ಸೌಕರ್ಯ ಮತ್ತು ಏರ್ಪಾಡು ಮಾಡಬೇಕು.

ಅಂಗವಿಕಲ ಮಹಿಳೆಯರು ಮತ್ತು ಮಕ್ಕಳು

**4.** 1) ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಮಹಿಳೆಯರು ಮತ್ತು ಮಕ್ಕಳಿಗೆ ಸಮಾನ ಹಕ್ಕುಗಳು ಸಿಗುವಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

2) ಅಂಗವಿಕಲ ಮಕ್ಕಳು ಅವರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ತಿಳಿಸಲು ಸರ್ಕಾರ ಅವರಿಗೆ ಅವಕಾಶ ಒದಗಿಸಬೇಕು. ಮತ್ತು ಅವರ ವಯಸ್ಸು ಹಾಗೂ ಅಂಗವಿಕಲತೆಗೆ ಅನುಗುಣವಾಗಿ ಅವರಿಗೆ ಆಸರೆ ಒದಗಿಸಬೇಕು.

ಸಾಮೂಹಿಕ ಜೀವನ

**5.** 1) ಅಂಗವಿಕಲ ವ್ಯಕ್ತಿಗಳಿಗೆ ಅವರ ಸಮೂಹದಲ್ಲಿ ಜೀವನ ನಡೆಸುವ ಹಕ್ಕು ಇರುವುದು.

2) ಸರ್ಕಾರ ಸಾಧ್ಯ ಆದಷ್ಟೂ ಅಂಗವಿಕಲರನ್ನು

ಎ) ಪ್ರತ್ಯೇಕವಾದ ವ್ಯವಸ್ಥೆಯಲ್ಲಿ ಇರುವಂತೆ ಒತ್ತಾಯ ಮಾಡಬಾರದು.

ಬಿ) ಅವರ ಮನೆ/ವಸತಿಯಲ್ಲೇ ಸಾಮೂಹಿಕ ಸೇವೆಗಳನ್ನು ಏರ್ಪಡಿಸಬೇಕು. ಅವರ ವಯಸ್ಸು ಮತ್ತು ಲಿಂಗಕ್ಕೆ ಅಗತ್ಯವಾದ ಹಾಗೂ ವೈಯಕ್ತಿಕ ಜೀವನದಲ್ಲಿ ಅವಶ್ಯವಿರುವ ಸಹಾಯ/ಆಸರೆ ಸಿಗುವಂತೆ ಕ್ರಮ ತೆಗೆದುಕೊಳ್ಳಬೇಕು.

ಹಿಂಸೆ ಮತ್ತು ಕ್ರೌರ್ಯದಿಂದ ರಕ್ಷಣೆ

**6**. 1) ಅಂಗವಿಕಲರು ಹಿಂಸೆ, ಕ್ರೌರ್ಯ ಹಾಗೂ ಅಮಾನವೀಯ ದೌರ್ಜನ್ಯ ಅಥವಾ ಅವಮಾನಕ್ಕೆ ಒಳಗಾಗದಂತೆ ಸರ್ಕಾರ ಅವರಿಗೆ ರಕ್ಷಣೆ ನೀಡಬೇಕು.

2) i) ಯಾವುದೇ ಅಂಗವಿಕಲ ವ್ಯಕ್ತಿಯನ್ನು, ಅವರಿಗೆ ವಿಷಯವನ್ನು ವಿವರಿಸಿದೆ, ಅವರ ಮುಕ್ತ ಅನುಮತಿ ಪಡೆಯದೆ, ಯಾವುದೇ ಪ್ರಯೋಗ ಅಥವಾ ಸಂಶೋಧನೆಗೆ ಒಳಪಡಿಸುವಂತಿಲ್ಲ.

ii) ಸರ್ಕಾರ ರಚಿಸಿರುವ, ಅಂಗವಿಕಲತೆ ಬಗ್ಗೆ ಸಂಶೋಧನೆ ಮಾಡುವ ಸಮಿತಿಯ ಪೂರ್ವ ಅನುಮತಿ ಇಲ್ಲದೆ ಯಾವುದೇ ಅಂಗವಿಕಲ ವ್ಯಕ್ತಿಯನ್ನು ಸಂಶೋಧನೆಗೆ ಒಳಪಡಿಸುವಂತಿಲ್ಲ. ಈ ಸಮಿತಿಯಲ್ಲಿ ಕನಿಷ್ಟ ಅರ್ಧದಷ್ಟು ಸದಸ್ಯರು ಅಂಗವಿಕಲರಾಗಿರಬೇಕು. ಅಥವಾ ಅದು ಸೆಕ್ಷನ್ 2ರ ಖಂಡ ಝಡ್ ಪ್ರಕಾರ ನೋಂದಾಯಿತ ಸಂಘ/ಸಂಸ್ಥೆಯಾಗಿರಬೇಕು.

ದೌರ್ಜನ್ಯ, ಹಿಂಸೆ ಮತ್ತು ಶೋಷಣೆಯಿಂದ ರಕ್ಷಣೆ

**7**. 1) ಸರ್ಕಾರ ಅಂಗವಿಕಲರನ್ನು ಎಲ್ಲ ರೀತಿ ದೌರ್ಜನ್ಯ, ಹಿಂಸೆ ಮತ್ತು ಶೋಷಣೆಯಿಂದ ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಅವನ್ನು ತಡೆಗಟ್ಟಲು

ಎ) ದೌರ್ಜನ್ಯ, ಹಿಂಸೆ ಮತ್ತು ಶೋಷಣೆಯ ಘಟನೆಗಳ ವಿರುದ್ಧ ಕಾನೂನಿನ ಕ್ರಮ ತೆಗೆದುಕೊಂಡು ಪರಿಹಾರಗಳನ್ನು ಒದಗಿಸಬೇಕು.

ಬಿ) ಅಂತಹ ಘಟನೆಗಳು ಆಗದಂತೆ ಕ್ರಮ ತೆಗೆದುಕೊಂಡು ಅಂತಹ ಘಟನೆಗಳ ಬಗ್ಗೆ ವರದಿ ಮಾಡಲು ನಿಯಮ ಗೊತ್ತುಪಡಿಸಬೇಕು.

ಸಿ) ದೌರ್ಜನ್ಯ ಇತ್ಯಾದಿಗಳಿಗೆ ಗುರಿಯಾದವರನ್ನು ಕರೆತಂದು ರಕ್ಷಿಸಿ, ಅವರಿಗೆ ಪುನರ್ವಸತಿಯ ಏರ್ಪಾಡು ಮಾಡಬೇಕು.

ಡಿ) ಇವುಗಳ ಜತೆ ಜತೆಗೇ ಜನ ಸಾಮಾನ್ಯರಲ್ಲಿ ಇಂತಹ ಘಟನೆಗಳ ಬಗ್ಗೆ ಜಾಗೃತಿ ಮೂಡಿಸುವುದನ್ನೂ ಮಾಡಬೇಕು.

2) ಯಾವುದೇ ಅಂಗವಿಕಲ ವ್ಯಕ್ತಿಯನ್ನು ದೌರ್ಜನ್ಯ, ಹಿಂಸೆ ಅಥವಾ ಶೋಷಣೆಗೆ ಗುರಿಪಡಿಸಲಾಗಿದೆ ಅಥವಾ ಗುರಿಪಡಿಸಬಹುದು ಎಂದು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಅನಿಸಿದರೆ, ಅವರು ಸ್ಥಳೀಯ ಕಾರ್ಯಕಾರಿ ದಂಡಾಧಿಕಾರಿಗಳಿಗೆ (Executive Magistrate) ಆ ಬಗ್ಗೆ ತಿಳಿಸಬಹುದು.

3) ಸದರಿ ದಂಡಾಧಿಕಾರಿಗಳು ಅಂತಹ ಮಾಹಿತಿ ದೊರೆತ ಒಡನೆ ಘಟನೆಗಳು ನಡೆಯದಂತೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಆ ಅಂಗವಿಕಲ ವ್ಯಕ್ತಿಯ ರಕ್ಷಣೆಗೆ ಅಗತ್ಯವಾದ ಆದೇಶವನ್ನು ಕೊಡಬೇಕು ಮತ್ತು

ಎ) ದೌರ್ಜನ್ಯಕ್ಕೆ ಗುರಿಯಾದ ವ್ಯಕ್ತಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಪೋಲಿಸ್ ಅಥವಾ ಅಂಗವಿಕಲರೊಡನೆ ಕೆಲಸ ಮಾಡುತ್ತಿರುವ ಸಂಸ್ಥೆಗೆ ಒಪ್ಪಿಸಿ, ಆ ವ್ಯಕ್ತಿಯ ರಕ್ಷಣೆ ಮತ್ತು ಪುನರ್ವಸತಿಗೆ ಏರ್ಪಾಡು ಮಾಡಲು ಆದೇಶಿಸಬೇಕು.

ಬಿ) ಅಂಗವಿಕಲ ವ್ಯಕ್ತಿ ಕೇಳಿದ್ದಲ್ಲಿ, ಅವರನ್ನು ರಕ್ಷಣಾ ವಶಕ್ಕೆ ಒಪ್ಪಿಸುವ ಆದೇಶ ನೀಡಬೇಕು.

ಸಿ) ಅಂಗವಿಕಲ ವ್ಯಕ್ತಿಗೆ ನಿರ್ವಹಣಾ ವೆಚ್ಚವನ್ನು ಏರ್ಪಡಿಸಬೇಕು.

4) ಯಾವುದೇ ಪೋಲಿಸ್ ಅಧಿಕಾರಿಗೆ ಅಂಗವಿಕಲ ವ್ಯಕ್ತಿ ದೌರ್ಜನ್ಯ, ಹಿಂಸೆ ಅಥವಾ ಶೋಷಣೆಗೆ ಗುರಿಯಾಗಿದ್ದಾರೆ ಎಂಬ ದೂರು ಅಥವಾ ಮಾಹಿತಿ ದೊರೆತಲ್ಲಿ, ಸದರಿ ಅಧಿಕಾರಿ ಆ ಅಂಗವಿಕಲ ವ್ಯಕ್ತಿಗೆ

ಎ) ಸೆಕ್ಷನ್ 2ರ ಕೆಳಗೆ ಆತ/ಕೆ ಸ್ಥಳೀಯ ದಂಡಾಧಿಕಾರಿಯಲ್ಲಿ ಸಹಾಯ ಕೋರಿಕೊಳ್ಳುವ ಹಕ್ಕು ಇದೆ ಎಂದು ತಿಳಿಸಿಕೊಡಬೇಕು.

ಬಿ) ಹತ್ತಿರದಲ್ಲಿರುವ ಅಂಗವಿಕಲರ ಪುನರ್ವಸತಿಗಾಗಿ ದುಡಿಯುತ್ತಿರುವ ಸಂಸ್ಥೆಯ ಬಗ್ಗೆ ವಿವರಗಳನ್ನು ಕೊಡಬೇಕು.

ಸಿ) ಆತನಿಗೆ ಶುಲ್ಕವಿಲ್ಲದೆ ಕಾನೂನಿನ ನೆರವು ಪಡೆಯಬಹುದು ಎಂದು ತಿಳಿಸಬೇಕು. ಮತ್ತು

ಡಿ) ಈ ಕಾಯಿದೆ ಅಥವಾ ಇನ್ಯಾವುದೇ ಕಾಯಿದೆಯ ಕೆಳಗೆ ದೂರು ಸಲ್ಲಿಸುವ ಹಕ್ಕು ಇದೆ ಎಂಬುದನ್ನು ತಿಳಿಸಬೇಕು.

ಆದರೆ, ಯಾವುದೇ ಸಂಜ್ಞೇಯ (ದಂಡಾಧಿಕಾರಿಯ ಆದೇಶವಿಲ್ಲದೆ ದಸ್ತಗಿರಿ ಮಾಡಬಹುದಾದ) ಅಪರಾಧ ನಡೆದಿದ್ದರೆ ಸದರಿ ಪೋಲಿಸ್ ಅಧಿಕಾರಿ, ಕಾನೂನಿನ ಪ್ರಕಾರ, ತನ್ನ ಕರ್ತವ್ಯವನ್ನು ಮಾಡಬೇಕು.

5) ಅಂಗವಿಕಲ ವ್ಯಕ್ತಿಯೊಡನೆಯ ವರ್ತನೆ ಭಾರತೀಯ ದಂಡ ಸಂಹಿತೆ ಅಥವಾ ಇನ್ಯಾವುದೇ ಕಾನೂನಿನಡಿ ಅಪರಾಧ ಎನಿಸಿಕೊಳ್ಳುವಂತಿದ್ದರೆ, ಕಾರ್ಯಕಾರಿ ದಂಡಾಧಿಕಾರಿ ಸ್ಥಳೀಯ ನ್ಯಾಯಾಂಗ ದಂಡಾಧಿಕಾರಿಗಾರಿಗೆ ಆ ಕುರಿತು ದೂರನ್ನು ಸಲ್ಲಿಸಬಹುದು. 1860ರ 43

ರಕ್ಷಣೆ ಮತ್ತು ಸುರಕ್ಷತೆ

**8**. 1) ಯಾವುದೇ ಅಪಾಯ, ಯುದ್ಧ, ಸಾಮಾಜಿಕ ಗಲಭೆ, ಆಪತ್ತು ಅಥವಾ ನೈಸರ್ಗಿಕ ಪ್ರಕೋಪಗಳ ಸಂದರ್ಭಗಳಲ್ಲಿ ಇತರರಂತೆಯೇ ಅಂಗವಿಕಲರಿಗೂ ಸಮಾನ ರಕ್ಷಣೆ ಮತ್ತು ಸುರಕ್ಷತೆ ಒದಗಿಸಬೇಕು.

2) ರಾಷ್ಟ್ರೀಯ ಮತ್ತು ರಾಜ್ಯದ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು 2005ರ ವಿಪತ್ತು ನಿರ್ವಹಣೆ ಕಾಯಿದೆಯ ಸೆಕ್ಷನ್ 2 ಖಂಡ (ಇ) ಪ್ರಕಾರ ನಡೆಸುವ ವಿಪತ್ತು ನಿರ್ವಹಣಾ ಚಟುವಟಿಕೆಗಳಲ್ಲಿ ಅಂಗವಿಕಲರನ್ನು ಸೇರಿಸಿಕೊಳ್ಳಬೇಕು ಮತ್ತು ಅವರ ರಕ್ಷಣೆ ಮತ್ತು ಸುರಕ್ಷತೆಯ ಬಗ್ಗೆ ಗಮನವಿರಿಸಬೇಕು. 1860ರ 53

3) ವಿಪತ್ತು ನಿರ್ವಹಣಾ ಕಾಯಿದೆಯ ಸೆಕ್ಷನ್ 25 ರಡಿ ರಚಿಸಲಾಗುವ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಜಿಲ್ಲೆಯಲ್ಲಿರುವ ಸಮಸ್ತ ಅಂಗವಿಕಲರ ವಿವರಗಳ ಪಟ್ಟಿಯನ್ನು ತಯಾರಿಸಿ ಇಟ್ಟುಕೊಳ್ಳಬೇಕು ಮತ್ತು ವಿಪತ್ತು ಸಂಭವಿಸಿದ್ದಲ್ಲಿ ಅವರು ಹೇಗೆ ನಡೆದುಕೊಳ್ಳಬೇಕು ಎಂದು ತಿಳಿಸಿರಬೇಕು. ಇದರಿಂದ ಅಂಗವಿಕಲರೂ ವಿಪತ್ತಿನ ಸಂದರ್ಭಕ್ಕೆ ಸಿದ್ಧರಾಗಿ ಇರಬಹುದು. 1860ರ 53

4) ಆಪತ್ತು, ಯುದ್ಧ, ನೈಸರ್ಗಿಕ ಪ್ರಕೋಪಗಳ ತರುವಾಯ ಅಂಗವಿಕಲರ ಪುನರ್ ನಿರ್ಮಾಣ ಕಾರ್ಯಗಳಲ್ಲಿ ತೊಡಗಿರುವ ಅಧಿಕಾರಿಗಳು ರಾಜ್ಯದ ಅಂಗವಿಕಲರ ಆಯುಕ್ತ (ಕಮಿಶನರ್) ರೊಡನೆ ಸಮಾಲೋಚಿಸಿ, ಅಂಗವಿಕಲರಿಗೆ ಅಡಚಣೆ ರಹಿತ ಸೌಕರ್ಯಗಳನ್ನು ರಚಿಸುವ ಕಾರ್ಯಗಳನ್ನು ಮಾಡಬೇಕು.

ಮನೆ ಮತ್ತು ಕುಟುಂಬ

**9**. 1) ಯಾವುದೇ ಅಂಗವಿಕಲ ಮಗುವನ್ನು ಅಂಗವಿಕಲತೆಯ ಕಾರಣಕ್ಕಾಗಿ ಅದರ ತಂದೆ–ತಾಯಿಯಿಂದ ಬೇರ್ಪಡಿಸಲಾಗದು ಆದರೆ ಮಗುವಿನ ಗರಿಷ್ಠ ಒಳಿತಿಗಾಗಿ, ಸಂಬಂಧಪಟ್ಟ ನ್ಯಾಯಾಲಯದ ಆದೇಶದ ಮೇರೆಗೆ, ಮಗುವನ್ನು ಬೇರೆ ಮಾಡಬಹುದು.

2) ಅಂಗವಿಕಲ ಮಗುವನ್ನು ಅದರ ತಂದೆ–ತಾಯಿ ನೋಡಿಕೊಳ್ಳಲು ಅಶಕ್ಯರಾಗಿದ್ದಲ್ಲಿ, ನ್ಯಾಯಾಲಯ ಮಗುವನ್ನು ಅದರ ಹತ್ತಿರದ ಸಂಬಂಧಿಕರೊಡನೆ ಇರಿಸಲು ಆದೇಶಿಸಬಹುದು. ಹಾಗಿಲ್ಲದಿದ್ದಲ್ಲಿ, ಅದೇ ಸಮೂಹದಲ್ಲಿ, ಕೌಟುಂಬಿಕ ವಾತಾವರಣದಲ್ಲಿ ಇರಿಸಲು ಆದೇಶಿಸಬಹುದು. ಹಾಗೂ ಸಾಧ್ಯವಿಲ್ಲದಿದ್ದರೆ ಸರ್ಕಾರ ಅಥವಾ ಸರಕಾರೇತರ ಸಂಸ್ಥೆ ನಡೆಸುವ ಆಶ್ರಯದಲ್ಲಿ ಇರಿಸಲು ಹೇಳಬಹುದು.

ಲೈಂಗಿಕ ಹಕ್ಕುಗಳು

**10**. 1) ಸರ್ಕಾರ ಅಂಗವಿಲರಿಗೆ ಅವಶ್ಯವಾದ ಲೈಂಗಿಕ ಹಾಗೂ ಕುಟುಂಬ ಯೋಜನೆಯ ವಿಷಯಗಳ ಕುರಿತು ಮಾಹಿತಿ ನೀಡಬೇಕು.

2) ಯಾವುದೇ ಅಂಗವಿಕಲ ವ್ಯಕ್ತಿಯನ್ನು ಆತನ/ಆಕೆಯ ಒಪ್ಪಿಗೆ ಇಲ್ಲದೆ ಸಂತಾನಹರಣ ಚಿಕಿತ್ಸೆಗೆ ಒಳಪಡಿಸುವಂತಿಲ್ಲ.

ಮತದಾನಕ್ಕೆ ಅನುಕೂಲತೆ

**11.** ಕೇಂದ್ರ ಹಾಗೂ ರಾಜ್ಯ ಮಟ್ಟದ ಚುನಾವಣಾ ಆಯೋಗಗಳು ಅಂಗವಿಕಲರು ಮತಗಟ್ಟೆಗೆ ಹೋಗಿ ಮತದಾನದ ಪ್ರಕ್ರಿಯೆ ಮತ್ತು ಅದಕ್ಕೆ ಸಂಬಂಧಪಟ್ಟ ಸಲಕರಣೆಗಳು ಅಂಗವಿಕಲರಿಗೆ ಅರ್ಥವಾಗುವಂತೆಯೂ ನಿಲುಕುವಂತೆಯೂ ಇರುವಂತೆ ನೋಡಿಕೊಳ್ಳಬೇಕು.

ನ್ಯಾಯಾಲಯದ ವ್ಯವಸ್ಥೆ ನಿಲುಕಬೇಕು.

**12**. 1) ಸರ್ಕಾರ, ಅಂಗವಿಕಲರೂ, ಇತರರಂತೆಯೇ, ತಮಗೆ ಅವಶ್ಯವಾದ ನ್ಯಾಯಾಲಯ, ಮಂಡಳಿ, ಪ್ರಾಧಿಕಾರ, ಆಯೋಗ ಇತ್ಯಾದಿ ನ್ಯಾಯಿಕ ಹಾಗೂ ಕಾನೂನು ವ್ಯವಸ್ಥೆಯ ಅಧಿಕಾರಿಗಳ ಬಳಿ ಸಾರಿ ತಮ್ಮ ನ್ಯಾಯಿಕ/ಕಾನೂನಿನ ಹಕ್ಕನ್ನು ಚಲಾಯಿಸಲು ಅನುವು ಮಾಡಿಕೊಡಬೇಕು.

2) ವಿಶೇಷವಾಗಿ ತಮ್ಮ ಕುಟುಂಬದಿಂದ ಬೇರೆಯಾಗಿ ಇರುವ ಅಂಗವಿಕಲರು ಮತ್ತು ಅಧಿಕ ಆಸರೆ ಅವಶ್ಯವಿರುವ ಅಂಗವಿಕಲರು ಅವರ ಕಾನೂನು ದತ್ತ ಹಕ್ಕುಗಳನ್ನು ಅನುಭವಿಸಲು ಅಗತ್ಯವಾದ ಸಹಾಯವನ್ನು ಸರ್ಕಾರ ಏರ್ಪಡಿಸಬೇಕು.

3) ಸನ್ 1987ರ ಕಾನೂನು ಸೇವಾ ಅಧಿಕಾರದ ಕಾಯಿದೆಯಡಿ ರಚಿಲಾಸಲಾಗಿರುವ ರಾಷ್ಟ್ರೀಯ ಕಾನೂನು ಸೇವಾ ಅಧಿಕಾರ ಮತ್ತು ರಾಜ್ಯ ಕಾನೂನು ಸೇವಾ ಅಧಿಕಾರಗಳು ಅವರ ಸೇವೆಗಳಲ್ಲಿ ಅಂಗವಿಕಲರಿಗೂ ಸಾಕಷ್ಟು ಸೇವೆ ದೊರೆಯುವಂತೆ ಮತ್ತು ಅವರ ಕಾರ್ಯಕ್ರಮ, ಸವಲತ್ತು ಹಾಗೂ ಸೌಲಭ್ಯಗಳು ಇತರರರಂತೆಯೇ ಅಂಗವಿಕಲರಿಗೂ ಸಮಾನವಾಗಿ ದೊರೆಯುವಂತೆ ನೋಡಿಕೊಳ್ಳಬೇಕು. 1987ರ 39

4) ಎ) ಸರ್ಕಾರದ ಎಲ್ಲಾ ಸಾರ್ವಜನಿಕ ದಾಖಲೆಗಳು ಮತ್ತು ಪತ್ರಗಳು ಅಂಗವಿಕಲರಿಗೂ ತಲುಪುವಂತೆ (ಅವರು ಓದುವ/ಕೇಳಿ ತಿಳಿಯುವ ಸಾಧ್ಯತೆ ಇರುವಂತೆ) ಕ್ರಮ ತೆಗೆದುಕೊಳ್ಳಬೇಕು.

ಬಿ) ಸರ್ಕಾರದ ಕಡತಗಳು, ರಿಜಿಸ್ಟರುಗಳು ಮತ್ತಿತರ ದಾಖಲೆಗಳನ್ನು ಶೇಖರಿಸಿ ಸಂಗ್ರಹಿಸಿ ಇಡುವಾಗ ಅವು ಅಂಗವಿಕಲರೂ ನೋಡುವ/ಓದುವ/ಕೇಳುವ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು.

ಸಿ) ಅಂಗವಿಕಲರು ನೀಡುವ ಯಾವುದೇ ಸಾಕ್ಷ್ಯ, ಪ್ರಮಾಣ, ವಾದ, ಅಭಿಪ್ರಾಯಗಳು ಅವರು ಇಚ್ಛಿಸುವ ಭಾಷೆ, ನಮೂನೆ ಅಥವಾ ರೂಪದಲ್ಲಿ ದಾಖಲಿಸುವ ವ್ಯವಸ್ಥೆ ಮಾಡಬೇಕು.

ಕಾನೂನು ಅರ್ಹತೆ

**13**. 1) ಅಂಗವಿಕಲರಿಗೂ, ಇತರರಂತೆಯೇ ಚರಾಚರ ಆಸ್ತಿಗಳಿಗೆ ಸ್ವಾಮಿತ್ವದ ಹಕ್ಕುಗಳು ಮತ್ತು ವಾರಸುದಾರ ಹಕ್ಕುಗಳು ಇರಬೇಕು. ಹಣಕಾಸು ವಿಷಯಗಳಲ್ಲಿ ಅವರಿಗೂ ಬ್ಯಾಂಕಿನ ಸಾಲ, ಅಡಮಾನ ಮತ್ತಿತರ ಸಾಲದ ಹಕ್ಕುಗಳು ಇರುವಂತೆ ಸರ್ಕಾರ ಖಾತ್ರಿ ಪಡಿಸಬೇಕು.

2) ಅಂಗವಿಕಲರು ಜೀವನದ ಎಲ್ಲ ವಿಷಯಗಳಲ್ಲೂ, ಎಲ್ಲ ತರಹದಲ್ಲೂ, ಕಾನೂನು ರೀತ್ಯಾ ಸಮಾನ ಹಕ್ಕು ಮತ್ತು ಮಾನ್ಯತೆ ಹೊಂದುವಂತೆ ಸರ್ಕಾರ ಖಾತ್ರಿಪಡಿಸಬೇಕು.

3) ಯಾವುದೇ ಹಣಕಾಸು, ಆಸ್ತಿ ಅಥವಾ ಆರ್ಥಿಕ ವಿಷಯದಲ್ಲಿ ಅಂಗವಿಕಲ ವ್ಯಕ್ತಿ ಮತ್ತು ಅವರನ್ನು ನೋಡಿಕೊಳ್ಳುವ (ಆಸರೆ ನೀಡುವ) ವ್ಯಕ್ತಿಯ ನಡುವೆ ಹಿತಾಸಕ್ತಿಯ ಘರ್ಷಣೆ ಉಂಟಾದರೆ ಆಸರೆ ನೀಡುವ ವ್ಯಕ್ತಿ ಆ ವಿಷಯದಲ್ಲಿ ಹಿಂದೆ ಸರಿದು ತಟಸ್ಥರಾಗಿ ಉಳಿಯಬೇಕು.

ಆದರೆ ಆಸರೆ ನೀಡುವ ವ್ಯಕ್ತಿ ಅಂಗವಿಕಲ ವ್ಯಕ್ತಿಗೆ ರಕ್ತದ ಮೂಲಕ, ದತ್ತು ಮೂಲಕ ಅಥವಾ ಇನ್ನ್ಯಾವುದೇ ರೀತಿಯಲ್ಲಿ ಸಂಬಂಧಿಕರಾದ ಮಾತ್ರಕ್ಕೆ ಅವರ ಹಿತಾಸಕ್ತಿಗಳಲ್ಲಿ ಘರ್ಷಣೆ ಇದೆ ಎಂಬ ಪೂರ್ವಗ್ರಹಿಕೆ ಇಟ್ಟುಕೊಳ್ಳುವ ಹಾಗಿಲ್ಲ.

4) ಅಂಗವಿಕಲ ವ್ಯಕ್ತಿ, ತನ್ನ ಇಚ್ಛೆಯಂತೆ, ಯಾವುದೇ ಆಸರೆ ನೀಡುವ ವ್ಯಕ್ತಿಯೊಡನೆಯ ಏರ್ಪಾಡು/ವ್ಯವಸ್ಥೆ/ವ್ಯವಹಾರವನ್ನು ಬದಲಾಯಿಸಿ ಬೇರೆಯವರೊಡನೆ ಆಸರೆ/ಸಹಾಯದ ಏರ್ಪಾಡು ಮಾಡಿಕೊಳ್ಳಬಹುದು.

ಆದರೆ, ಇಂತಹ ವ್ಯವಸ್ಥೆ/ವ್ಯವಹಾರದ ಏರ್ಪಾಡಿನಲ್ಲಿನ ಬದಲಾವಣೆ ಮುಂದೆ ಆಗುವಂತಿರಬೇಕು. ಆವರೆಗೂ ನಡೆದು ಹೋಗಿರುವ ಅಂಗವಿಕಲ ವ್ಯಕ್ತಿ ಮೂರನೆಯವರೊಡನೆ ನಡೆಸಿರುವ ವ್ಯವಹಾರಗಳನ್ನು ಇಂತಹ ಬದಲಾವಣೆ ಬಾಧಿಸುವುದಿಲ್ಲ.

5) ಅಂಗವಿಕಲ ವ್ಯಕ್ತಿಗೆ ಆಸರೆ ನೀಡುವ ವ್ಯಕ್ತಿ ಎಂದೂ ಅವರ ಮೇಲೆ ಅನುಚಿತ ಪ್ರಭಾವ ಬೀರಬಾರದು ಮತ್ತು ಎಂದೂ ಅವರ ಸ್ವಾಯತ್ತತೆ, ಘನತೆ ಮತ್ತು ಗೋಪ್ಯತೆಯನ್ನು ಗೌರವಿಸಬೇಕು.

ದತ್ತು ಸಂಬಂಧಿ ವಿಷಯಗಳು

**14**. 1) ಇನ್ನ್ಯಾವುದೇ ಕಾನೂನಿನಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಏನೇ ಹೇಳಿದ್ದರೂ, ಈ ಕಾಯಿದೆ ಜಾರಿಗೆ ಬಂದ ನಂತರ ಯಾವುದೇ ಜಿಲ್ಲಾ ನ್ಯಾಯಾಲಯ ಅಥವಾ ಸರ್ಕಾರ ನೇಮಿಸಿರುವ ಅಧಿಕಾರಕ್ಕೆ,

ಯುಕ್ತ ಆಸರೆ/ಸಹಾಯ ನೇಮಿಸಿರುವ ಅಂಗವಿಕಲ ವ್ಯಕ್ತಿ ನಿರ್ದಿಷ್ಟ ವಿಷಯದಲ್ಲಿ ಕಾನೂನು ಬದ್ಧ ನಿರ್ಣಯ ತೆಗೆದುಕೊಳ್ಳಲು ಅಸಮರ್ಥ ಎನಿಸಿದರೆ, ಈ ವಿಷಯಕ್ಕೆ ಸೀಮಿತವಾಗಿ, ಅಂಗವಿಕಲ ವ್ಯಕ್ತಿಗೆ ಹೆಚ್ಚುವರಿ ಆಸರೆ/ಸಹಾಯ ನೀಡಬಲ್ಲ ಪಾಲಕರನ್ನು ಗೊತ್ತು ಮಾಡಬೇಕು. ಸದರಿ ಪಾಲಕರು ಅಂಗವಿಕಲ ವ್ಯಕ್ತಿಗೆ ತಿಳಿಯಪಡಿಸಿ, ಆತನ ಪರವಾಗಿ ಸರ್ಕಾರ ನಿಗದಿಪಡಿಸಿರುವ ರೀತಿಯಲ್ಲಿ ಕಾನೂನುಬದ್ಧ ನಿರ್ಣಯಗಳನ್ನು ತೆಗೆದುಕೊಳ್ಳಬಹುದು.

ಆದರೆ ಯಾವುದೇ ಅಂಗವಿಕಲ ವ್ಯಕ್ತಿಗೆ ಪದೇ ಪದೇ ಮೇಲೆ ಹೇಳಿದಂತೆ ಸೀಮಿತ ಅಧಿಕಾರವುಳ್ಳ ಪಾಲಕರನ್ನು ನೇಮಿಸಬೇಕಾಗಿ ಬಂದಲ್ಲಿ ಜಿಲ್ಲಾ ನ್ಯಾಯಾಲಯ ಅಥವಾ ಸರ್ಕಾರ ನೇಮಿಸಿರುವ ಅಧಿಕಾರ ಆ ಅಂಗವಿಕಲ ವ್ಯಕ್ತಿಗೆ ಅಗತ್ಯವಾಗಿರುವ ಆಸರೆ/ಸಹಾಯದ ಸ್ವರೂಪವನ್ನು ಪರಾಮರ್ಶಿಸಿ ಅವಶ್ಯವಾದ ಕ್ರಮವನ್ನು ತೆಗೆದುಕೊಳ್ಳಬಹುದು.

**ವಿವರಣೆ:** ಈ ಖಂಡದಲ್ಲಿ ಹೇಳಿರುವ **'ಸೀಮಿತವಾದ ಪಾಲಕರು'** ಎಂದರೆ ಅಂಗವಿಕಲ ವ್ಯಕ್ತಿ ಮತ್ತು ಪಾಲಕರು ಪರಸ್ಪರ ಹೊಂದಾಣಿಕೆ ಮತ್ತು ವಿಶ್ವಾಸದ ಮೇಲೆ ಜಂಟಿಯಾಗಿ ಯಾವುದೇ ನಿರ್ದಿಷ್ಟ ವಿಷಯ, ಸಮಯ ಮತ್ತು ನಿರ್ಧಾರಕ್ಕೆ ಸಂಬಂಧಪಟ್ಟಂತೆ ತೆಗೆದುಕೊಳ್ಳುವ ಜಂಟಿ ನಿರ್ಣಯಗಳು. ಈ ಏರ್ಪಾಡು ಅಂಗವಿಕಲ ವ್ಯಕ್ತಿಯ ಇಚ್ಛೆಯ ಮೇರೆಗೆ ಇರುವುದು.

2) ಈ ಕಾಯಿದೆ ಜಾರಿಗೆ ಬಂದ ನಂತರ ಇತರ ಕಾಯಿದೆಗಳಡಿಯಲ್ಲಿ ನೇಮಕಗೊಂಡಿರುವ ಅಂಗವಿಕಲ ವ್ಯಕ್ತಿಗಳ ಪಾಲಕರನ್ನು 'ಸೀಮಿತ ಪಾಲಕರು' ಎಂದು ಪರಿಗಣಿಸಲಾಗುವುದು.

3) ನಿಯಮಿತ ಅಧಿಕಾರಿ ನೇಮಿಸಿರುವ ಕಾನೂನಿನ ಪಾಲಕರ ವಿಷಯದಲ್ಲಿ ಅಂಗವಿಕಲ ವ್ಯಕ್ತಿಗೆ ಅಸಮಾಧಾನವಿದ್ದರೆ ಅವರು ರಾಜ್ಯ ಸರ್ಕಾರ ನೇಮಿಸಿರುವ ಮೇಲ್ಮನವಿ ಅಧಿಕಾರಕ್ಕೆ ಮನವಿ ಸಲ್ಲಿಸಬಹುದು.

ಆಸರೆಗೆ ಅಧಿಕಾರದ ನೇಮಕಾತಿ

**15**. 1) ಅಂಗವಿಕಲರಿಗೆ ಕಾನೂನಿನಲ್ಲಿ ನೀಡಲಾಗಿರುವ ಅರ್ಹತೆ, ಹಕ್ಕು ಬಾಧ್ಯತೆಗಳ ಬಗ್ಗೆ ಸಮೂಹದಲ್ಲಿ ಪ್ರಚಾರಪಡಿಸಿ ಅವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು, ಹಾಗೂ ಅಂಗವಿಕಲರು ಅವುಗಳನ್ನು ಪಡೆಯುವಂತೆ ಅನುವು ಮಾಡಿಕೊಡಲು ಸರ್ಕಾರ ಒಬ್ಬ ಅಥವಾ ಇನ್ನು ಹೆಚ್ಚಿನ ಸಂಖ್ಯೆಯ ಅಧಿಕಾರಿಗಳನ್ನು ನೇಮಿಸಬೇಕು.

2) ಮೇಲೆ 1) ನೆಯ ಖಂಡದಲ್ಲಿ ಹೇಳಿರುವ ಅಧಿಕಾರಗಳು ಸಂಸ್ಥೆಗಳ ಆಶ್ರಯಗಳಲ್ಲಿ ಇರಬಹುದಾದ ಅಂಗವಿಕಲರು ಮತ್ತು ಅಧಿಕ ಆಸರೆ ಅವಶ್ಯವಿರುವ ಅಂಗವಿಕಲರಿಗೆ ಸಲ್ಲಬೇಕಾದ ಹಕ್ಕುಗಳನ್ನು ಪಡೆಯಲು ಅಗತ್ಯವಾದ ಎಲ್ಲಾ ವ್ಯವಸ್ಥೆಯನ್ನು ಏರ್ಪಡಿಸಬೇಕು.

## ಅಧ್ಯಾಯ – 3

## ಶಿಕ್ಷಣ

ಶೈಕ್ಷಣಿಕ ಸಂಸ್ಥೆಗಳ ಬಾಧ್ಯತೆ

**16**. ಸರಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳಿಂದ ಧನ ಸಹಾಯ ಅಥವಾ ಮಾನ್ಯತೆ ಪಡೆದಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳೂ ಅಂಗವಿಕಲ ಮಕ್ಕಳಿಗೆ ಸಂಯೋಜಿತ ಶಿಕ್ಷಣ ನೀಡಲು ಪ್ರಯತ್ನಿಸಬೇಕು ಈ ನಿಟ್ಟಿನಲ್ಲಿ

i) ಶಿಕ್ಷಣ ಸಂಸ್ಥೆಗಳು ಅಂಗವಿಕಲ ಮಕ್ಕಳಿಗೆ ಭೇದಭಾವವಿಲ್ಲದೆ ಪ್ರವೇಶ ನೀಡಿ ಶಿಕ್ಷಣದೊಡನೆ ಇತರ ಮಕ್ಕಳಂತೆ ಕ್ರೀಡೆ, ಮನರಂಜನೆ ಇತ್ಯಾದಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕು.

ii) ಕಟ್ಟಡ, ಆವರಣ ಮತ್ತು ಎಲ್ಲ ಸ್ಥಳ ಮತ್ತು ಸೌಲಭ್ಯಗಳನ್ನು ಅಂಗವಿಕಲ ಮಕ್ಕಳು ಅಡಚಣೆ ಇಲ್ಲದೆ ಬಳಸುವಂತೆ ಏರ್ಪಾಡು ಮಾಡಬೇಕು.

iii) ಅಂಗವಿಕಲ ಮಕ್ಕಳ ಅಗತ್ಯಕ್ಕೆ ತಕ್ಕಂತೆ ಯುಕ್ತ ಏರ್ಪಾಡು ಮಾಡಬೇಕು.

iv) ಅಂಗವಿಕಲ ಮಕ್ಕಳು ಇತರೊಡನೆ ಸಂಪೂರ್ಣವಾಗಿ ಬೆರೆಯಲು ಮತ್ತು ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಗರಿಷ್ಠ ಮಟ್ಟಕ್ಕೇರಿಸಲು ಅಗತ್ಯವಾದ ಆಸರೆಗಳ ಏರ್ಪಾಡು ಮತ್ತು ಪರಿಸರವನ್ನು ಕಲ್ಪಿಸಬೇಕು.

v) ಕುರುಡು ಮತ್ತು ಕಿವುಡು ಹಾಗೂ ಎರಡೂ ವಿಕಲತೆ ಇರುವ ಮಕ್ಕಳಿಗೆ ಶಿಕ್ಷಣ ಅವರಿಗೆ ಅತ್ಯಂತ ಸೂಕ್ತವಾದ ಭಾಷೆ ಮತ್ತು ಸಂವಹನಾ ಮಾದರಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು.

vi) ಕಲಿಕೆ ತೊಂದರೆ ಇರುವ ಮಕ್ಕಳ ತೊಂದರೆಗಳನ್ನು ಆದಷ್ಟು ಬೇಗ ಗುರುತಿಸಿ ಅದನ್ನು ನಿವಾರಿಸಲು ಅಗತ್ಯವಾದ ಶೈಕ್ಷಣಿಕ ಮತ್ತು ಇತರ ಕ್ರಮಗಳನ್ನು ತೆಗೆದುಕೊಳ್ಳಬೇಕು.

vii) ಪ್ರತಿಯೊಂದು ಅಂಗವಿಕಲ ಮಗುವಿನ ಭಾಗವಹಿಸುವಿಕೆ ಶೈಕ್ಷಣಿಕ ಪ್ರಗತಿ ಮತ್ತು ಶಿಕ್ಷಣ ಪೂರ್ಣಗೊಳ್ಳುವ (ತೇರ್ಗಡೆ) ಮೇಲೆ ನಿಗಾ ಇಡಬೇಕು.

viii) ಅಂಗವಿಕಲ ಮಕ್ಕಳಿಗೆ ಹಾಗೂ ಅಧಿಕ ಆಸರೆ ಅವಶ್ಯವಿರುವ ಅಂಗವಿಕಲ ಮಕ್ಕಳೊಡನೆ ಅವರ ಪಾಲಕರಿಗೂ ಸಾರಿಗೆ ಏರ್ಪಾಡು ಮಾಡಬೇಕು.

ಸಂಯೋಜಿತ ಶಿಕ್ಷಣ ಪ್ರೋತ್ಸಾಹಕ್ಕೆ ಕ್ರಮಗಳು

**17.** ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಸೆಕ್ಷನ್ 16ರಲ್ಲಿ ಉಲ್ಲೇಖಿಸಿರುವ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕು:

ಎ) ಪ್ರತಿ ಐದು ವರ್ಷಗಳಿಗೊಮ್ಮೆ ಎಲ್ಲಾ ಶಾಲಾ ಮಕ್ಕಳ ಸಮೀಕ್ಷೆ ನಡೆಸಿ ಅಂಗವಿಕಲ ಮಕ್ಕಳನ್ನು ಗುರುತಿಸಿ, ಅವರ ವಿಶೇಷ ಅಗತ್ಯಗಳನ್ನು ಕಂಡುಹಿಡಿದು ಅವು ಎಷ್ಟರ ಮಟ್ಟಿಗೆ ಪೂರೈಸಲ್ಪಡುತ್ತಿವೆ ಎಂದು ತಿಳಿದುಕೊಳ್ಳಬೇಕು;

ಈ ಕಾಯಿದೆ ಜಾರಿಗೆ ಬಂದ ಎರಡು ವರ್ಷದೊಳಗೆ ಇಂತಹ ಸಮೀಕ್ಷೆಯನ್ನು ಮಾಡಬೇಕು.

ಬಿ) ಸಾಕಷ್ಟು ಶಿಕ್ಷಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು;

ಸಿ) ಅಂಗವಿಕಲತೆ ಇರುವ ಶಿಕ್ಷಕರು, ಸಾಂಕೇತಿಕ ಭಾಷೆ, ಬ್ರೇಲ್ ಲಿಪಿ ಹಾಗೂ ಬೌದ್ಧಿಕ ತೊಂದರೆ ಇರುವ ಮಕ್ಕಳಿಗೆ ಕಲಿಸುವ ತರಬೇತಿ ಪಡೆದಿರುವ ಶಿಕ್ಷಕರನ್ನು ತರಬೇತುಗೊಳಿಸಿ ನಿಯೋಜಿಸ (ನೌಕರಿಗೆ ತೆಗೆದುಕೊಳ್ಳ) ಬೇಕು;

ಡಿ) ವೃತ್ತಿಪರರು ಹಾಗೂ ಸಿಬ್ಬಂದಿ ವರ್ಗದವರನ್ನು ತರಬೇತುಗೊಳಿಸಿ ಶಾಲೆಯಲ್ಲಿ ಪ್ರತಿ ಹಂತದಲ್ಲೂ ಸಂಯೋಜಿತ ಶಿಕ್ಷಣ ನಡೆಯುವಂತೆ ಸೌಕರ್ಯ ಮಾಡಬೇಕು;

ಇ) ಸಾಕಷ್ಟು ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಶಾಲೆಗಳಿಗೆ ಬೆಂಬಲ ನೀಡುವಂತೆ ಮಾಡಬೇಕು;

ಎಫ್) ಬ್ರೇಲ್ ಮತ್ತು ಸಾಂಕೇತಿಕ ಭಾಷೆಯನ್ನು ಬಳಸಲು ಪ್ರೋತ್ಸಾಹ ನೀಡಬೇಕು. ಮಾತು, ಸಂವಹನೆ ಅಥವಾ ಭಾಷಾ ದೋಷಗಳಿರುವ ವ್ಯಕ್ತಿಗಳು/ಮಕ್ಕಳು ತಮ್ಮ ದೈನಂದಿನ ಸಂವಾದ ಮತ್ತು ಸಂಭಾಷಣಾ ಅಗತ್ಯಗಳಿಗೆ ಮತ್ತು ಅವರು ಸಮೂಹ ಮತ್ತು ಸಮಾಜದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು, ಸೂಕ್ತ ಸಂವಹನಾ ವರ್ಧಕ ಮತ್ತು ಪರ್ಯಾಯ ನಮೂನೆಗಳನ್ನು ಹಾಗೂ ವಿಧಾನಗಳನ್ನು ಏರ್ಪಡಿಸಬೇಕು;

ಜಿ) ಅಂಗವಿಕಲ ವಿದ್ಯಾರ್ಥಿಗಳಿಗೆ ಪುಸ್ತಕಗಳು ಮತ್ತಿತರ ಕಲಿಕಾ ಸಾಮಗ್ರಿ ಹಾಗೂ ಸಹಾಯಕ ಯಂತ್ರಗಳನ್ನು 18 ವರ್ಷಗವರೆಗೂ ಉಚಿತವಾಗಿ ನೀಡಬೇಕು;

ಹೆಚ್) ಅಗತ್ಯವಿದ್ದಲ್ಲಿ, ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಬೇಕು;

ಐ) ಅಂಗವಿಕಲ ವಿದ್ಯಾರ್ಥಿಗಳಿಗೆ ಅಗತ್ಯವಿದ್ದಂತೆ ಪರೀಕ್ಷೆಯಲ್ಲಿ ಹೆಚ್ಚಿನ ಸಮಯ ನೀಡಬೇಕು ಮತ್ತು ಪಠ್ಯ ಕ್ರಮದಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಬೇಕು. ಪರೀಕ್ಷೆಯಲ್ಲಿ ಬರೆಯುವವರನ್ನು (ಲಿಪಿಕಾರರನ್ನು) ಒದಗಿಸಬೇಕು. ಎರಡನೆಯ ಅಥವಾ ಮೂರನೆಯ ಭಾಷೆ ಕಲಿಯುವುದರಲ್ಲಿ ಮನ್ನಾ ನೀಡಬೇಕು;

ಜೆ) ಕಲಿಕೆ ಉತ್ತಮಗೊಳಿಸಲು ಸಂಶೋಧನೆ; ಮತ್ತು

ಕೆ) ಇನ್ನಾವುದೇ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಬೇಕು.

ವಯಸ್ಕರ ಶಿಕ್ಷಣ

**18.** ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವಯಸ್ಕರ ಶಿಕ್ಷಣ ಹಾಗೂ ಮುಂದುವರೆದ ಶಿಕ್ಷಣ ನೀಡಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಮತ್ತು ಇತರರಂತೆಯೇ ಅವರೂ ಅದರಲ್ಲಿ ಭಾಗವಹಿಸಲು ಅಗತ್ಯವಾದ ಪ್ರೋತ್ಸಾಹ ಮತ್ತು ರಕ್ಷಣೆಯನ್ನು ಕೊಡಬೇಕು.

## ಅಧ್ಯಾಯ-4
## ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ

ವೃತ್ತಿಪರ ತರಬೇತಿ ಮತ್ತು ಸ್ವ-ಉದ್ಯೋಗ

**19**. (1) ಸರ್ಕಾರ ಅಂಗವಿಕಲರಿಗೆ ವೃತ್ತಿಪರ ತರಬೇತಿಗಳನ್ನು ಪಡೆಯಲು ಮತ್ತು ಸ್ವಂತ ಉದ್ಯೋಗ ಮಾಡಲು ಕಾರ್ಯಕ್ರಮ ಮತ್ತು ಯೋಜನೆಗಳನ್ನು ರೂಪಿಸಿ ಹಾಗೂ ಅಗತ್ಯವಿದ್ದಲ್ಲಿ ಅವರಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಬೇಕು ಮತ್ತು ಸಾಲ ಸೌಲಭ್ಯವನ್ನು ಕಲ್ಪಿಸಬೇಕು.

(2)ಮೇಲೆ ಹೇಳಿದಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಕೆಳಕಂಡ ಅಂಶಗಳು ಇರಬೇಕು.

ಎ) ಮುಖ್ಯವಾಹಿನಿಯ ಎಲ್ಲಾ ಔಪಚಾರಿಕ, ಅನೌಪಚಾರಿಕ, ವೃತ್ತಿಪರ ಹಾಗೂ ಕೌಶಲ್ಯ ತರಬೇತಿ ಯೋಜನೆಗಳಲ್ಲಿ ಅಂಗವಿಕಲರೂ ಸೇರುವಂತೆ ಏರ್ಪಾಡು ಇರಬೇಕು;

ಬಿ) ಅಂಗವಿಲಕರಿಗೆ ಅಗತ್ಯವಾದ ಸಹಾಯ ಮತ್ತು ಸೌಕರ್ಯಗಳು ಇರುವಂತೆ ನೋಡಿಕೊಳ್ಳಬೇಕು.

ಸಿ) ಶಾರೀರಿಕ ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಕುಂಠಿತವಾಗಿರುವವರು, ಬಹುವಿಧ ಅಂಗವಿಕಲತೆ ಇರುವವರು ಮತ್ತು ಅಂತರ್ಮುಖಿಗಳಿಗೆ ಪ್ರತ್ಯೇಕವಾದ ಕೌಶಲ್ಯ ತರಬೇತಿಗಳನ್ನು ಏರ್ಪಡಿಸಿ ಅವರಿಗೆ  ಪ್ರತ್ಯೇಕವಾದ ಮಾರುಕಟ್ಟೆ ವ್ಯವಸ್ಥೆಯನ್ನು ಏರ್ಪಡಿಸಬೇಕು;

ಡಿ) ರಿಯಾಯಿತಿ ದರದಲ್ಲಿ ಸಾಲ ಮತ್ತು ಕಿರುಸಾಲದ ವ್ಯವಸ್ಥೆ;

ಇ) ಅಂಗವಿಕಲರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ; ಮತ್ತು

ಎಫ್) ಕೌಶಲ್ಯ ತರಬೇತಿ ಮತ್ತು ಸ್ವಂತ ಉದ್ಯೋಗಗಳಲ್ಲಿ ಅಂಗವಿಕಲರು ಮತ್ತು ಇತರರು ಎಷ್ಟು ಪ್ರಗತಿ ಹೊಂದುತ್ತಿದ್ದಾರೆ ಎಂಬುದರ ಬಗ್ಗೆ ಪ್ರತ್ಯೇಕವಾದ ವಿವರಗಳ ಮಾಹಿತಿಯನ್ನು ಇಟ್ಟುಕೊಳ್ಳಬೇಕು.

ಉದ್ಯೋಗದಲ್ಲಿ ಅಂಗವಿಕಲರ ವಿರುದ್ಧ ಭೇದಭಾವ ಸಲ್ಲದು

**20**. 1) ಸರ್ಕಾರಿ ಸ್ಥಾಪನೆಗಳು ನೌಕರಿ/ಉದ್ಯೋಗದ ವಿಷಯದಲ್ಲಿ ಅಂಗವಿಕಲರ ವಿರುದ್ಧ ಭೇದಭಾವ ಮಾಡಲಾಗದು,

ಆದರೆ ಸ್ಥಾಪನೆಯಲ್ಲಿ ನಡೆಯುವ ಕೆಲಸ  ಕಾರ್ಯಗಳ ಸ್ವರೂಪವನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಅಲ್ಲಿ ಅಂಗವಿಕಲರ ನೌಕರಿಯ ಬಗ್ಗೆ ವಿಶೇಷ ಶರತ್ತುಗಳನ್ನು ವಿಧಿಸಬಹುದು ಅಥವಾ ಮೇಲೆ ಹೇಳಿದ ನಿಯಮದಿಂದ ಆ ಸ್ಥಾಪನೆಗೆ ವಿನಾಯಿತಿ ನೀಡಬಹುದು.

2) ಎಲ್ಲಾ ಸರ್ಕಾರಿ ಸ್ಥಾಪನೆಗಳಲ್ಲೂ ಅಂಗವಿಕಲರಿಗೆ ಯುಕ್ತ ಸೌಕರ್ಯ ಏರ್ಪಡಿಸಬೇಕು ಮತ್ತು ಯುಕ್ತ, ಅಡಚಣೆರಹಿತ ಪರಿಸರವನ್ನು ಕಲ್ಪಿಸಬೇಕು.

3) ನೌಕರರಿಗೆ ಅಂಗವಿಕಲತೆಯ ಕಾರಣಕ್ಕಾಗಿ ಬಡ್ತಿಯನ್ನು ನಿರಾಕರಿಸಲಾಗುವುದು.

4) ಉದ್ಯೋಗದ ಅವಧಿಯಲ್ಲಿ ಉದ್ಯೋಗಿಗೆ ಅಂಗವಿಕಲತೆ ಉಂಟಾದರೆ ಅವರನ್ನು ಕೆಲಸದಿಂದ ತೆಗೆದು ಹಾಕುವಂತಿಲ್ಲ ಅಥವಾ ಹಿಂಬಡ್ತಿ ಮಾಡುವಂತಿಲ್ಲ.

(ಅಪವಾದ 1) ಆದರೆ ಉದ್ಯೋಗಿಗೆ ಅಂಗವಿಕಲತೆ ಉಂಟಾದ ನಂತರ ಅವರ ಪದವಿಯಲ್ಲಿನ ಕೆಲಸ ನಿಭಾಯಿಸಲು ಆಗದಿದ್ದರೆ ಅವರನ್ನು ಅದೇ ವೇತನ ಮತ್ತು ಸೌಲಭ್ಯಗಳುಳ್ಳ ಇತರ ಸೂಕ್ತ ಪದವಿಗೆ ವರ್ಗಾಯಿಸಬಹುದು.

(ಅಪವಾದ 2) ಮೇಲೆ ಹೇಳಿದಂತೆ, ಸೂಕ್ತ ಮತ್ತು ಸಮಾನ ಪದವಿಯಲ್ಲಿ ಅಳವಡಿಸಲು ಆಗದಿದ್ದರೆ ಅಂತಹ ಪದವಿ ತೆರವು ಆಗುವ ತನಕ ಅಥವಾ ಅವರ ನಿವೃತ್ತಿಯ ತನಕ ಅವರನ್ನು ಒಂದು ಹೆಚ್ಚುವರಿ ಪದವಿಯಲ್ಲಿ ಇರಿಸಬೇಕು.

5) ಸರ್ಕಾರ ಅಂಗವಿಕಲ ಉದ್ಯೋಗಿಗಳ ನಿಯುಕ್ತಿ ಮತ್ತು ವರ್ಗಾವಣೆಗೆ ವಿಶೇಷ ಕಾರ್ಯನೀತಿಯನ್ನು ರೂಪಿಸಬಹುದು.

ಸಮಾನ ಅವಕಾಶಗಳ ನೀತಿ

**21**. 1) ಎಲ್ಲಾ ಸ್ಥಾಪನೆಗಳೂ ಈ ಅಧ್ಯಾಯದಲ್ಲಿ ಸರ್ಕಾರ ನಿಗದಿಸಿರುವಂತೆ ಅಂಗವಿಕಲರಿಗೆ ಸಮಾನ ಅವಕಾಶ ನೀಡುವ ನಿಟ್ಟಿನಲ್ಲಿ ಏನು ಕಾರ್ಯ ನೀತಿಯನ್ನು ರೂಪಿಸಿವೆ ಎಂಬುದನ್ನು ಪ್ರಕಟಿಸಬೇಕು.

2) ಪ್ರತಿಯೊಂದು ಸ್ಥಾಪನೆಯೂ ಮೇಲೆ ಹೇಳಿದ ಕಾರ್ಯ ನೀತಿಯ ಪ್ರತಿಯನ್ನು ಕೇಂದ್ರದಲ್ಲಿನ ಮುಖ್ಯ ಆಯುಕ್ತರ ಬಳಿ ಅಥವಾ ಆಯಾ ರಾಜ್ಯದ ಆಯುಕ್ತರ ಬಳಿ ನೋಂದಾಯಿಸಬೇಕು.

ದಾಖಲೆಗಳ ನಿರ್ವಹಣೆ

**22)** 1) ಪ್ರತಿಯೊಂದು ಸ್ಥಾಪನೆಯೂ ಅದರ ಅಂಗವಿಕಲ ನೌಕರರ ಉದ್ಯೋಗಕ್ಕೆ ಸಂಬಂಧಪಟ್ಟ ವಿಷಯಗಳು, ಅವರಿಗೆ ಒದಗಿಸುತ್ತಿರುವ ಸೌಕರ್ಯಗಳು ಇತ್ಯಾದಿಯನ್ನು ಈ ಅಧ್ಯಾಯದ ಕಲಂಗಳು ವಿಧಿಸಿರುವ ಪ್ರಕಾರ ಇವೆಯೇ ಎಂದು ತಿಳಿಸಲು ಕೇಂದ್ರ ಸರ್ಕಾರ ನಿಗದಿಸಿರುವ ರೀತಿ ಮತ್ತು ನಮೂನೆಯಲ್ಲಿ ದಾಖಲೆಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿರಬೇಕು.

2) ಎಲ್ಲಾ ಉದ್ಯೋಗ ವಿನಿಯಮ ಕೇಂದ್ರಗಳಲ್ಲೂ ಉದ್ಯೋಗ ಅರಸುತ್ತಿರುವ ಅಂಗವಿಕಲರ ಬಗ್ಗೆ ಮಾಹಿತಿ ಇರಬೇಕು.

3) ಮೇಲೆ ಹೇಳಿದ ದಾಖಲೆಗಳು ಸಾಮಾನ್ಯವಾದ ಕೆಲಸದ ವೇಳೆಗಳಲ್ಲಿ ಅಂಗವಿಕಲರು ಮತ್ತು ಸರ್ಕಾರ ಅವರ ಪರವಾಗಿ ನೇಮಿಸಿರುವ ವ್ಯಕ್ತಿಗಳು ವೀಕ್ಷಿಸಲು ಅವಕಾಶವಿರಬೇಕು.

ಕುಂದು ಕೊರತೆಗಳ ದೂರುಗಳನ್ನು ಸ್ವೀಕರಿಸಲು ಅಧಿಕಾರಿಗಳ ನೇಮಕಾತಿ

**23**. 1) ಎಲ್ಲಾ ಸರ್ಕಾರಿ ಸ್ಥಾಪನೆಗಳಲ್ಲೂ, ಸೆಕ್ಷನ್ 19ರಲ್ಲಿ ಉದ್ದೇಶಿಸಿರುವಂತೆ, ಕುಂದು ಕೊರತೆಗಳ ನಿವಾರಣೆಗೆಂದು ಅಧಿಕಾರಿಯನ್ನು ನೇಮಿಸಬೇಕು ಮತ್ತು ಅವರ ನೇಮಕಾತಿಯ ಬಗ್ಗೆ ಕೇಂದ್ರದ ಮುಖ್ಯ ಆಯುಕ್ತರು ಮತ್ತು ಆಯಾ ರಾಜ್ಯದ ಆಯುಕ್ತರಿಗೆ ತಿಳಿಸಬೇಕು.

2) ಮೇಲಿನ ಸೆಕ್ಷನ್ 20 (4)ರ ಅಪವಾದಗಳಡಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಯಾರಿಗಾದರೂ ಆಕ್ಷೇಪಣೆ ಇದ್ದರೆ ಅವರು ಕುಂದುಕೊರತೆ ನಿವಾರಣಾ ಅಧಿಕಾರಿಗೆ ದೂರು ನೀಡಬಹುದು. ಸದರಿ ಅಧಿಕಾರಿ ತನಿಖೆ ಮಾಡಿ ಅದರ ನಿವಾರಣೆಗೆ ಸ್ಥಾಪನೆಯ ಅಧಿಕಾರಿಗಳೊಡನೆ ಸಮಾಲೋಚಿಸಿ ಕ್ರಮ ತೆಗೆದುಕೊಳ್ಳಲು ಹೇಳಬೇಕು.

3) ಕುಂದು ನಿವಾರಣಾ ಅಧಿಕಾರಿ ಸರ್ಕಾರ ವಿಧಿಸಿರುವ ಮಾದರಿಯಲ್ಲಿ ಎಲ್ಲಾ ದೂರುಗಳ ದಾಖಲೆ ಇಡಬೇಕು ಮತ್ತು ದೂರು ನೀಡಿದ ಎರಡು ವಾರಗಳೊಳಗೆ ವಿಚಾರಣೆ ನಡೆಸಬೇಕು.

4) ದೂರು ನೀಡಿದ ಉದ್ಯೋಗಿಗೆ ದೂರಿನ ಬಗ್ಗೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ಅಸಮಾಧಾನ ಇದ್ದರೆ ಅವರು ಜಿಲ್ಲಾ ಮಟ್ಟದ ಅಂಗವಿಕಲರ ಸಮಿತಿಯ ಬಳಿ ಆ ದೂರನ್ನು ಒಯ್ಯಬಹುದು.

## ಅಧ್ಯಾಯ – 5

## ಸಾಮಾಜಿಕ ಭದ್ರತೆ, ಆರೋಗ್ಯ, ಪುನರ್ವಸತಿ ಮತ್ತು ಮನರಂಜನೆ

ಸಾಮಾಜಿಕ ಅಥವಾ ಆರ್ಥಿಕ ಭದ್ರತೆ

**24**. (1) ಸರ್ಕಾರ ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಗೆ ಅನುಗುಣವಾಗಿ, ಅಂಗವಿಕಲರು ಅವರ ಸಮೂಹದಲ್ಲಿ ಸ್ವತಂತ್ರವಾಗಿ ಜೀವನ ನಡೆಸಲು ಅಗತ್ಯವಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅಂಗವಿಕಲರ ಹಕ್ಕುಗಳನ್ನು ಸಮರ್ಥಿಸಬೇಕು.

ಆದರೆ ಅಂತಹ ಯೋಜನೆಯಡಿ ಅದೇ ವರ್ಗದ ಇತರರಿಗೆ ನೀಡುವ ಆರ್ಥಿಕ ಸಹಾಯಕ್ಕಿಂತ ಅಂಗವಿಕಲರಿಗೆ ಶೇ. 25 ರಷ್ಟು ಹೆಚ್ಚಿನ ಮೊತ್ತವನ್ನು ಕೊಡಬೇಕು.

(2) ಮೇಲೆ ಹೇಳಿದ ಯೋಜನೆ ಮತ್ತು ಕಾರ್ಯ ಕ್ರಮಗಳನ್ನು ರೂಪಿಸುವಾಗ ಸರ್ಕಾರ ನಾನಾ ವಿಧದ ಅಂಗವಿಕಲತೆಗಳು, ಲಿಂಗ, ವಯಸ್ಸು ಮತ್ತು ಸಾಮಾಜಿಕ ಹಾಗೂ ಆರ್ಥಿಕ ಮಟ್ಟವನ್ನು ಗಣನೆಗೆ ತೆಗೆದುಕೊಳ್ಳಬೇಕು.

(3) ಮೇಲಿನ ಖಂಡ (1)ರ ಅಡಿಯಲ್ಲಿ ರೂಪಿಸುವ ಯೋಜನೆಗಳಲ್ಲಿ ಈ ಕೆಳಗಿನವನ್ನು ಪೂರೈಸಬೇಕು.

ಎ) ಸಮೂಹ ಕೇಂದ್ರಗಳಿರಬೇಕು, ಈ ಕೇಂದ್ರಗಳು ಒಳ್ಳೆಯ ಗುಣಮಟ್ಟದ್ದಾಗಿದ್ದು, ಅಲ್ಲಿ ಸುರಕ್ಷೆ, ಶುಚಿತ್ವ, ಆರೋಗ್ಯ ಮತ್ತು ಆಪ್ತ ಸಲಹಾ ಸೇವೆಗಳು ಲಭ್ಯವಿರಬೇಕು.

ಬಿ) ಅನಾಥ ಅಥವಾ ಪರಿತ್ಯಕ್ತ ಅಂಗವಿಕಲ ಮಕ್ಕಳು ಮತ್ತು ಮನೆ, ವಸತಿ, ಜೀವನೋಪಾಯಗಳಿಲ್ಲದ, ದಿಕ್ಕು ದೆಸೆ ಇಲ್ಲದ ಅಂಗವಿಕಲರಿಗೆ ಸೌಕರ್ಯಗಳಿರುವ ಸ್ಥಳಗಳು;

ಸಿ) ಪ್ರಾಕೃತಿಕ ವಿಕೋಪ ಅಥವಾ ಜನಗಳಿಂದಾದ ವಿಪತ್ತು ಗಲಭೆ ಮುಂತಾದ ಸಂದರ್ಭದಲ್ಲಿ ಆಶ್ರಯ ಒದಗಿಸಬೇಕು;

ಡಿ) ಅಂಗವಿಕಲ ಮಹಿಳೆಯರ ಜೀವನೋಪಾಯಕ್ಕೆ ಮತ್ತು ಅವರ ಮಕ್ಕಳ ಪಾಲನೆಗೆ ಆಶ್ರಯ ತಾಣವಿರಬೇಕು;

ಇ) ಶುದ್ಧ ಕುಡಿಯುವ ನೀರು ಮತ್ತು ಅಡಚಣೆ ರಹಿತ ಸೌಕರ್ಯವಿರುವ ಶೌಚಾಲಯಗಳು ವಿಶೇಷವಾಗಿ, ನಗರಗಳ ಕೊಳಚೆ ಪ್ರದೇಶಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯವಾಗಬೇಕು;

ಎಫ್) ನಿಗದಿತ ಮೊತ್ತಕ್ಕೂ ಕಡಿಮೆಯಾದ ವರಮಾನ ಇರುವ ಅಂಗವಿಕಲರಿಗೆ ಉಚಿತವಾಗಿ ಸಾಧನ ಸಲಕರಣೆಗಳು, ಔಷಧಿ ಮತ್ತು ತಪಾಸಣಾ ವ್ಯವಸ್ಥೆ, ವಿಕಲತೆಯನ್ನು ಕಡಿಮೆ ಮಾಡುವ ಅಥವಾ ಸರಿಪಡಿಸುವ ಶಸ್ತ್ರ ಚಿಕಿತ್ಸೆ;

ಜಿ) ಆದಾಯಕ್ಕೆ ತಕ್ಕಂತೆ, ಸರ್ಕಾರಿ ಪ್ರಕಟಣೆಯ ಪ್ರಕಾರ ಅಂಗವಿಕಲರಿಗೆ ಪಿಂಚಣಿ;

ಹೆಚ್) ಉದ್ಯೋಗ ವಿನಿಯಮ ಕೇಂದ್ರದಲ್ಲಿ ನೋಂದಾಯಿಸಿದ ನಂತರ ಎರಡು ವರ್ಷಗಳಾದರೂ ಕೆಲಸ ದೊರೆಯದೇ ಇದ್ದ ಅಂಗವಿಕಲರಿಗೆ ನಿರುದ್ಯೋಗ ಭತ್ಯೆ;

ಐ) ಅಧಿಕ ಆಸರೆ ಅವಶ್ಯವಿರುವ ಅಂಗವಿಕಲರಿಗೆ ಪೋಷಕರ ಭತ್ಯೆ;

ಜೆ) ನೌಕರರ ವಿಮಾ ಯೋಜನೆ ಅಥವಾ ಇತರ ಕಾನೂನಿನ ಅನ್ವಯ ಸರ್ಕಾರಿ ವಿಮಾ ಯೋಜನೆಯ ವಿಮೆ ಇಲ್ಲದ ಅಂಗವಿಕಲರಿಗೆ ಪರ್ಯಾಪ್ತ ವಿಮಾ ಯೋಜನೆ; ಮತ್ತು

ಕೆ) ಸರ್ಕಾರದ ಅಭಿಪ್ರಾಯದಲ್ಲಿ ಅಗತ್ಯವೆನಿಸಿದ ಇತರ ವಿಷಯಗಳು.

**25**. 1) ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರಿಗೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಬೇಕು: ಆರೋಗ್ಯ ಸೇವೆ

ಎ) ಅಂಗವಿಕಲರ ಆದಾಯಕ್ಕನುಸಾರ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಉಚಿತ ಆರೋಗ್ಯ ಸೇವೆ;

ಬಿ) ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಹಾಗೂ ಆರೋಗ್ಯ ಸೇವಾ ಸಂಸ್ಥೆಗಳಲ್ಲಿ ಅಂಗವಿಕಲರ ಪ್ರವೇಶ ಮತ್ತು ಚಲನೆಗಳಿಗೆ ಎಲ್ಲೆಡೆ ಅಡಚಣೆ ರಹಿತ ವ್ಯವಸ್ಥೆ ಇರಬೇಕು;

ಸಿ) ಅಂಗವಿಕಲರಿಗೆ ಸೇವೆ ಮತ್ತು ಚಿಕಿತ್ಸೆಯಲ್ಲಿ ಆದ್ಯತೆ ಕೊಡಬೇಕು.

2) ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲತೆ ಬಾರದಂತೆ ತಡೆಗಟ್ಟಲು ಕೆಳಕಂಡ ಆರೋಗ್ಯ ಸೇವಾ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಎ) ಅಂಗವಿಕಲತೆಗೆ ಮೂಲ ಕಾರಣಗಳನ್ನು ಕಂಡುಹಿಡಿಯಲು ಸಮೀಕ್ಷೆ, ತಪಾಸಣೆ ಮತ್ತು ಸಂಶೋಧನೆ ನಡೆಸಬೇಕು;

ಬಿ) ಅಂಗವಿಕಲತೆಯನ್ನು ತಡೆಗಟ್ಟಲು ವಿವಿಧ ಉಪಾಯಗಳು;

ಸಿ) ಎಲ್ಲಾ ಮಕ್ಕಳನ್ನು ಕನಿಷ್ಠ ವರ್ಷಕ್ಕೊಮ್ಮೆಯಾದರೂ ತಪಾಸಣೆಗೆ ಒಳಪಡಿಸಿ ಅಂಗವಿಕಲತೆ ಸಂಭವಿಸಬಹುದಾದ ಮಕ್ಕಳನ್ನು ಗುರುತಿಸಿ ಅವರ ಮೇಲೆ ನಿಗಾ ಇಡಬೇಕು.

ಡಿ) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿಗೆ ಅಂಗವಿಕಲತೆಯನ್ನು ಪತ್ತೆ ಹಚ್ಚುವ ತರಬೇತಿಗಳನ್ನು ಏರ್ಪಡಿಸಬೇಕು;

ಇ) ಶುಚಿ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಲು ಜನ ಜಾಗೃತಿ ಆಂದೋಲನಗಳನ್ನು ನಡೆಸುತ್ತಿರಬೇಕು;

ಎಫ್) ಗರ್ಭಿಣಿ ಆಗಿರುವಾಗ, ಪ್ರಸೂತಿ ಸಮಯ ಹಾಗೂ ಬಾಣಂತಿ ಸಮಯದಲ್ಲಿ ಮಹಿಳೆಯರ ಆರೋಗ್ಯ ರಕ್ಷಣೆಗೆ ಕ್ರಮ ತೆಗೆದುಕೊಳ್ಳಬೇಕು.

ಜಿ) ಶಿಶು ಮಂದಿರ, ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ ಇವುಗಳ ಸಿಬ್ಬಂದಿ ಮತ್ತು ಗ್ರಾಮ ಸೇವಕರ ಮೂಲಕ ಜನಜಾಗೃತಿ ಮೂಡಿಸಬೇಕು.

ಹೆಚ್) ಟಿ.ವಿ ರೇಡಿಯೋ ಮತ್ತಿತರ ಸಮೂಹ ಮಾಧ್ಯಮಗಳ ಮೂಲಕ ಅಂಗವಿಕಲತೆಗೆ ಮೂಲ ಕಾರಣಗಳು ಮತ್ತು ಅವುಗಳನ್ನು ತಡೆಗಟ್ಟುವ ಉಪಾಯಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು

ಐ) ಪ್ರಾಕೃತಿಕ ವಿಕೋಪ ಮತ್ತು ಇತರ ವಿಪತ್ತಿನ ಸಮಯದಲ್ಲಿ ಆರೋಗ್ಯ ಸೇವೆ ಒದಗಿಸಬೇಕು.

ಜೆ) ಆಪತ್ಕಾಲದಲ್ಲಿ ಚಿಕಿತ್ಸೆ ಮತ್ತು ಶುಶ್ರೂಷೆಗೆ ಅಗತ್ಯವಾದ ವೈದ್ಯಕೀಯ ಸೇವೆಯನ್ನು ಒದಗಿಸಬೇಕು.

ಕೆ) ಅಂಗವಿಕಲ ಮಹಿಳೆಯರಿಗೆ ಲೈಂಗಿಕ ಮತ್ತು ಸಂತಾನೋತ್ಪತ್ತಿಯ ವಿಷಯಗಳಲ್ಲಿ ಆರೋಗ್ಯದ ಬಗ್ಗೆ ತಿಳಿಸಬೇಕು.

ವಿಮಾ ಯೋಜನೆ

**26**. ಸರ್ಕಾರದ ಅಂಗವಿಕಲ ನೌಕರರಿಗೆ ವಿಮಾ ಯೋಜನೆಯನ್ನು ಮಾಡಬೇಕು.

ಪುನರ್ವಸತಿ

**27**. ಸರ್ಕಾರದ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಆರ್ಥಿಕ ಸಾಮರ್ಥ್ಯಕ್ಕನುಸಾರ ಎಲ್ಲಾ ಅಂಗವಿಕಲರ ಪುನರ್ವಸತಿಗೆ, ವಿಶೇಷವಾಗಿ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗದ ಕ್ಷೇತ್ರಗಳಲ್ಲಿ ಸೇವಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅಥವಾ ಇತರರ ಮೂಲಕ ಇವೆಲ್ಲವನ್ನೂ ಮಾಡಿಸಬೇಕು.

ಸಂಶೋಧನೆ ಮತ್ತು ಅಭಿವೃದ್ಧಿ

**28**. ಅಂಗವಿಕಲರನ್ನು ಅಭಿವೃದ್ಧಿಗೊಳಿಸಿ ಸಬಲಗೊಳಿಸಲು ಅವಶ್ಯವಾದ ಅವರ ಸಾಮರ್ಥ್ಯವನ್ನು ಹೇಗೆ ಸಚೇತನಗೊಳಿಸುವುದು, ವೃದ್ಧಿಸುವುದು ಮತ್ತು ಪುನಃಶ್ಚೇತನಗೊಳಿಸುವುದು ಮುಂತಾದ ವಿಷಯಗಳಲ್ಲಿ ಸಂಶೋಧನೆ ಮಾಡಲು ಸರ್ಕಾರ ಸ್ವತಃ ಅಥವಾ ಇತರ ಸಂಸ್ಥೆಗಳು ಮತ್ತು ವ್ಯಕ್ತಿಗಳ ಮೂಲಕ ಕ್ರಮಗಳನ್ನು ಕೈಗೊಳ್ಳಬೇಕು.

ಸಂಸ್ಕೃತಿ ಮತ್ತು ವಿಹಾರ

**29**. ಅಂಗವಿಕಲರಿಗೆ, ಇತರರಂತೆಯೇ, ಸಾಂಸ್ಕೃತಿಕ ಮತ್ತು ವಿಹಾರ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಲು ಹಕ್ಕು ಇದ್ದು, ಇದನ್ನು ಸಂರಕ್ಷಿಸಲು ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ನಿಟ್ಟಿನಲ್ಲಿ

ಎ) ಅಂಗವಿಕಲ ಕಲಾಕಾರರು, ಲೇಖರಿಗೆ ಯುಕ್ತ ಸೌಕರ್ಯಗಳನ್ನು ಒದಗಿಸಬೇಕು. ಅವರ ಆಸಕ್ತಿ ಮತ್ತು ಪ್ರತಿಭೆಯನ್ನು ಪೋಷಿಸಲು ಅಗತ್ಯವಾದ ಹಣಕಾಸಿನ ವ್ಯವಸ್ಥೆ ಮಾಡಬೇಕು.

ಬಿ) ಅಂಗವಿಕಲರ ಇತಿಹಾಸದ ಬಗ್ಗೆ ಸಂಗ್ರಹಾಲಯಗಳನ್ನು ಸ್ಥಾಪಿಸಿ ಅವರ ಐತಿಹಾಸಿಕ ಅನುಭವದ ಬಗ್ಗೆ ಬೆಳಕು ಚೆಲ್ಲುವಂತೆ ಮಾಡಬೇಕು.

ಸಿ) ಕಲೆಗಳು ಅಂಗವಿಕಲರಿಗೆ ಎಟುಕುವಂತೆ ಮಾಡಬೇಕು.

ಡಿ) ಅವರ ವಿಹಾರ, ಕ್ರೀಡೆಗಳಿಗೆ ಸಂಘಗಳು ಮತ್ತು ಕೇಂದ್ರಗಳನ್ನು ಸ್ಥಾಪಿಸಬೇಕು.

ಇ) ಅಂಗವಿಕಲರಿಗೆ ಸ್ಕೌಟ್, ನೃತ್ಯ ಮತ್ತು ಕಲಾ ತರಗತಿಗಳು, ಹೊರಾಂಗಣ ಶಿಬಿರಗಳು ಮತ್ತು ಸಾಹಸ ಕ್ರೀಡೆಗಳಿಗೆ ಏರ್ಪಾಡು ಮಾಡಬೇಕು.

ಎಫ್) ಕಲೆ ಮತ್ತು ಸಾಂಸ್ಕೃತಿಕ ತರಬೇತಿಗಳಲ್ಲಿ ಅಂಗವಿಕಲರು ಪಾಲ್ಗೊಳ್ಳಲು ಅಡಚಣೆ ರಹಿತ ವ್ಯವಸ್ಥೆ ಮಾಡಬೇಕು.

ಜಿ) ವಿಹಾರ, ವಿನೋದ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಅಂಗವಿಕಲರು ಪಾಲ್ಗೊಳ್ಳಲು ಅಗತ್ಯವಾದ ತಂತ್ರಜ್ಞಾನ ಮತ್ತು ಸಾಧನಗಳನ್ನು ಅಭಿವೃದ್ಧಿಗೊಳಿಸಬೇಕು.

ಹೆಚ್) ಶ್ರವಣ ದೋಷ ಇರುವವರು ಟಿ.ವಿ. ಕಾರ್ಯಕ್ರಮಗಳನ್ನು ನೋಡಲು ಸಂಜ್ಞಾ ಭಾಷೆಯನ್ನು ಅಳವಡಿಸಬೇಕು.

**30**. (1) ಅಂಗವಿಕಲರು ಕ್ರೀಡೆಗಳಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳಲು ಅವಶ್ಯವಾದ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಕ್ರೀಡಾ ಚಟುವಟಿಕೆಗಳು

(2) ಕ್ರೀಡಾ ಅಧಿಕಾರಿಗಳು ನಿಯೋಜಿಸುವ ಚಟುವಟಿಕೆ ಮತ್ತು ಕಾರ್ಯಕ್ರಮಗಳಲ್ಲಿ ಅಂಗವಿಕಲರಿಗೆ ಪಾಲ್ಗೊಳ್ಳುವ ಹಕ್ಕು ಇದೆ. ಇದನ್ನು ಗುರುತಿಸಿ ಅಧಿಕಾರಿಗಳು ಅಂಗವಿಕಲರನ್ನು ಕ್ರೀಡೆಗಳಲ್ಲಿ ಸೇರಿಸಿಕೊಳ್ಳಲು ಅಗತ್ಯವಾದ ಅವಕಾಶಗಳನ್ನು ಕಲ್ಪಿಸಿ ಅವರ ಕ್ರೀಡಾ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ ಅಭಿವೃದ್ಧಿಗೊಳಿಸಬೇಕು.

(3) ಮೇಲಿನ ಎರಡು ಖಂಡಗಳಲ್ಲಿ ಹೇಳಿರುವುದಲ್ಲದೆ ಸರ್ಕಾರ ಮತ್ತು ಕ್ರೀಡಾ ಅಧಿಕಾರಿಗಳು ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕು:

ಎ) ಅಂಗವಿಕಲರು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅಭ್ಯಾಸ ಮತ್ತು ಪಠ್ಯ ಕ್ರಮಗಳು ಮತ್ತು ಕಾರ್ಯಕ್ರಮಗಳನ್ನು ಸೂಕ್ತವಾಗಿ ಮಾರ್ಪಡಿಸಬೇಕು.

ಬಿ) ಕ್ರೀಡಾ ಚಟುವಟಿಕೆಗಳಿಗೆಂದು ನಿರ್ಮಿಸುವ ಮೂಲ ಸೌಕರ್ಯಗಳನ್ನು ಅಂಗವಿಕಲರೂ ಪಾಲ್ಗೊಳ್ಳಲು ಆಗುವಂತೆ ಪುನರ್ ವಿನ್ಯಾಸ ಮಾಡಬೇಕು.

ಸಿ) ಎಲ್ಲಾ ವಿಧದ ಅಂಗವಿಕಲರ ಕ್ರೀಡಾ ಸಾಮರ್ಥ್ಯಮತ್ತು ಪ್ರತಿಭೆಗಳನ್ನು ಬೆಳೆಸಲು ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಬೇಕು.

ಡಿ) ಎಲ್ಲಾ ತರಹದ ಅಂಗವಿಕಲರೂ ಎಲ್ಲಾ ಕ್ರೀಡೆಗಳಲ್ಲೂ ಪಾಲ್ಗೊಳ್ಳಲು ಅನುವಾಗುವಂತೆ ಬಹು–ಐಂದ್ರಿಕ (ನೋಟ, ಸ್ಪರ್ಶ, ಶಬ್ಧ, ವಾಸನೆ) ಲಕ್ಷಣಗಳುಳ್ಳ/ಸೌಕರ್ಯಗಳುಳ್ಳ ಸಾಧನ ಸಲಕರಣೆಗಳನ್ನು ಒದಗಿಸಬೇಕು.

ಇ) ಅಂಗವಿಕಲರನ್ನು ಕ್ರೀಡೆಗಳಲ್ಲಿ ತರಬೇತುಗೊಳಿಸಲು ಅವಶ್ಯವಾಗುವಂತಹ ಅತ್ಯಾಧುನಿಕ ಕ್ರೀಡಾ ಸೌಕರ್ಯಗಳ ನಿರ್ಮಾಣಕ್ಕೆ ಹಣ ನೀಡಬೇಕು.

ಎಫ್) ಅಂಗವಿಕಲರಿಗೆ ವಿಶೇಷ ಕ್ರೀಡಾ ಸ್ಪರ್ಧೆಗಳನ್ನು ಪ್ರೋತ್ಸಾಹಿಸಿ ಮತ್ತು ಏರ್ಪಡಿಸಿ ಜಯ ಗಳಿಸಿದವರಿಗೂ ಮತ್ತು ಇತರರಿಗೂ ಪುರಸ್ಕಾರ ನೀಡುವ ವ್ಯವಸ್ಥೆ ಮಾಡಬೇಕು.

## ಅಧ್ಯಾಯ–6

## ಅಧಿಕ ಅಂಗವಿಕಲತೆ ಇರುವವರಿಗೆ ವಿಶೇಷ ಉಪಬಂಧಗಳು

2009ರ 35 **31**. (1) ಶೇ. 40% ಅಥವಾ ಇನ್ನೂ ಹೆಚ್ಚಿನ ಅಂಗವಿಕಲತೆ ಇರುವ 6 ರಿಂದ 18 ವರ್ಷದೊಳಗಿನ ವಿದ್ಯಾರ್ಥಿಗಳಿಗೆ, ಅವರ ಇಷ್ಟದಂತೆ, ಅವರ ಮನೆಗೆ ಹತ್ತಿರ ಇರುವ ಶಾಲೆ ಅಥವಾ ಇನ್ಯಾವುದೇ ವಿಶೇಷ ಶಾಲೆಗೆ ದಾಖಲೆ ಪಡೆದು ಉಚಿತ ಶಿಕ್ಷಣ ಪಡೆಯುವ ಹಕ್ಕು ಇರುತ್ತದೆ. ಇದಕ್ಕೆ ವಿರುದ್ಧವಾಗಿ ಸನ್ 2009ರ ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕುಗಳು ಕಾಯಿದೆಯಲ್ಲಿ ಇರಬಹುದಾದ ಉಪಬಂಧಗಳನ್ನು ಈ ಹಕ್ಕು ಮೀರಿ ನಿಲ್ಲುತ್ತದೆ. ಉಚಿತ ಶಿಕ್ಷಣ

(2) ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಮಕ್ಕಳಿಗೆ 18 ವರ್ಷಗಳವರೆಗೆ ಯುಕ್ತ ವಾತಾವರಣದಲ್ಲಿ ಉಚಿತ ಶಿಕ್ಷಣ ದೊರೆಯುವ ಏರ್ಪಾಡನ್ನು ಮಾಡಬೇಕು.

**32**. (1) ಸರ್ಕಾರಿ ಹಾಗೂ ಸರ್ಕಾರದಿಂದ ದೇಣಿಗೆ ಪಡೆಯುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳು ಅಂಗವಿಕಲರಿಗೆ ಕನಿಷ್ಠ 5% ಸ್ಥಳಾವಕಾಶವನ್ನು ಮೀಸಲಿರಿಸಬೇಕು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ

(2) ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಂಗವಿಕಲರಿಗೆ ಪ್ರವೇಶದ ವಯೋಮಿತಿಯಲ್ಲಿ ಐದು ವರ್ಷಗಳ ರಿಯಾಯಿತಿ ಇರುವುದು.

**33. ಸರಕಾರ :** (1) ತನ್ನ ಸ್ವಾಮ್ಯದ ಸಂಸ್ಥೆಗಳಲ್ಲಿ ಸೆಕ್ಷನ್ 34ರಲ್ಲಿ ಹೇಳಿರುವಂತೆ ಅಂಗವಿಕಲರಿಗೆ ಯಾವ ಯಾವ ಅಥವಾ ಎಂತಹ ಹುದ್ದೆಗಳನ್ನು ಮೀಸಲಿರಿಸಬಹುದು ಎಂದು ಗುರುತಿಸಿಡಬೇಕು. ಸರ್ಕಾರ ಅಂಗವಿಕಲರಿಗೆ ಮೀಸಲಿರಿಸ ಬಹುದಾದ ಹುದ್ದೆಗಳ ಗುರುತಿಸುವಿಕೆ

2) ಇಂತಹ ಹುದ್ದೆಗಳನ್ನು ಗುರುತಿಸಲು ಅಂಗವಿಕಲರ ಪ್ರಾತಿನಿಧ್ಯ ಇರುವ ತಜ್ಞರ ಸಮಿತಿಯನ್ನು ರಚಿಸಬೇಕು.

3) ಮೂರು ವರ್ಷಗಳಿಗೊಮ್ಮೆ, ಇಂತಹ ಹುದ್ದೆಗಳನ್ನು ಗುರುತಿಸುವ ಕಾರ್ಯವನ್ನು ಪುನರ್ ಪರಿಶೀಲನೆ ಮಾಡಬೇಕು

ಮೀಸಲಾತಿ

**34**. (1) ಸರ್ಕಾರಿ ಸ್ವಾಮ್ಯದ ಸ್ಥಾಪನೆಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ನೌಕರರ ಪ್ರತಿಯೊಂದು ವರ್ಗದಲ್ಲೂ ಶೇ.4ರಷ್ಟು ಹುದ್ದೆಗಳನ್ನು ಅಂಗವಿಕಲರಿಗೆ ನೀಡಬೇಕು. ಈ ಮೀಸಲಾತಿಯನ್ನು ಕೆಳಕಂಡಂತೆ ವಿಭಾಗಿಸಲಾಗಿದೆ.

ಎ) ದೃಷ್ಟಿ ಹೀನರು ಮತ್ತು ಮಂದ ದೃಷ್ಟಿಯವರಿಗೆ ಒಂದು ಪ್ರತಿಶತ.

ಬಿ) ಕಿವುಡು ಮತ್ತು ಶ್ರವಣ ದೋಷವುಳ್ಳವರಿಗೆ ಒಂದು ಪ್ರತಿಶತ.

ಸಿ) ಚಲನೆಯಲ್ಲಿ ನ್ಯೂನತೆ: ಇದರಲ್ಲಿ ಮೆದುಳುವಾತ, ಕುಷ್ಟ ರೋಗದಿಂದ ಗುಣವಾದವರು. ಕುಬ್ಜರು, ಆ್ಯಸಿಡ್ ದಾಳಿಗೆ ತುತ್ತಾದವರು, ಮಸ್ಕ್ಯುಲರ್ ಡಿಸ್‌ಟ್ರೋಫಿ (ನರವ್ಯೂಹದ ತೊಂದರೆಯಿಂದ ಮಾಂಸಖಂಡ, ಸ್ನಾಯುಗಳು ಅಶಕ್ಯವಾಗಿರುವವರು) ಇವರೆಲ್ಲರಿಗೂ ಸೇರಿ ಒಂದು ಪ್ರತಿಶತ.

(ಡಿ ಮತ್ತು ಇ) ಅಂತರ್ಮುಖಿ, ಬೌದ್ಧಿಕವಾಗಿ ಕುಂಠಿತವಾಗಿರುವವರು, ಕಲಿಕೆಯಲ್ಲಿ ತೊಂದರೆ, ಮಾನಸಿಕ, ಅಸ್ವಸ್ಥತೆ, ಇ) ಬಹು ವಿಧ ಅಂಗವಿಕಲತೆ, ಕುರುಡು – ಕಿವುಡರು ಇವೆಲ್ಲರಿಗೂ ಸೇರಿ ಒಂದು ಪ್ರತಿ ಶತ.

(ಅಪವಾದ 1) ಆದರೆ, ಬಡ್ತಿಯಲ್ಲಿ ಮೀಸಲಾತಿ ಸರ್ಕಾರ ಕಾಲ ಕಾಲಕ್ಕೆ ನೀಡುವ ಸೂಚನೆಗಳಂತೆ ಇರುತ್ತದೆ.

(ಅಪವಾದ 2) ಸರ್ಕಾರ, ಮುಖ್ಯ ಆಯುಕ್ತರು ಅಥವಾ ಆಯಾ ರಾಜ್ಯದ ಆಯುಕ್ತರೊಡನೆ ಸಮಾಲೋಚಿಸಿ, ಕೆಲವು ತರಹದ ಕೆಲಸಗಳನ್ನು ಪರಿಗಣಿಸಿ, ಅವುಗಳಿಗೆ ಸಂಬಂಧಪಟ್ಟಂತೆ ಶರತ್ತುಗಳನ್ನು ವಿಧಿಸಿ ನಿರ್ದಿಷ್ಟ ಸರ್ಕಾರಿ ಸ್ಥಾಪನೆಗೆ ಮೀಸಲಾತಿ ನಿಯಮದಿಂದ ವಿನಾಯಿತಿ ನೀಡುವ ಆದೇಶ ಹೊರಡಿಸಬಹುದು.

2) ಯಾವುದೇ ನೌಕರಿ ಭರ್ತಿ ಮಾಡುವ ಸಾಲಿನಲ್ಲಿ (ವರ್ಷದಲ್ಲಿ) ಅಂಗವಿಕಲರಿಗೆಂದು ಮೀಸಲು ಇರಿಸಿರುವ ಹುದ್ದೆಗಳಿಗೆ ಯೋಗ್ಯ ಅಂಗವಿಕಲ ಅಭ್ಯರ್ಥಿ ದೊರೆಯದಿದ್ದರೆ. ಆ ಮೀಸಲಾತಿಯನ್ನು ಮುಂದಿನ ವರ್ಷದಲ್ಲಿ ಮುಂದುವರೆಸಬೇಕು. ಒಂದು ವೇಳೆ ಎರಡನೆಯ ವರ್ಷವೂ ಯೋಗ್ಯ ಅಭ್ಯರ್ಥಿ ದೊರೆಕದಿದ್ದರೆ, ಸೆಕ್ಷನ್ 34 (1)ರಲ್ಲಿ ನಮೂದಿಸಿರುವ ಐದು ವರ್ಗಗಳ ಪೈಕಿ ಉಳಿದ ವರ್ಗಗಳಿಂದ ಅಂಗವಿಕಲ ಅಭ್ಯರ್ಥಿಯನ್ನು ಆಯ್ಕೆ ಮಾಡಬಹುದು. ಮೂರನೆಯ ನೌಕರಿ ಭರ್ತಿ ಮಾಡುವ ವರ್ಷದಲ್ಲೂ ಯೋಗ್ಯ ಅಂಗವಿಕಲರು ಯಾರೂ ಸಿಗದಿದ್ದರೆ (ಮಾತ್ರ) ಆ ನೌಕರಿಯನ್ನು ಅಂಗವಿಕಲರಲ್ಲದವರಿಗೆ ನೀಡಬಹುದು.

(ಅಪವಾದ) ಯಾವುದೇ ಸ್ಥಾಪನೆಯಲ್ಲಿ ಲಭ್ಯವಿರುವ ನೌಕರಿಗೆ ಮೇಲಿನ ವಿಂಗಡಣೆಯ ಪ್ರಕಾರ ಅಂಗವಿಕಲರನ್ನು ನೇಮಿಸಲು ಆಗದಿದ್ದರೆ ಐದು ವರ್ಗಗಳಲ್ಲಿನ ಅಭ್ಯರ್ಥಿಗಳನ್ನು, ಸರ್ಕಾರದ ಒಪ್ಪಿಗೆ ಪಡೆದು, ಅಂತರ್ ವಿನಿಮಯ (ಅದಲು ಬದಲು) ಮಾಡಬಹುದು.

3) ಸರ್ಕಾರ ಅಂಗವಿಕಲರನ್ನು ನೌಕರಿಗೆ ತೆಗೆದುಕೊಳ್ಳುವಾಗ ವಯೋಮಿತಿಯಲ್ಲಿ ವಿನಾಯಿತಿ ನೀಡಬಹುದು.

ಖಾಸಗಿ ಕ್ಷೇತ್ರದ ಉದ್ದಿಮೆದಾರರಿಗೆ ಉತ್ತೇಜನ

**35**. ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಅಭಿವೃದ್ಧಿ ಮತ್ತು ಆರ್ಥಿಕ ಸಾಮರ್ಥ್ಯಕ್ಕನುಸಾರವಾಗಿ, ಖಾಸಗಿ ಕ್ಷೇತ್ರದ ಉದ್ದಿಮೆದಾರರು ಮತ್ತು ಮಾಲೀಕರಿಗೆ ಅವರ ಸ್ಥಾಪನೆ/ ಸಂಸ್ಥೆಗಳಲ್ಲಿ ಅಂಗವಿಕಲರಿಗೆ ಕನಿಷ್ಟ 5% ನೌಕರಿ ನೀಡಲು ಉತ್ತೇಜನ ನೀಡಬೇಕು.

ವಿಶೇಷ ಉದ್ಯೋಗ ವಿನಿಮಯ ಕೇಂದ್ರ

**36**. ನಿಗದಿತ ತಾರೀಖಿನಿಂದ ಎಲ್ಲಾ ಸ್ಥಾಪನೆಗಳ ಮಾಲೀಕರು ತಮ್ಮ ಸ್ಥಾಪನೆಗಳಲ್ಲಿ ಅಂಗವಿಕಲರಿಗೆಂದು ಮೀಸಲಿರಿಸುವ ನೌಕರಿಗಳಲ್ಲಿ ತೆರವು ಆಗಿರುವ ಮತ್ತು ಆಗಲಿರುವ ಸ್ಥಾನಗಳ ಬಗ್ಗೆ ಮಾಹಿತಿಯನ್ನು ನಿಗದಿತ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ನೀಡುತ್ತಿರಬೇಕು ಎಂದು ಸರ್ಕಾರ ಆದೇಶ ನೀಡಬಹುದು. ಇಂತಹ ಆದೇಶವನ್ನು ಮಾಲೀಕರು ಪಾಲಿಸಬೇಕು.

37. ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರ ಏಳ್ಗೆಗಾಗಿ ಯೋಜನೆಗಳನ್ನು ಮಾಡಬೇಕು. ಈ ಕಾರ್ಯಕ್ರಮಗಳ ಮೂಲಕ

ವಿಶೇಷ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯ ಕ್ರಮಗಳು

ಎ) ಕೃಷಿ ಭೂಮಿ ಮತ್ತು ಕಾಣಿ ವಿತರಿಸುವಾಗ ಅಂಗವಿಕಲರಿಗೆ ಶೇ. 5ರಷ್ಟನ್ನು ಮೀಸಲಿರಿಸಬೇಕು. ಇದರಲ್ಲಿ ಅಂಗವಿಕಲ ಮಹಿಳೆಯರಿಗೆ ಆದ್ಯತೆ ನೀಡಬೇಕು.

ಬಿ) ಸರ್ಕಾರದ ವಿವಿಧ ದಾರಿದ್ರ್ಯ ನಿವಾರಣಾ ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಅಂಗವಿಕಲರಿಗೆ ಶೇ. 5ರಷ್ಟನ್ನು ಮೀಸಲಿರಿಸಬೇಕು. ಇದರಲ್ಲಿ ಅಂಗವಿಕಲ ಮಹಿಳೆಯರಿಗೆ ಆದ್ಯತೆ ನೀಡಬೇಕು.

ಸಿ) ವಸತಿ, ಆಶ್ರಯ, ಉದ್ಯೋಗ, ವ್ಯಾಪಾರ, ಉತ್ಪಾದನಾ ಕೇಂದ್ರ, ಮನರಂಜನಾ ಕೇಂದ್ರ ಇತ್ಯಾದಿಗಳಿಗೆ ಭೂಮಿ/ಕಾಣಿ ನೀಡುವಾಗ ಶೇ. 5ರಷ್ಟನ್ನು ಅಂಗವಿಕಲರಿಗೆ ಮೀಸಲಿರಿಸಬೇಕು ಮತ್ತು ಅದರಲ್ಲಿ ಅಂಗವಿಕಲ ಮಹಿಳೆಯರಿಗೆ ಆದ್ಯತೆ ನೀಡಬೇಕು.

## ಅಧ್ಯಾಯ – 7
## ಅಧಿಕ ಆಸರೆ ಅವಶ್ಯವಿರುವ ಅಂಗವಿಕಲರಿಗೆ ವಿಶೇಷ ನಿಯಮಗಳು

38. 1) ಯಾವುದೇ ಅಂಗವಿಕಲ ವ್ಯಕ್ತಿಗೆ ತನಗೆ ಅಧಿಕ ಆಸರೆಯ ಅಗತ್ಯವಿದೆ ಎಂದೆನಿಸಿದರೆ, ಅವರು ಅಥವಾ ಅವರ ಪರವಾಗಿ ಇತರ ವ್ಯಕ್ತಿ ಅಥವಾ ಸಂಸ್ಥೆ, ಅವರಿಗೆ ಇಂತಹ ಅಗತ್ಯವಿದೆ ಎಂದು ಕೋರಿ, ಸರ್ಕಾರ ಅದಕ್ಕೆಂದೇ ನೇಮಿಸಿರುವ ಅಧಿಕಾರಿಗಳಿಗೆ, ಅರ್ಜಿ ಸಲ್ಲಿಸಬಹುದು.

ಅಧಿಕ ಆಸರೆ ಅವಶ್ಯವಿರುವ ಅಂಗವಿಕಲರಿಗೆ ವಿಶೇಷ ನಿಯಮಗಳು

2) ಮೇಲೆ ಹೇಳಿದಂತೆ ಅರ್ಜಿ ಸಲ್ಲಿಸಿದಾಗ ಸದರಿ ಅಧಿಕಾರಿ ಸರ್ಕಾರ ನಿಗದಿಸಿರುವಂತಹ ಸದಸ್ಯರಿರುವ ನಿರ್ಣಾಯಕ ಮಂಡಳಿಗೆ ಆ ಅರ್ಜಿಯನ್ನು ಒಪ್ಪಿಸಬೇಕು.

3) ನಿರ್ಣಾಯಕ ಮಂಡಳಿ ಸರ್ಕಾರ ನಿಗದಿಪಡಿಸಿರುವಂತೆ ಅರ್ಜಿಯನ್ನು ಪರಾಮರ್ಶಿಸಿ ಅಂಗವಿಕಲ ವ್ಯಕ್ತಿಗೆ ಎಂತಹ ಮತ್ತು ಎಷ್ಟು ಆಸರೆಯ ಅಗತ್ಯವಿದೆ ಎಂದು ವರದಿ ಒಪ್ಪಿಸಬೇಕು.

4) ಮೇಲೆ (3) ರಲ್ಲಿ ಹೇಳಿದ ವರದಿ ತಲುಪಿದ ಬಳಿಕ ಸದರಿ ಅಧಿಕಾರಿ ಸರ್ಕಾರದ ಆದೇಶ ಮತ್ತು ಯೋಜನೆಗಳ ಪ್ರಕಾರ ವರದಿಯಲ್ಲಿ ಹೇಳಿರುವಂತಹ ಆಸರೆಯ ಏರ್ಪಾಡು ಮಾಡಬೇಕು.

## ಅಧ್ಯಾಯ – 8
## ಸರ್ಕಾರಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

39. (1) ಅಂಗವಿಕಲರಿಗೆ ಈ ಕಾಯಿದೆ ನೀಡಿರುವ ಹಕ್ಕುಗಳನ್ನು ಸಂರಕ್ಷಿಸಲು ಸರ್ಕಾರ ಮುಖ್ಯ ಹಾಗೂ ಆಯಾ ರಾಜ್ಯದ ಆಯುಕ್ತರೊಡನೆ ಸಮಲೋಚಿಸಿ ಜನಜಾಗೃತಿ ಚಳವಳಿಗಳನ್ನು ಕೈಗೊಳ್ಳಬೇಕು ಮತ್ತು ಅವುಗಳಿಗೆ ಪ್ರೋತ್ಸಾಹ, ಸಮರ್ಥನೆ ಮತ್ತು ಸಹಾಯ ನೀಡಬೇಕು.

ಜನಜಾಗೃತಿ ಚಳವಳಿಗಳು

(2) ಮೇಲೆ ಹೇಳಿದ ಚಳವಳಿಗಳು ಮತ್ತು ಕಾರ್ಯಕ್ರಮಗಳು ಕೆಳಕಂಡ ಮೌಲ್ಯಗಳು ಹಾಗೂ ಅಂಶಗಳನ್ನು ಒಳಗೊಂಡಿರಬೇಕು.

ಎ) ಅಂಗವಿಕಲರೊಡನೆ ಸಹಚರ್ಯೆ, ಸಹಿಷ್ಣುತೆ ಮತ್ತು ಮಾನವ ವೈವಿದ್ಯತೆಯ ಬಗ್ಗೆ ಗೌರವ.

ಬಿ) ಅಂಗವಿಕಲರ ಕೌಶಲ್ಯಗಳು, ಕುಶಲತೆ, ಗುಣಗಳು, ಮತ್ತು ಸಾಮರ್ಥ್ಯಗಳನ್ನು ಗುರುತಿಸುವುದು, ಕಾರ್ಮಿಕ ಸಮೂಹ ಶ್ರಮಿಕ ವರ್ಗ ಮತ್ತು ಎಲ್ಲಾ ವೃತ್ತಿಗಳಲ್ಲಿ ಅಂಗವಿಕಲರ ಕಾಣಿಕೆಯನ್ನು ಗುರುತಿಸಿ ಬೆಳೆಸುವುದು.

ಸಿ) ಅಂಗವಿಕಲರು ತಮ್ಮ ಕೌಟುಂಬಿಕ ಜೀವನ, ಸಂಬಂಧಗಳು, ಸಂತಾನೋತ್ಪತ್ತಿ ಮತ್ತು ಮಕ್ಕಳನ್ನು ಬೆಳೆಸುವ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಗಳನ್ನು ಗೌರವಿಸುವುದು.

ಡಿ) ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಹಾಗೂ ವೃತ್ತಿಪರ ತರಬೇತಿ ಶಾಲೆಗಳಲ್ಲಿ ಅಂಗವಿಕಲರ ಸಮಸ್ಯೆಗಳು ಮತ್ತು ಅವರ ಹಕ್ಕುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.

ಇ) ಸಂಸ್ಥೆಗಳು, ಉದ್ದಿಮೆಗಳಲ್ಲಿ ಮಾಲೀಕರು ಸಿಬ್ಬಂದಿ ವರ್ಗ ಮತ್ತು ಸಹೋದ್ಯೋಗಿಗಳಿಗೆ ಅಂಗವಿಕಲರು ಅನುಭವಿಸುವ ತೊಂದರೆಗಳು ಮತ್ತು ಅವರ ಹಕ್ಕುಗಳ ಬಗ್ಗೆ ಅರಿವು ಬೆಳೆಸಬೇಕು.

ಎಫ್) ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಪಠ್ಯಕ್ರಮದಲ್ಲಿ ಅಂಗವಿಕಲರ ಹಕ್ಕುಗಳ ವಿಷಯ ಸೇರಿಸಬೇಕು.

ಅಡಚಣೆ ರಹಿತ ವ್ಯವಸ್ಥೆ

**40**. ಸರ್ಕಾರ ಕೇಂದ್ರ ಆಯುಕ್ತರೊಡನೆ ಸಮಾಲೋಚಿಸಿ ಅಂಗವಿಕಲರಿಗೆ ಚಲನೆ, ನಡೆದಾಟ, ಸಾರಿಗೆ, ಮಾಹಿತಿ ಮತ್ತು ಪ್ರಸರಣ (ದೃಶ್ಯ, ಶ್ರವಣ, ಬ್ರೇಲ್ ಇತ್ಯಾದಿ) ವಿಧಾನಗಳ ಬಗ್ಗೆ ಯುಕ್ತ ಮಾನದಂಡಗಳನ್ನು ನಿಗದಿಸಬೇಕು. ಸೂಕ್ತ ತಂತ್ರಜ್ಞಾನ, ವ್ಯವಸ್ಥೆ ಮತ್ತು ಸೌಕರ್ಯಗಳನ್ನು ನಗರ ಮತ್ತು ಗ್ರಾಮೀಣ ಸಾರ್ವಜನಿಕ ಸ್ಥಳಗಳಲ್ಲಿ ಏರ್ಪಡಿಸಬೇಕು.

ನಿಲುಕವಂತಹ ಸಾರಿಗೆ ಏರ್ಪಾಟು

**41**. (1) ಸರ್ಕಾರ ಅಂಗವಿಕಲರ ಸೌಕರ್ಯಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ಮಾಡಬೇಕು.

ಎ) ಬಸ್, ರೈಲು ಮತ್ತು ವಿಮಾನ ನಿಲ್ದಾಣಗಳಲ್ಲಿ ವಾಹನ ನಿಲ್ದಾಣ, ಶೌಚಾಲಯ, ಟಿಕೇಟ್ ನೀಡುವ ಕಿಂಡಿ ಮುಂತಾದ ಸ್ಥಳಗಳೆಲ್ಲ ಅಂಗವಿಕಲರಿಗೆ ಎಟುಕುವಂತೆ, ಅಡಚಣೆ ಇಲ್ಲದ ಏರ್ಪಾಟು ಮಾಡಬೇಕು.

ಬಿ) ಎಲ್ಲ ರೀತಿಯ ಸಾರಿಗೆ (ಚಲನೆ) ವ್ಯವಸ್ಥೆಯಲ್ಲಿ ಅಂಗವಿಕಲರಿಗೆ ಸೌಕರ್ಯ ಅಡಚಣೆ ರಹಿತವಾಗಿ ಇರುವಂತೆ ವಿನ್ಯಾಸದಲ್ಲಿ ಮಾನ ದಂಡಗಳನ್ನು ನಿಗದಿಸಬೇಕು. ಹಳೆಯ ವಿನ್ಯಾಸದ ಮಾದರಿಗಳನ್ನು, ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆ ಇದ್ದಷ್ಟು ಮಟ್ಟಿಗೆ, ಅಂಗವಿಕಲರ ಸೌಕರ್ಯ ಮತ್ತು ಸುರಕ್ಷತಗೆ ಪುನರ್ ರಚನೆ ಮತ್ತು ಪುನರ್ ನಿರ್ಮಾಣ ಮಾಡಬೇಕು.

ಸಿ) ರಸ್ತೆಗಳಲ್ಲಿ ಅಂಗವಿಕಲರ ಸುಗಮ ಚಲನೆಗೆ ಅಗತ್ಯವಾದ ಮಾರ್ಪಾಡುಗಳನ್ನು ಮಾಡಬೇಕು.

2. ಸರಕಾರ ಅಂಗವಿಕಲ ವ್ಯಕ್ತಿಗಳ ಚಲನೆ ಮತ್ತು ನಡೆದಾಟಕ್ಕೆ ಅವಶ್ಯವಾದ ಯೋಜನೆಗಳನ್ನು ಅವರಿಗೆ ಎಟುಕುವ ದರದಲ್ಲಿ ದೊರೆಯುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ಈ ಕೆಳಗಿನವುಗಳನ್ನು ಮಾಡಬೇಕು.

ಎ) ಸಾಧನ ಸಲಕರಣೆಗಳಿಗೆ ರಿಯಾಯಿತಿ ದರ ಮತ್ತು ಪ್ರೋತ್ಸಾಹ

ಬಿ) ವಾಹನಗಳ ಪುನರ್‌ರಚನೆ

ಸಿ) ನಡೆದಾಟಕ್ಕೆ ವ್ಯಕ್ತಿಗತ ಸಹಾಯ

ಮಾಹಿತಿ ಮತ್ತು ತಂತ್ರಜ್ಞಾನಕ್ಕೆ ಅವಶ್ಯ ಅವಕಾಶ

**42**. ಸರ್ಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

1) ಶ್ರವಣ, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಅಂಗವಿಕಲರು ಓದಿ, ಕೇಳಿ, ತಿಳಿಯುವ ಮಾದರಿಯಲ್ಲಿ ಇರಬೇಕು.

2) ವಿದ್ಯುನ್ಮಾನ ಮಾಧ್ಯಮದಲ್ಲಿ ಅಂಗವಿಕಲರಿಗೆ ತಲುಪುವಂತೆ ಶ್ರವಣ, ಸಂಜ್ಞಾ ಮತ್ತು ಲಿಖಿತ ಭಾಷೆಗಳನ್ನು ಅಳವಡಿಸಬೇಕು.

3) ವಿದ್ಯುನ್ಮಾನ ಸಾಧನಗಳು ಮತ್ತು ಉಪಕರಣಗಳು ಎಲ್ಲ ರೀತಿಯ ಅಂಗವಿಕಲರೂ ಬಳಸಲು ಆಗುವ ವಿನ್ಯಾಸ ಇರುವ ಹಾಗೆ ಲಭ್ಯವಾಗಬೇಕು.

ಬಳಕೆಯ ಸರಕು ಸಾಮಾಗ್ರಿ

**43**. ಎಲ್ಲಾ ಅಂಗವಿಕಲರೂ ಉಪಯೋಗಿಸಬಹುದಾದ, ಸಮಗ್ರ ವಿನ್ಯಾಸದ, ದಿನ ಬಳಕೆಯ ಸಾಮಗ್ರಿಗಳ ಅಭಿವದ್ಧಿ ಹಾಗೂ ವಿತರಣೆಯನ್ನು ಸರ್ಕಾರ ಪ್ರೋತ್ಸಾಹಿಸಬೇಕು.

ಅಡಚಣೆ ರಹಿತ ನಿರ್ಮಾಣ ಕಡ್ಡಾಯ

**44**. 1) ಕಟ್ಟಡಗಳ ವಿನ್ಯಾಸ ನಕ್ಷೆ ಸೆಕ್ಷನ್ 40ರಲ್ಲಿ ವಿಧಿಸಿರುವಂತೆ ಇಲ್ಲದಿದ್ದರೆ ಅವುಗಳ ನಿರ್ಮಾಣಕ್ಕೆ ಪರವಾನಗಿ ದೊರೆಯುವುದಿಲ್ಲ.

2) ಕಟ್ಟಡ ಸರ್ಕಾರ ವಿಧಿಸಿರುವ ನಿಯಮಗಳನುಸಾರ ಇಲ್ಲದಿದ್ದರೆ ಸ್ಥಾಪನೆ/ಸಂಸ್ಥೆಗೆ ಸಮಾಪ್ತಿ ಪತ್ರವಾಗಲಿ ಸ್ವಾಧೀನವಾಗಲಿ ದೊರೆಯುವುದಿಲ್ಲ.

**45**. (1) ಈಗಿರುವ ಸಾರ್ವಜನಿಕ ಕಟ್ಟಡಗಳು ಮತ್ತು ಮೂಲ ಸೌಕರ್ಯಗಳನ್ನೆಲ್ಲ ಐದು ವರ್ಷಗಳೊಳಗೆ, ಈ ಕಾಯಿದೆಯಡಿ ರೂಪಿಸಲಾಗುವ ನಿಯಮಗಳನುಸಾರ, ಅಂಗವಿಕಲರಿಗೆ ಅಡಚಣೆ ರಹಿತವಾಗಿ, ಇರುವಂತೆ ಪುನರ್ ನಿರ್ಮಾಣ ಮಾಡಬೇಕು. ಹಾಲಿ ಇರುವ ಕಟ್ಟಡಗಳ ಪುನರ್ ನಿರ್ಮಾಣಕ್ಕೆ ಕಾಲಮಿತಿ

(ಅಪವಾದ) ಆದರೆ ಕೇಂದ್ರ ಸರ್ಕಾರ, ರಾಜ್ಯಗಳ ಸಿದ್ಧತೆ ಮತ್ತು ಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು, ಮೇಲೆ ಹೇಳಿದ ಐದು ವರ್ಷಗಳ ವಾಯಿದೆಯನ್ನು ವಿಸ್ತರಿಸಬಹುದು.

2) ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಸ್ವಾಮ್ಯದ ಎಲ್ಲಾ ಸಾರ್ವಜನಿಕ ಕಟ್ಟಡಗಳ ಮಾರ್ಪಾಡಿಗೆ ಒಂದು ಆದ್ಯತೆಯ ಪಟ್ಟಿ ತಯಾರಿಸಬೇಕು: ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳು, ಶಾಲೆಗಳು, ರೈಲು ನಿಲ್ದಾಣಗಳು, ಬಸ್ ನಿಲ್ದಾಣಗಳು ಈ ಮುಂತಾಗಿ ಪಟ್ಟಿ ಮಾಡಬೇಕು.

**46**. ಅಂಗವಿಕಲರಿಗೆ ಅಡಚಣೆ ರಹಿತ ಪರಿಸರ ಕಲ್ಪಿಸಲು ಸರ್ಕಾರ ಕಾಯಿದೆಯ ಸೆಕ್ಷನ್ 40ರ ಕೆಳಗೆ ನಿಯಮಗಳನ್ನು ರೂಪಿಸಿದ ತರುವಾಯ ಸೇವಾ ಸಂಸ್ಥೆಗಳಿಗೆ ಎರಡು ವರ್ಷಗಳ ಕಾಲಮಿತಿಯನ್ನು ನೀಡಿದೆ. ಸೇವಾ ಸಂಸ್ಥೆಗಳಿಗೆ ಕಾಲಮಿತಿ

ಆದರೆ ಮುಖ್ಯ ಆಯುಕ್ತರೊಡನೆ ಸಮಾಲೋಚಿಸಿ, ಸರ್ಕಾರ ಕೆಲವು ರೀತಿಯ ಸೇವೆಗಳನ್ನು ಒದಗಿಸಲು, ಸಂಸ್ಥೆಗಳಿಗೆ ಈ ಕಾಲಮಿತಿಯನ್ನು ವಿಸ್ತರಿಸಬಹುದು.

1992ರ 34 **47.** 1) ಭಾರತ ಪುನರ್ವಸತಿ ಪರಿಷತ್ತು ಕಾಯಿದೆ (1992)ಯಡಿ ರಚಿಸಿರುವ ಭಾರತ ಪುನರ್ವಸತಿ ಪರಿಷತ್ತಿನ ಯಾವುದೇ ಕಾರ್ಯವನ್ನು ಬಾಧಿಸದೆ, ಸರ್ಕಾರ ಈ ಕಾಯಿದೆಯಡಿ ಮಾನವ ಸಂಪನ್ಮೂಲ (ತರಬೇತಿ ಪಡೆದ ಅಧಿಕಾರಿಗಳು ಮತ್ತು ಕಾರ್ಯ ಕರ್ತರು)ವನ್ನು ಅಭಿವೃದ್ಧಿ ಪಡಿಸುವ ಎಲ್ಲಾ ಪ್ರಯತ್ನವನ್ನೂ ಮಾಡಬೇಕು. ಈ ನಿಟ್ಟಿನಲ್ಲಿ ಮಾನವ ಸಂಪನ್ಮೂಲಗಳ ಅಭಿವೃದ್ಧಿ

ಎ) ಪಂಚಾಯತ ರಾಜ್ಯದ ಸದಸ್ಯರು ಮತ್ತು ಸಿಬ್ಬಂದಿ, ಶಾಸಕರು, ಆಡಳಿತ ಸಿಬ್ಬಂದಿ, ಪೋಲಿಸ್ ಅಧಿಕಾರಿಗಳು, ನ್ಯಾಯಾಧೀಶರು ಮತ್ತು ವಕೀಲರು ಮುಂತಾದವರಿಗೆ ಏರ್ಪಡಿಸುವ ತರಬೇತಿ ಶಿಬಿರಗಳಲ್ಲಿ, ಕಡ್ಡಾಯವಾಗಿ, ಅಂಗವಿಕಲರ ಹಕ್ಕುಗಳ ಬಗ್ಗೆ ತರಗತಿ ಇರಬೇಕು.

ಬಿ) ಎಲ್ಲಾ ಶಾಲೆ ಕಾಲೇಜು, ವಿಶ್ವ ವಿದ್ಯಾಲಯಗಳಲ್ಲಿ, ವೈದ್ಯರು, ದಾದಿಯರು, ವೈದ್ಯಕೀಯ ಸಹಾಯಕರು, ಸಮಾಜ ಸೇವಕರು, ಗ್ರಾಮೀಣ ಅಭಿವೃದ್ಧಿ ಅಧಿಕಾರಿಗಳು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಇಂಜಿನಿಯರುಗಳು, ವಾಸ್ತು ಶಿಲ್ಪಿಗಳು ಮುಂತಾಗಿ ಎಲ್ಲಾ ವೃತ್ತಿಯವರ ತರಗತಿಗಳಲ್ಲೂ, ಕಡ್ಡಾಯವಾಗಿ ಅಂಗವಿಕಲತೆಯ ಬಗ್ಗೆ ಪಠ್ಯಕ್ರಮ ಇರಬೇಕು.

ಸಿ) ಅಂಗವಿಕಲರು ಮತ್ತು ಅವರಿಗೆ ಆಸರೆ/ಪಾಲನೆ ನೀಡುವ ಎಲ್ಲರಿಗೂ ಅಂಗವಿಕಲರು ಸ್ವತಂತ್ರ ಜೀವನ ನಡೆಸಲು ಯಾವ ರೀತಿಯ ಆಸರೆ ನೀಡಬೇಕು ಮತ್ತು ಪಾಲನಾ ಕ್ರಮಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ತರಬೇತಿಗಳನ್ನು ಏರ್ಪಡಿಸಬೇಕು.

ಡಿ) ಅಂಗವಿಕಲರು ಇತರರೊಡನೆ ಸಕ್ರಿಯವಾಗಿ ಪಾಲ್ಗೊಳ್ಳುವುದು, ಆದಷ್ಟು ಸ್ವತಂತ್ರರಾಗಿ ಬಾಳ್ವೆ ನಡೆಸುವುದು ಮತ್ತು ಸಮಾಜದಲ್ಲಿ ಎಲ್ಲರೂ ಪರಸ್ಪರ ಗೌರವದಿಂದ ಇರುವುದು, ಪರಸ್ಪರ ಗುಣಗಳನ್ನು ಗುರುತಿಸುವ ಹಾಗೆ ತರಬೇತಿ ನೀಡಬೇಕು.

ಇ) ಕ್ರೀಡಾ ಶಿಕ್ಷಕರಿಗೆ ಆಟಗಳು ಕ್ರೀಡೆಗಳು ಸಾಹಸ ಕ್ರೀಡೆ ಮತ್ತು ಚಟುವಟಿಕೆಗಳ ಬಗ್ಗೆ ತರಬೇತಿ ನೀಡಬೇಕು.

ಎಫ್) ಇತರ ಅಗತ್ಯವಾದ ಸಾಮರ್ಥ್ಯ ಮತ್ತು ಕುಶಲತೆ ಬೆಳೆಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

2) ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಅಂಗವಿಕಲತೆಯ ಬಗ್ಗೆ ಸಂಶೋಧನೆ ಮತ್ತು ಅಧ್ಯಯನ ಮಾಡಲು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಬೇಕು.

3) ಮೇಲಿನ ಖಂಡ (1) ರಲ್ಲಿ ನಿಗದಿಸಿರುವ ಕರ್ತವ್ಯಗಳನ್ನು ಪೂರೈಸಲು ಸರ್ಕಾರ ಐದು ವರ್ಷಗಳಿಗೊಮ್ಮೆ ವಿಶ್ಲೇಷಣೆ ನಡೆಸಿ, ಈ ಕಾಯಿದೆಯಡಿ ವಿವಿಧ ಕರ್ತವ್ಯಗಳು ಮತ್ತು ಪಾತ್ರಗಳನ್ನು ನಿಭಾಯಿಸಲು ಸೂಕ್ತ ವ್ಯಕ್ತಿಗಳಿಗೆ ಶಿಕ್ಷಣ ಮತ್ತು ತರಬೇತಿ ನೀಡುವ ಯೋಜನೆಗಳನ್ನು ರೂಪಿಸಬೇಕು.

ನಂತರ ಅವರನ್ನು ಕೆಲಸಕ್ಕೆ ಭರ್ತಿ ಮಾಡಿಕೊಳ್ಳುವುದು ಮತ್ತು ಅವರಲ್ಲಿ ಸಂವೇದನಾಶೀಲತೆ ಬೆಳೆಸುವಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು.

ಕಾರ್ಯ ಕ್ರಮಗಳ ಪರಿಶೋಧನೆ

**48**. ಸರ್ಕಾರ ಅಂಗವಿಕಲರಿಗೆಂದು ನಿಯೋಜಿಸಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಪರಿಶೋಧಿಸಿ, ವಿಶ್ಲೇಷಿಸಿ ಅವು ಅಂಗವಿಕಲರ ಮೇಲೆ ಏನೂ ದುಷ್ಪರಿಣಾಮಗಳು ಆಗದೇ ಇರುವಂತೆಯೂ ಮತ್ತು ಅವರ ಅಗತ್ಯಗಳನ್ನು ಪೂರೈಸುತ್ತಲೂ ಇವೆ ಎಂದು ಖಚಿತ ಪಡಿಸಿಕೊಳ್ಳುತ್ತಿರಬೇಕು.

## ಅಧ್ಯಾಯ-9

## ಅಂಗವಿಕಲರೊಡನೆ ಕೆಲಸ ಮಾಡುವ ಸಂಸ್ಥೆಗಳ ನೋಂದಣಿ ಮತ್ತು ಅವುಗಳಿಗೆ ಹಣ ಸಹಾಯ

ಸಕ್ಷಮ ಅಧಿಕಾರ

**49**. ಈ ಅಧ್ಯಾಯದಲ್ಲಿ ನಮೂದಿಸಿರುವ ಕೆಲಸಗಳನ್ನು ನಿಭಾಯಿಸಲು ರಾಜ್ಯ ಸರ್ಕಾರಗಳು ಯೋಗ್ಯ ಅಧಿಕಾರವನ್ನು ನೇಮಿಸಬೇಕು.

ನೋಂದಣಿ

**50**. ಈ ಕಾಯಿದೆಯಲ್ಲಿ ಹೊರತುಪಡಿಸಿದ ವಿನಾ, ಅಂಗವಿಕಲರಿಗೆಂದು ದುಡಿಯುತ್ತಿರುವ ಎಲ್ಲಾ ಸಂಸ್ಥೆಗಳೂ ಅವುಗಳಿಗೆ ಸಕ್ಷಮ ಅಧಿಕಾರ ನೀಡಿರುವ ನೋಂದಣಿ ಪತ್ರದ ಪ್ರಕಾರವೇ ಸಂಸ್ಥೆಯನ್ನು ನಡೆಸಬೇಕು.

(ಅಪವಾದ) ಮಾನಸಿಕ ಅಸ್ವಸ್ಥರಿಗೆ ಪಾಲನೆ ನೀಡುತ್ತಿರುವ ಸಂಸ್ಥೆಗಳು ಸನ್ 1987ರ ಮಾನಸಿಕ ಸ್ವಾಸ್ಥ್ಯ ಕಾಯಿದೆ ಅಥವಾ ಇನ್ನಾವುದೇ ಕಾಯಿದೆಯಡಿ ನೋಂದಾಯಿಸಿ ಪರವಾನಗಿ ಇರುವ ಸಂಸ್ಥೆಗಳು ಈ ಕಾಯಿದೆಯಡಿ ಮತ್ತೆ ನೋಂದಾಯಿಸುವ ಅಗತ್ಯವಿಲ್ಲ. 14ನೇ 1987

ನೋಂದಣಿ ಪತ್ರಕ್ಕೆ ಅರ್ಜಿ

**51**. (1) ನೋಂದಾವಣೆಗೆ ಅರ್ಜಿ ರಾಜ್ಯ ಸರ್ಕಾರ ನಿಗದಿಸಿರುವ ನಮೂನೆ ಮತ್ತು ರೀತಿಯಲ್ಲಿದ್ದು ಅದನ್ನು ಸಕ್ಷಮ ಅಧಿಕಾರಕ್ಕೆ ಸಲ್ಲಿಸಬೇಕು

(2) ಮೇಲೆ ಹೇಳಿದಂತೆ ಅರ್ಜಿ ತಲುಪಿದ ನಂತರ, ಸಕ್ಷಮ ಅಧಿಕಾರ ಸೂಕ್ತ ವಿಚಾರಣೆ ನಡೆಸಿ, ಸಂಸ್ಥೆ ಈ ಕಾಯಿದೆ ಮತ್ತು ನಿಯಮಗಳ ಪ್ರಕಾರ ಇದೆ ಎಂದು ಕಂಡಲ್ಲಿ, ಅರ್ಜಿ ಸಂದ 90 ದಿನಗಳೊಳಗೆ ನೋಂದಣಿ ಪತ್ರವನ್ನು ನೀಡುತ್ತದೆ. ಅರ್ಜಿ ನಿಯಮಗಳ ಪ್ರಕಾರ ಇಲ್ಲದಿದ್ದರೆ ಅಧಿಕಾರ ನೋಂದಣಿಯನ್ನು ನಿರಾಕರಿಸಬಹುದು.

(ಶರತ್ತು) ಆದರೆ ನೋಂದಣಿ ನಿರಾಕರಿಸುವ ಮುನ್ನ ಸಕ್ಷಮ ಅಧಿಕಾರ ಅರ್ಜಿದಾರ ಸಂಸ್ಥೆಗೆ ತನ್ನ ಪರ ವಾದವನ್ನು ಮಂಡಿಸಲು ಅವಕಾಶ ನೀಡಬೇಕು. ಮತ್ತು ನೋಂದಣಿ ನಿರಾಕರಣೆಯನ್ನು ಲಿಖಿತ ರೂಪದಲ್ಲಿ ತಿಳಿಸಬೇಕು.

(3) ಅರ್ಜಿದಾರ ಸಂಸ್ಥೆ ರಾಜ್ಯ ಸರ್ಕಾರ ನಿಗದಿಸಿರುವ ಮಾನದಂಡಗಳ ಪ್ರಕಾರ ಸೌಕರ್ಯಗಳನ್ನು ಒದಗಿಸುವ ಸ್ಥಿತಿಯಲ್ಲಿದ್ದರೆ ಮಾತ್ರ ನೋಂದಣಿ ಪತ್ರವನ್ನು ನೀಡಲಾಗುವುದು.

(4) ಮೇಲಿನ ಖಂಡ (2)ರ ಕೆಳಗೆ ನೀಡಲಾಗುವ ನೋಂದಣಿ ಪತ್ರ.

ಎ) ಸೆಕ್ಷನ್ 52ರ ಕೆಳಗೆ ರದ್ದು ಆಗದಿದ್ದಲ್ಲಿ ರಾಜ್ಯ ಸರ್ಕಾರ ನಿಗದಿಸಿರುವ ಅವಧಿಗೆ ಮಾನ್ಯವಾಗಿರುತ್ತದೆ.

ಬಿ) ಅದನ್ನು ಕಾಲ ಕಾಲಕ್ಕೆ ನಿಗದಿತ ಅವಧಿಗೆ ನವೀಕರಿಸಬಹುದು.

ಸಿ) ಸರ್ಕಾರ ನಿಗದಿಸಿರುವ ನಮೂನೆಯಲ್ಲಿದ್ದು ಶರತ್ತುಗಳಿಗೆ ಒಳಪಟ್ಟಿರಬಹುದು.

(5) ನೋಂದಣಿ ಪತ್ರದ ನವೀಕರಣಕ್ಕೆ ಅರ್ಜಿಯನ್ನು ಅದರ ಕಾಲಾವಧಿ ಮುಗಿಯಲು 60 ದಿನಗಳು ಇರುವಾಗ ಮಾಡಬೇಕು.

(6) ನೋಂದಣಿ ಪತ್ರವನ್ನು ಸಂಸ್ಥೆ ಪ್ರಮುಖವಾದ ಸ್ಥಳದಲ್ಲಿ ಪ್ರದರ್ಶಿಸಬೇಕು.

(7) ಖಂಡ (1) ಅಥವಾ (5) ರ ಕೆಳಗೆ ಸಲ್ಲಿಸಿರುವ ಅರ್ಜಿಯನ್ನು ಸಕ್ಷಮ ಅಧಿಕಾರ ರಾಜ್ಯ ಸರ್ಕಾರ ನಿಗದಿಸಿರುವ ಕಾಲಾವಧಿಯ ಒಳಗೆ ಇತ್ಯರ್ಥ ಮಾಡಬೇಕು.

**52**. (1) ನೋಂದಣಿ ಪತ್ರ ನೀಡುವ ಅಧಿಕಾರಕ್ಕೆ ಸೆಕ್ಷನ್ 51(2)ರ ಕೆಳಗೆ ನೋಂದಣಿ ಪತ್ರ ಪಡೆದ ಸಂಸ್ಥೆ — ನೋಂದಣಿ ರದ್ದು

ಎ) ನವೀಕರಣಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ನೀಡಿರುವ ಮುಖ್ಯವಾದ ವಿವರಗಳು ಸತ್ಯವಾಗಿಲ್ಲ ಎಂಬ ಶಂಕೆ ಬಂದರೆ ಅಥವಾ

ಬಿ) ಕಾಯಿದೆಯ ನಿಯಮಗಳನ್ನು ಉಲ್ಲಂಘಿಸಿದೆ ಎನಿಸಿದರೆ, ಸೂಕ್ತ ವಿಚಾರಣೆ ನಡೆಸಿದ ನಂತರ ನೋಂದಣಿಯನ್ನು ರದ್ದು ಮಾಡಬಹುದು. ಆದರೆ, ನೋಂದಣಿ ಪತ್ರವನ್ನು ಪಡೆದಿರುವ ಸಂಸ್ಥೆಗೆ ನೋಂದಣಿಯನ್ನು ಯಾಕೆ ರದ್ದು ಮಾಡಕೂಡದು ಎಂದು ಕಾರಣಗಳನ್ನು ತಿಳಿಸಲು ಅವಕಾಶ ಕೊಡಬೇಕು.

(2) ನೋಂದಣಿ ಪತ್ರ ರದ್ದಾದ ದಿನದಿಂದಲೇ ಸಂಸ್ಥೆ ತನ್ನ ಕಾರ್ಯವನ್ನು ನಿಲ್ಲಿಸಬೇಕು.

(ಅಪವಾದ) ಆದರೆ, ಸೆಕ್ಷನ್ 58ರ ಕೆಳಗೆ ನೋಂದಣಿ ರದ್ದತಿಯ ವಿರುದ್ಧ ಮೇಲ್ಮನವಿಗೆ ಅವಕಾಶವಿದ್ದರೆ, ಸಂಸ್ಥೆ

ಎ) ಮೇಲ್ಮನವಿ ಸಲ್ಲಿಸಲು ಇರುವ ವಾಯಿದೆ ಮೀರಿದರೂ ಮೇಲ್ಮನವಿ ಸಲ್ಲಿಸಿದೇ ಇದ್ದರೆ, ವಾಯಿದೆ ಮೀರಿದ ದಿನದಿಂದ ಕೆಲಸ ನಿಲ್ಲಿಸಬೇಕು.

ಬಿ) ಮೇಲ್ಮನವಿ ಸಲ್ಲಿಸಿ ಅದನ್ನು ನಿರಾಕರಿಸಲಾಗಿದ್ದರೆ, ನಿರಾಕರಣೆಯಾದ ದಿನದಿಂದ ಕೆಲಸ ನಿಲ್ಲಿಸಬೇಕು.

(3) ಒಂದು ವೇಳೆ, ನೋಂದಣಿ ರದ್ದಾದರೆ, ಸಂಸ್ಥೆಯ ಸುಪರ್ದಿನಲ್ಲಿದ್ದ ಅಂಗವಿಕಲರನ್ನು ಸಕ್ಷಮ ಅಧಿಕಾರ

ಎ) ಅವರ ಪೋಷಕರು, ಹೆಂಡತಿ/ಗಂಡ ಅಥವಾ ಕಾನೂನುರೀತ್ಯಾ ಪಾಲಕರು ಎಂದನಿಸಿಕೊಂಡವರಿಗೆ ಪುನಃ ಒಪ್ಪಿಸಬೇಕು; ಅಥವಾ

ಬಿ) ಅವರನ್ನು ಸಕ್ಷಮ ಅಧಿಕಾರ ನಿರ್ಣಯಿಸುವ ಇತರೆ ಸಂಸ್ಥೆಗೆ ವರ್ಗಾಯಿಸಿಬೇಕು.

**53**. (1) ಸಕ್ಷಮ ಅಧಿಕಾರ ನೋಂದಣಿ ನಿರಾಕರಿಸಿದರೆ ಅಥವಾ ನೋಂದಣಿಯನ್ನು ರದ್ದು ಮಾಡಿದರೆ ಸಂಸ್ಥೆ/ವ್ಯಕ್ತಿ ಸರ್ಕಾರ ನಿಗದಿಸಿರುವ ಕಾಲಾವಧಿಯೊಳಗೆ ಸರ್ಕಾರ ನೇಮಿಸಿರುವ ಮೇಲ್ಮನವಿ ಅಧಿಕಾರಕ್ಕೆ ಮನವಿ ಸಲ್ಲಿಸಬಹುದು. — ಮೇಲ್ಮನವಿ

2) ಹೀಗಾದಲ್ಲಿ ಮೇಲ್ಮನವಿ ಅಧಿಕಾರದ ನಿರ್ಣಯವೇ ಅಂತಿಮವಾಗಿರುವುದು.

**54**. ಈ ಅಧ್ಯಾಯದ ಯಾವ ಭಾಗವೂ ಕೇಂದ್ರ ಅಥವಾ ರಾಜ್ಯ ಸರಕಾರ ಸ್ಥಾಪಿಸಿರುವ ಅಥವಾ ನಿರ್ವಹಿಸುತ್ತಿರುವ ಅಂಗವಿಕಲರ ಸಂಸ್ಥೆಗೆ ಅನ್ವಯಿಸುವುದಿಲ್ಲ. — ಸರಕಾರಿ ಸ್ಥಾಪನೆಗಳಿಗೆ ಅನ್ವಯಿಸುವುದಿಲ್ಲ

**55**. ಸರ್ಕಾರ ತನ್ನ ಆರ್ಥಿಕ ಸಾಮರ್ಥ್ಯಕ್ಕನುಸಾರ, ಈ ಕಾಯಿದೆಯಡಿ ರೂಪಿಸಲಾಗುವ ಯೋಜನೆಗಳ ಅನುಷ್ಠಾನಕ್ಕೆ ಮತ್ತು ಸೇವೆಗಳನ್ನು ಒದಗಿಸಲು ನೋಂದಾಯಿತ ಸಂಸ್ಥೆಗಳಿಗೆ ಧನ ಸಹಾಯ ನೀಡಬಹುದು. — ನೋಂದಾಯಿತ ಸಂಸ್ಥೆಗಳಿಗೆ ಧನ ಸಹಾಯ

## ಅಧ್ಯಾಯ – 10
## ನಿರ್ದಿಷ್ಟ ಅಂಗವಿಕಲತೆಗಳ ಪ್ರಮಾಣೀಕರಣ

**56**. ಕೇಂದ್ರ ಸರ್ಕಾರ ವ್ಯಕ್ತಿಯಲ್ಲಿ ನಿರ್ದಿಷ್ಟ ಅಂಗವಿಕಲತೆಯ ಪ್ರಮಾಣ ಎಷ್ಟಿದೆ ಎಂದು ನಿರ್ಧರಿಸಲು ಮಾರ್ಗದರ್ಶಕ ಸೂಚನೆಗಳನ್ನು ಪ್ರಕಟಿಸಬೇಕು. — ಅಂಗವಿಕಲತೆ ಪ್ರಮಾಣೀಕರಣಕ್ಕೆ ಮಾರ್ಗದರ್ಶಕ ಸೂಚನೆಗಳು

**57**. (1) ಸರ್ಕಾರ ಅಂಗವಿಕಲತೆಯ ಪ್ರಮಾಣ ಎಷ್ಟಿದೆ ಎಂದು ಪ್ರಮಾಣ ಪತ್ರಗಳನ್ನು ನೀಡಲು ಯೋಗ್ಯ ವಿದ್ಯಾರ್ಹತೆ ಮತ್ತು ಯುಕ್ತ ಅನುಭವ ಇರುವ ವ್ಯಕ್ತಿಗಳನ್ನು ನೇಮಿಸುವುದು ಮತ್ತು ಅವರು ಅಂಗವಿಕಲತೆಯ ಪ್ರಮಾಣ ಪತ್ರ ನೀಡುವರು. — ಪ್ರಮಾಣ ಪತ್ರ ನೀಡುವ ಅಧಿಕಾರ

2) ಅಂಗವಿಕಲತೆಯನ್ನು ಪ್ರಮಾಣೀಕರಿಸುವ ಅಧಿಕಾರದ ವ್ಯಾಪ್ತಿಯನ್ನು ಮತ್ತು ಅದು ಪಾಲಿಸಬೇಕಾದ ಶರತ್ತುಗಳನ್ನು ಸರ್ಕಾರ ಪ್ರಕಟಿಸುವುದು.

ಪ್ರಮಾಣೀ–ಕರಿಸುವ ಕ್ರಮ

**58**. 1) ನಿರ್ದಿಷ್ಟ ಅಂಗವಿಕಲತೆ ಇರುವ ವ್ಯಕ್ತಿ ಕೇಂದ್ರ ಸರ್ಕಾರ ವಿಧಿಸಿರುವ ನಮೂನೆ ಮತ್ತು ರೀತಿಯಲ್ಲಿ ಪ್ರಮಾಣೀಕರಿಸುವ ಅಧಿಕಾರಕ್ಕೆ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಬಹುದು.

2) ಮೇಲೆ ಹೇಳಿದಂತೆ ಅರ್ಜಿ ಸ್ವೀಕರಿಸಿದ ಸಕ್ಷಮ ಅಧಿಕಾರ ವ್ಯಕ್ತಿಯ ಅಂಗವಿಕಲತೆಯನ್ನು ಸೆಕ್ಷನ್ 56ರ ಕೆಳಗೆ ಪ್ರಕಟಿಸಿರುವ ಮಾರ್ಗದರ್ಶಕ ಸೂಚನೆಗಳ ಅನುಸಾರ.

ಎ) ವ್ಯಕ್ತಿಗೆ ಸರ್ಕಾರ ನಿಗದಿಸಿರುವ ನಮೂನೆಯಲ್ಲಿ ಅಂಗವಿಕಲತೆ ಪ್ರಮಾಣ ಪತ್ರವನ್ನು ನೀಡಬೇಕು; ಅಥವಾ

ಬಿ) ಲಿಖಿತ ರೂಪದಲ್ಲಿ ಅವರಿಗೆ ನಿರ್ದಿಷ್ಟ ಅಂಗವಿಕಲತೆ ಇಲ್ಲ ಎಂದು ತಿಳಿಸಬೇಕು

3) ಈ ಸೆಕ್ಷನ್ ಕೆಳಗೆ ನೀಡಲಾಗುವ ಪ್ರಮಾಣ ಪತ್ರ ಇಡೀ ದೇಶದಾದ್ಯಂತ ಮಾನ್ಯವಾಗಿರುವುದು.

ಪ್ರಮಾಣೀಕರಣ ಅಧಿಕಾರದ ನಿರ್ಣಯದ ವಿರುದ್ಧ ಮೇಲ್ಮನವಿ

**59**. ಯಾರಿಗಾದರೂ ಅಂಗವಿಕಲತೆ ಪ್ರಮಾಣ ಪತ್ರದ ವಿಷಯದಲ್ಲಿ ಅಸಮಾಧಾನ ಉಂಟಾದರೆ, ಅವರು ಸರ್ಕಾರ ನೇಮಿಸಿರುವ ಯುಕ್ತ ಮೇಲ್ಮನವಿ ಅಧಿಕಾರಕ್ಕೆ ಸರ್ಕಾರ ನಿಗದಿಸಿರುವ ಕಾಲಾವಧಿಯೊಳಗೆ, ನಿಗದಿತ ನಮೂನೆ ಮತ್ತು ರೀತಿಯಲ್ಲಿ ಮೇಲ್ಮನವಿ ಸಲ್ಲಿಸಬಹುದು.

## ಅಧ್ಯಾಯ – 11

## ಕೇಂದ್ರ ಮತ್ತು ರಾಜ್ಯದ ಸಲಹಾ ಮಂಡಳಿಗಳು ಮತ್ತು ಜಿಲ್ಲಾ ಮಟ್ಟದ ಸಮಿತಿ

ಕೇಂದ್ರ ಅಂಗವಿಕಲತೆ ಸಲಹಾ ಮಂಡಳಿಯ ರಚನೆ

**60**. 1) ಕೇಂದ್ರ ಸರಕಾರ ಈ ಕಾಯಿದೆಯಡಿ ಮಾಡಬೇಕಾದ ಕಾರ್ಯಗಳ ನಿರ್ವಹಣೆಗೆ ಯುಕ್ತ ಅಧಿಕಾರಗಳುಳ್ಳ ಕೇಂದ್ರ ಸಲಹಾ ಮಂಡಳಿಯನ್ನು ರಚಿಸುವುದು.

2) ಕೇಂದ್ರ ಸಲಹಾ ಮಂಡಳಿಯ ಸದಸ್ಯತ್ವ :

ಎ) ಕೇಂದ್ರ ಸರ್ಕಾರದ ಅಂಗವಿಕಲತೆ ಖಾತೆಯ ಸಚಿವರು, ಪದನಿಮಿತ್ತ ಸಭಾಪತಿ.

ಬಿ) ಕೇಂದ್ರ ಸರ್ಕಾರದ ಅಂಗವಿಕಲತೆ ಖಾತೆಯ ಉಪಸಚಿವರು, ಪದನಿಮಿತ್ತ ಉಪಸಭಾಪತಿ.

ಸಿ) ಮೂವರು ಸಂಸತ್ ಸದಸ್ಯರು – ಇಬ್ಬರು ಲೋಕಸಭೆಯಿಂದ ಮತ್ತು ಒಬ್ಬರು ರಾಜ್ಯಸಭೆಯಿಂದ ಚುನಾಯಿಸಲ್ಪಡುವರು. ಪದನಿಮಿತ್ತ ಸದಸ್ಯರು.

ಡಿ) ಕೇಂದ್ರ ಸರ್ಕಾರದ ಕೆಳಕಂಡ ಖಾತೆ/ಇಲಾಖೆಗಳ ಕಾರ್ಯದರ್ಶಿಗಳು ಅಂಗವಿಕಲರ ಖಾತೆ ಸಾಮಾಜಿಕ ಮತ್ತು ಸಬಲೀಕರಣ ಖಾತೆ, ಶಿಕ್ಷಣ ಮತ್ತು ಸಾಕ್ಷರತೆ ಮತ್ತು ಉನ್ನತ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವ್ಯಯ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಕುಂದು ಕೊರತೆ ದೂರುಗಳ ಇಲಾಖೆ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಇಲಾಖೆ ಮತ್ತು ನಾಗರಿಕ ಉಡ್ಡಯನ ಇವುಗಳ ಕಾರ್ಯದರ್ಶಿಗಳೂ ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಎಫ್) ಭಾರತ ಪರಿವರ್ತನಾ ಸಂಸ್ಥೆ (NITI ಆಯೋಗದ) ಕಾರ್ಯದರ್ಶಿ.

ಜಿ) ಭಾರತ ಪುನರ್ವಸತಿ ಪರಿಷತ್ತಿನ ಅಧ್ಯಕ್ಷರು.

ಹೆಚ್) ಅಂತರ್ಮುಖಿ (ಆಟಿಸಂ) ಮಿದುಳುವಾತ (ಸಿಪಿ) ಬುದ್ಧಿ ಮಾಂದ್ಯತೆ (ಎಮ್.ಆರ್) ಮತ್ತು ಬಹುವಿಧ ಅಂಗವಿಕಲತೆ ಇರುವವರ ಕಲ್ಯಾಣಕ್ಕಾಗಿ ರಚಿಸಿರುವ ರಾಷ್ಟ್ರೀಯ ನ್ಯಾಸದ ಅಧ್ಯಕ್ಷರು.

ಐ) ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದ ಅಧ್ಯಕ್ಷ/ಆಡಳಿತ ನಿರ್ದೇಶಕರು.

ಜೆ) ಕೃತಕ ಕೈಕಾಲು ಉತ್ಪಾದನಾ ನಿಗಮದ ಅಧ್ಯಕ್ಷರು/ಆಡಳಿತ ನಿರ್ದೇಶಕರು.

ಕೆ) ರೈಲು ಮಂಡಳಿ ಅಧ್ಯಕ್ಷರು.

ಎಲ್) ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಉದ್ಯೋಗ ಮತ್ತು ತರಬೇತಿಯ ಆಡಳಿತ ನಿರ್ದೇಶಕರು.

ಎಮ್) ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ ನಿರ್ದೇಶಕರು

ಎನ್) ರಾಷ್ಟ್ರೀಯ ಶಿಕ್ಷಕರ ತರಬೇತಿ ಪರಿಷತ್ತಿನ ನಿರ್ದೇಶಕರು.

ಒ) ಯುಜಿಸಿ ಯ ಅಧ್ಯಕ್ಷರು.

ಪಿ) ಭಾರತದ ವೈದ್ಯಕೀಯ ಪರಿಷತ್ತಿನ ಅಧ್ಯಕ್ಷರು.

ಕ್ಯೂ) ಈ ಕೆಳಗಿನ ಸಂಸ್ಥೆಗಳ ನಿರ್ದೇಶಕರೂ ಪದನಿಮಿತ್ತ ಸದಸ್ಯರಾಗಿರುತ್ತಾರೆ:

1) ರಾಷ್ಟ್ರೀಯ ಅಂಧತ್ವ ಸಂಸ್ಥೆ, ಡೆಹ್ರಾಡೂನ್.

2) ರಾಷ್ಟ್ರೀಯ ಬುದ್ಧಿ ಮಾಂದ್ಯತೆ ಸಂಸ್ಥೆ, ಸಿಕಂದರಾಬಾದ್.

3) ಪಂಡಿತ ದೀನ ದಯಾಳ ಉಪಾಧ್ಯಾಯ ದೈಹಿಕ ಅಂಗವಿಕಲ ಸಂಸ್ಥೆ, ನವದಿಲ್ಲಿ.

4) ಆಲಿಯಾವರ್‌ಜಂಗ್ ರಾಷ್ಟ್ರೀಯ ಕಿವುಡುತನ ಸಂಸ್ಥೆ, ಮುಂಬೈ.

5) ರಾಷ್ಟ್ರೀಯ ಮೂಳೆಯ ಅಂಗವಿಕಲತೆ ಸಂಸ್ಥೆ, ಕೊಲ್ಕತ್ತಾ.

6) ರಾಷ್ಟ್ರೀಯ ಪುನರ್ವಸತಿ, ತರಬೇತಿ ಮತ್ತು ಸಂಶೋಧನಾ ಸಂಸ್ಥೆ, ಕೊಟಕ್.

7) ರಾಷ್ಟ್ರೀಯ ಅಂಗವಿಕಲ ಸಬಲೀಕರಣ ಸಂಸ್ಥೆ, ಚೆನ್ನೈ.

8) ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಬೆಂಗಳೂರು.

9) ಭಾರತೀಯ ಸಂಜ್ಞಾ ಭಾಷೆ ಸಂಶೋಧನಾ ಮತ್ತು ತರಬೇತಿ ಕೇಂದ್ರ, ನವದಿಲ್ಲಿ.

ಆರ್) ಕೇಂದ್ರ ಸರ್ಕಾರದ ಕೆಳಕಂಡ ಸದಸ್ಯರನ್ನು ನೇಮಿಸುವುದು:

1) ಅಂಗವಿಕಲತೆ ಮತ್ತು ಪುನರ್ವಸತಿ ಕ್ಷೇತ್ರದಲ್ಲಿ ತಜ್ಞರಾದವರು, ಸದಸ್ಯರು.

2) ಅಂಗವಿಕಲರಿಗಾಗಿ ದುಡಿಯುತ್ತಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ಅಂಗವಿಕಲರ ಸಂಘಟನೆಗಳನ್ನು ಪ್ರತಿನಿಧಿಸಲು ಹತ್ತು ಸದಸ್ಯರು, ಇವರಲ್ಲಿ ಸಾಧ್ಯವಾದಷ್ಟು ಮಂದಿ ಅಂಗವಿಕಲರು ಇರಬೇಕು.

ಶರತ್ತು: ಮೇಲೆ ಹೇಳಿದ ಹತ್ತು ಮಂದಿ ಸದಸ್ಯರಲ್ಲಿ ಕನಿಷ್ಟ ಐದು ಜನ ಮಹಿಳೆಯರು, ಒಬ್ಬರು ಅನುಸೂಚಿತ ಜಾತಿಯವರು ಮತ್ತು ಒಬ್ಬರು ಅನುಸೂಚಿತ ಬುಡಕಟ್ಟಿನ ಜನಾಂಗದವರಿರಬೇಕು.

3) ರಾಷ್ಟ್ರೀಯ ವಾಣಿಜ್ಯ ಮಹಾ ಮಂಡಳಿಗಳನ್ನು ಪ್ರತಿನಿಧಿಸುವ ಮೂವರು ಸದಸ್ಯರು.

ಎಸ್) ಕೇಂದ್ರ ಸರ್ಕಾರದಲ್ಲಿ ಅಂಗವಿಕಲತೆ ನೀತಿಯನ್ನು ನಿರೂಪಿಸುವ ಜಂಟಿ ಕಾರ್ಯದರ್ಶಿ ಇವರು ಸಲಹಾ ಮಂಡಳಿಯ ಪದನಿಮಿತ್ತ ಕಾರ್ಯದರ್ಶಿ ಆಗುತ್ತಾರೆ.

ಮಂಡಳಿಯ ಸದಸ್ಯತ್ವದ ಶರತ್ತುಗಳು

**61**. (1) ಈ ಕಾಯಿದೆಯಲ್ಲಿ ಅನ್ಯಥಾ ಹೇಳದಿದ್ದಲ್ಲಿ, ಸೆಕ್ಷನ್ 60(2)ರ, ಖಂಡ (ಆರ್)ರ ಕೆಳಗೆ ನೇಮಕಗೊಂಡಿರುವ ಕೇಂದ್ರ ಸಲಹಾ ಮಂಡಳಿಯ ಸದಸ್ಯರ ಅವಧಿ ಅವರು ನೇಮಕೊಂಡ ದಿನದಿಂದ ಮೂರು ವರ್ಷಗಳಾಗಿರುತ್ತದೆ.

(ಅಪವಾದ) ಆದರೆ, ಕಾಲಾವಧಿಯ ನಂತರ ನಿವೃತ್ತರಾಗ ಬೇಕಿರುವ ಸದಸ್ಯರ ಸ್ಥಳಕ್ಕೆ ಮತ್ತೊಬ್ಬ ಸದಸ್ಯರು ನೇಮಕಗೊಂಡು ಪದವಿ ಸ್ವೀಕರಿಸುವ ತನಕ, ನಿವೃತ್ತ ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರೆಯುತ್ತಾರೆ.

2) ಮೇಲಿನ ಸೆಕ್ಷನ್ 60(2) ಖಂಡ (ಆರ್) ಕೆಳಗೆ ನೇಮಕಗೊಂಡಿರುವ ಯಾವುದೇ ಸದಸ್ಯರನ್ನು, ಸರ್ಕಾರ ಸೂಕ್ತವೆನಿಸಿದಲ್ಲಿ ತೆಗೆದು ಹಾಕಬಹುದು. ಆದರೆ ಸದಸ್ಯರಿಗೆ ತಮ್ಮ ಪರವಾಗಿ ಕಾರಣ ಮಂಡಿಸಲು ಅವಕಾಶ ನೀಡಿದ ನಂತರವಷ್ಟೇ ಅವರನ್ನು ತೆಗೆದು ಹಾಕಲು ಸಾಧ್ಯ.

3) ಮೇಲೆ ಹೇಳಿದಂತೆ ನೇಮಕಗೊಂಡ ಸದಸ್ಯರು ಇಚ್ಛಿಸಿದಲ್ಲಿ, ಸರ್ಕಾರಕ್ಕೆ ಪತ್ರ ಮುಖೇನ ತಿಳಿಸಿ, ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬಹುದು. ಈ ರೀತಿ ಸದಸ್ಯರು ರಾಜೀನಾಮೆ ನೀಡಿದರೆ ಅವರ ಸ್ಥಳ ಖಾಲಿಯಾಗುವುದು.

4) ಮೇಲೆ ಹೇಳಿದಂತೆ ತಮ್ಮ ಅವಧಿ ಮುಗಿಯುವ ಮುನ್ನ ಯಾರಾದರೂ ರಾಜೀನಾಮೆ ನೀಡಿದರೆ ಅವರ ಸ್ಥಳಕ್ಕೆ, ಅವರ ಉಳಿದ ಅವಧಿಗೆ, ಸರಕಾರ ಬೇರೆಯವರನ್ನು ನೇಮಿಸಬಹುದು.

5) ಸೆಕ್ಷನ್ 60 (2)ರ ಖಂಡ (ಆರ್)ನ ಉಪಖಂಡ (1) ಮತ್ತು (3)ರ ಕೆಳಗೆ ನೇಮಕಗೊಂಡ (ಅಂಗವಿಕಲತೆ ತಜ್ಞರು ಮತ್ತು ವಾಣಿಜ್ಯ ಮಹಾ ಮಂಡಳಿ ಪ್ರತಿನಿಧಿಗಳು) ಸದಸ್ಯರು ಮರು ನೇಮಕಕ್ಕೆ ಅರ್ಹರಾಗಿ ಇರುತ್ತಾರೆ.

6) ತಜ್ಞರು ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳಿಗೆ ಸರ್ಕಾರ ನಿಗದಿಸುವ ಭತ್ಯೆಗಳನ್ನು ನೀಡಲಾಗುತ್ತದೆ.

ಅನರ್ಹತೆ

**62.** 1) ಈ ಕೆಳಕಂಡಂತಹವರು ಕೇಂದ್ರ ಸಲಹಾ ಮಂಡಳಿಯ ಸದಸ್ಯರಾಗಿರಲು ಅರ್ಹರಲ್ಲ.

ಎ) ಎಂದಾದರೂ ದಿವಾಳಿ ಎಂದು ಘೋಷಿಸಲ್ಪಟ್ಟವರು ಅಥವಾ ತಮ್ಮ ಸಾಲಗಳನ್ನು ತೀರಿಸದೆ ನಿಲ್ಲಿಸಿದವರು ಅಥವಾ ತಮಗೆ ಸಾಲ ಕೊಟ್ಟವರೊಡನೆ ಅಕ್ರಮವಾಗಿ ರಾಜಿ ಮಾಡಿಕೊಂಡವರು ಅಥವಾ

ಬಿ) ಮಾನಸಿಕ ಅಸ್ವಸ್ಥರಾಗಿದ್ದು ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯ ನೀಡಿರುವ ಆದೇಶಕ್ಕೆ ಒಳಗಾದವರು.

ಸಿ) ಕೇಂದ್ರ ಸರ್ಕಾರ ಅಶ್ಲೀಲ ಎಂದು ಪರಿಗಣಿಸುವ ಅಪರಾಧ ಎಸಗಿ ನ್ಯಾಯಾಲಯದಲ್ಲಿ ದಂಡನೆಗೆ ಒಳಗಾದವರು ಅಥವಾ

ಡಿ) ಈ ಕಾಯಿದೆಯಡಿ ಯಾವುದಾದರೂ ಅಪರಾಧಕ್ಕೆ ದಂಡನೆಗೆ ಒಳಗಾದವರು.

ಇ) ಈ ಮಂಡಳಿಯ ಸದಸ್ಯರಾಗಿ ತಮ್ಮ ಪದವಿಯ ಅಧಿಕಾರವನ್ನು ದುರುಪಯೋಗ ಮಾಡಿದ್ದು, ಕೇಂದ್ರ ಸರಕಾರದ ಅಭಿಪ್ರಾಯದಲ್ಲಿ, ಅವರು ಮಂಡಳಿಯ ಸದಸ್ಯರಾಗಿ ಮುಂದುವರೆದರೆ ಸಾರ್ವಜನಿಕರಿಗೆ ತೊಂದರೆ ಆಗಬಹುದು ಎಂದು ಅನಿಸಿದವರು.

2. ಯಾವುದೇ ಸದಸ್ಯರನ್ನು ಅನರ್ಹ ಎಂದು ತೆಗೆದು ಹಾಕುವ ಆದೇಶ ನೀಡುವ ಮುನ್ನ ಸರಕಾರ ಅವರಿಗೆ ತಮ್ಮ ಪರವಾಗಿ ಕಾರಣಗಳನ್ನು ತಿಳಿಸುವ ಸೂಕ್ತ ಅವಕಾಶವನ್ನು ಕೊಡಬೇಕು.

3. ಸೆಕ್ಷನ್ 61ರ ಖಂಡ (1) ಅಥವಾ (5)ರಲ್ಲಿ ಏನೇ ಹೇಳಿದ್ದರೂ, ಸೆಕ್ಷನ್ 62ರ ಕೆಳಗೆ ತೆಗೆದು ಹಾಕಿದ ಸದಸ್ಯರು ಎಂದೂ ಮರು ನೇಮಕಕ್ಕೆ ಅರ್ಹರಲ್ಲ.

ಸದಸ್ಯರ ನಿರ್ಗಮನದಿಂದ ಸ್ಥಳ ಖಾಲಿ ಆಗುವಿಕೆ

**63.** ಸೆಕ್ಷನ್ 62 ರಲ್ಲಿರುವ ಯಾವುದೇ ಕಾರಣಕ್ಕಾಗಿ ಕೇಂದ್ರ ಸಲಹಾ ಮಂಡಳಿಯ ಸದಸ್ಯರನ್ನು ಅನರ್ಹರೆಂದು ತೆಗೆದು ಹಾಕಿದರೆ ಅವರ ಸ್ಥಾನ ಖಾಲಿ ಆಗುವುದು.

ಕೇಂದ್ರ ಸಲಹಾ ಮಂಡಳಿಯ ಸಭೆಗಳು

**64.** ಕೇಂದ್ರ ಸಲಹಾ ಮಂಡಳಿ ಕನಿಷ್ಠ ಆರು ತಿಂಗಳಿಗೊಮ್ಮೆ ಸಭೆ ಸೇರಬೇಕು ಮತ್ತು ಸಭೆಯ ಕಾರ್ಯಕಲಾಪಗಳು ಸರಕಾರ ವಿಧಿಸಿರುವ ನಿಯಮಗಳಿಗನುಸಾರ ನಡೆಯಬೇಕು.

ಕೇಂದ್ರ ಸಲಹಾ ಮಂಡಳಿಯ ಕರ್ತವ್ಯ/ ಕಾರ್ಯಗಳು

**65.** (1) ಕೇಂದ್ರ ಅಂಗವಿಕಲತೆ ಸಲಹಾ ಮಂಡಳಿ ಈ ಕಾಯಿದೆ ವಿಧಿಸಿರುವಂತೆ ಅಂಗವಿಕಲತೆಗೆ ಸಂಬಂಧಪಟ್ಟ ವಿಷಯಗಳಲ್ಲಿ ರಾಷ್ಟ್ರೀಯ ಮಟ್ಟದ ಸಲಹಾ ಮತ್ತು ಸಮಾಲೋಚನಾ ಸಂಸ್ಥೆಯಾಗಿರುತ್ತದೆ. ಅದು ಅಂಗವಿಕಲರ ಸಬಲೀಕರಣ ಮತ್ತು ಅವರ ಹಕ್ಕುಗಳನ್ನು ಕಾರ್ಯರೂಪಕ್ಕೆ ತರಲು ಸತತವಾಗಿ ದುಡಿಯುತ್ತಾ ಸಮಗ್ರವಾದ ಯೋಜನೆಗಳನ್ನು ರೂಪಿಸುವುದು.

(2) ಈ ನಿಟ್ಟಿನಲ್ಲಿ ಮಂಡಳಿ ಕೆಳಕಂಡ ಕೆಲಸಗಳನ್ನು ಮಾಡುವುದು:

ಅಂಗವಿಕಲರ ಏಳ್ಗೆಗೆ ಕಾರ್ಯನೀತಿ ರೂಪಿಸುವುದು, ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಕಾನೂನು ಮತ್ತು ನಿಯಮಗಳನ್ನು ರೂಪಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸಲಹೆ ಕೊಡುವುದು.

(1) ಅಂಗವಿಕಲರ ಆಶಯಗಳು ಮತ್ತು ಸಮಸ್ಯೆಗಳನ್ನು ಕುರಿತು ಕ್ರಮಗಳನ್ನು ತೆಗೆದುಕೊಳ್ಳಲು ರಾಷ್ಟ್ರೀಯ ಕಾರ್ಯನೀತಿ ರೂಪಿಸುವುದು.

(2) ಅಂಗವಿಕಲರಿಗೆ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ಹಾಗೂ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆ ಸ್ಥಾಪನೆಗಳ ಕೆಲಸಗಳನ್ನು ಪರಾಮರ್ಶಿಸುವುದು.

(3) ಅಂಗವಿಕಲರಿಗೆ ಸಂಬಂಧಪಟ್ಟ ವಿಷಯಗಳನ್ನು ಅಧಿಕಾರಗಳು, ಪ್ರಾಧಿಕಾರಗಳು ಮತ್ತು ಅಂತಾರಾಷ್ಟ್ರೀಯ ಸ್ಥಾಪನಗಳೊಂದಿಗೆ ಸಮಾಲೋಚಿಸಿ, ಅಂಗವಿಕಲತೆಗೆ ರಾಷ್ಟ್ರೀಯ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸುವುದು.

(4) ಅಂಗವಿಕಲರಿಗೆ ಅಡಚಣೆ ರಹಿತ ಪರಿಸರ, ಯುಕ್ತ ಅವಕಾಶಗಳು, ಎಲ್ಲಾ ಸೇವೆಗಳು ಮಾಧ್ಯಮಗಳು ಮತ್ತು ಕಟ್ಟಡ ವಿನ್ಯಾಸಗಳಲ್ಲಿ ಎಲ್ಲದರಲ್ಲೂ ಅಂಗವಿಕಲರಿಗೆ ಭೇದಭಾವ ಆಗದಂತೆ, ಅವರು ಸಾಮಾಜಿಕ ಜೀವನದಲ್ಲಿ ಸರಿಸಮನಾಗಿ ಪಾಲ್ಗೊಳ್ಳುವಂತೆ ಖಾತ್ರಿ ಪಡಿಸಬೇಕು.

(5) ಅಂಗವಿಕಲರು ಸಂಪೂರ್ಣವಾಗಿ ಪಾಲ್ಗೊಳ್ಳುವುದರಲ್ಲಿ ಕಾನೂನು, ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳು ಏನು ಪರಿಣಾಮ ಬೀರುತ್ತಿವೆ ಎಂಬುದನ್ನು ವಿಶ್ಲೇಷಣೆ ಮಾಡುತ್ತಿರಬೇಕು.

(6) ಕೇಂದ್ರ ಸರಕಾರ ಕಾಲ ಕಾಲಕ್ಕೆ ಮಂಡಳಿಗೆ ಒಪ್ಪಿಸುವ ಕೆಲಸ ಕಾರ್ಯಗಳನ್ನು ಮಾಡಬೇಕು.

ಅಂಗವಿಕಲತೆ ರಾಜ್ಯ ಸಲಹಾ ಮಂಡಳಿ

**66**. (1) ರಾಜ್ಯ ಸರಕಾರಗಳು ಈ ಕಾಯಿದೆಯಡಿ ಮಾಡಬೇಕಾದ ಕಾರ್ಯಗಳ ನಿರ್ವಹಣೆಗೆ ಯುಕ್ತ ಅಧಿಕಾರಗಳನ್ನು ನೀಡಿ ಆಯಾ ರಾಜ್ಯದ ರಾಜ್ಯ ಅಂಗವಿಕಲತೆ ಸಲಹಾ ಮಂಡಳಿಯನ್ನು ರಚಿಸಬೇಕು.

(2) ರಾಜ್ಯ ಸಲಹಾ ಮಂಡಳಿಯ ಸದಸ್ಯತ್ವ:

ಎ) ರಾಜ್ಯ ಸರಕಾರದ ಅಂಗವಿಕಲರ ಖಾತೆಯ ಸಚಿವರು, ಪದನಿಮಿತ್ತ ಸಭಾಪತಿ.

ಬಿ) ರಾಜ್ಯ ಸರಕಾರದ ಅಂಗಗವಿಕಲರ ಖಾತೆಯ ಉಪಸಚಿವರು, ಪದನಿಮಿತ್ತ ಉಪಸಭಾಪತಿ.

ಸಿ) ರಾಜ್ಯ ಸರಕಾರದ ಕೆಳಕಂಡ ಖಾತೆ/ಇಲಾಖೆಗಳ ಕಾರ್ಯದರ್ಶಿಗಳು, ಪದನಿಮಿತ್ತ ಸದಸ್ಯರಾಗಿರುತ್ತಾರೆ:

ಅಂಗವಿಕಲರ ಖಾತೆ; ಶಾಲಾ ಶಿಕ್ಷಣ, ಸಾಕ್ಷರತೆ ಮತ್ತು ಉನ್ನತ ಶಿಕ್ಷಣ; ಮಹಿಳಾ ಮತ್ತು ಅಭಿವೃದ್ಧಿ; ಹಣಕಾಸು, ಸಿಬ್ಬಂದಿ ಮತ್ತು ತರಬೇತಿ; ಆರೋಗ್ಯ ಮತ್ತು ಕುಟುಂಬ ಕಲ್ಯಾಣ; ಗ್ರಾಮೀಣ ಅಭಿವೃದ್ಧಿ; ಪಂಚಾಯತಿ ರಾಜ್ಯ; ಔದ್ಯೋಗಿಕ ಕಾರ್ಯನೀತಿ ಮತ್ತು ಅಭಿವೃದ್ಧಿ; ಕಾರ್ಮಿಕರು ಮತ್ತು ಉದ್ಯೋಗ; ನಗರಾಭಿವೃದ್ಧಿ, ವಸತಿ ಮತ್ತು ನಗರ ದಾರಿದ್ರ್ಯ ನಿವಾರಣೆ; ವಿಜ್ಞಾನ ಮತ್ತು ತಂತ್ರಜ್ಞಾನ; ಮಾಹಿತಿ ತಂತ್ರಜ್ಞಾನ; ಸಾರ್ವಜನಿಕ ಉದ್ಯೋಗಗಳು, ಯುವಜನ ಮತ್ತು ಕ್ರೀಡಾ ಇಲಾಖೆ; ಸಾರಿಗೆ; ಮತ್ತು ಸರಕಾರಕ್ಕೆ ಸೂಕ್ತವೆನಿಸಿದ ಇನ್ಯಾವುದೇ ಇಲಾಖೆ.

ಡಿ) ಮೂರು ಮಂದಿ ಶಾಸಕರು ಇವರಲ್ಲಿ ಇಬ್ಬರು ವಿಧಾನ ಸಭೆಯಿಂದ ಒಬ್ಬರು ವಿಧಾನ ಪರಿಷತ್‌ನಿಂದ ಚುನಾಯಿತರಾಗುವವರು ವಿಧಾನ ಪರಿಷತ್ತು ಇಲ್ಲದಿದ್ದಲ್ಲಿ ಮೂವರೂ ವಿಧಾನ ಸಭೆಯಿಂದ ಚುನಾಯಿತರಾಗುವರು;

ಇ) ರಾಜ್ಯ ಸರಕಾರ ಕೆಳಕಂಡ ಸದಸ್ಯರನ್ನು ನೇಮಕ ಮಾಡುವುದು:

i) ಅಂಗವಿಕಲತೆ ಕ್ಷೇತ್ರದಲ್ಲಿ ತಜ್ಞರಾದ ಐದು ಸದಸ್ಯರು.

ii) ಐದು ಜಿಲ್ಲೆಗಳಿಂದ ಪ್ರತಿನಿಧಿಗಳು ಆವರ್ತನಗೊಳ್ಳುವರು. ಆದರೆ ಮೇಲೆ ಹೇಳಿದ ಜಿಲ್ಲಾ ಪ್ರತಿನಿಧಿಗಳನ್ನು ಆಯಾ ಜಿಲ್ಲಾ ಆಡಳಿತ ಶಿಫಾರಸ್ಸು ಮಾಡಬೇಕು.

iii) ಅಂಗವಿಕಲರಿಗಾಗಿ ದುಡಿಯುತ್ತಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ಅಂಗವಿಕಲ ಸಂಘಟನೆಗಳನ್ನು ಪ್ರತಿನಿಧಿಸಲು ಹತ್ತು ಮಂದಿ ಸದಸ್ಯರು. ಇವರಲ್ಲಿ ಆದಷ್ಟೂ ಹೆಚ್ಚು ಜನ ಅಂಗವಿಕಲರು ಇರಬೇಕು.

(ಶರತ್ತು) ಮೇಲೆ ಹೇಳಿದ ಹತ್ತು ಸದಸ್ಯರ ಪೈಕಿ ಐವರು ಮಹಿಳೆಯರು ಇರಬೇಕು, ಕನಿಷ್ಠ ಒಬ್ಬರು ಅನುಸೂಚಿತ ಜಾತಿಯವರಾಗಿರಬೇಕು ಮತ್ತು ಒಬ್ಬರು ಅನುಸೂಚಿತ ಬುಡಕಟ್ಟಿನ ಜನಾಂಗದವರಾಗಿರಬೇಕು.

iv) ಮೂವರು ರಾಜ್ಯ ವಾಣಿಜ್ಯ ಮಹಾಮಂಡಳಿಯ ಪ್ರತಿನಿಧಿಗಳಿರಬೇಕು.

(ಎಫ್) ರಾಜ್ಯ ಸರ್ಕಾರದ ಅಂಗವಿಕಲರ ಇಲಾಖೆಯಲ್ಲಿ ಜಂಟಿ ಕಾರ್ಯದರ್ಶಿ ದರ್ಜೆಯವರು ಮಂಡಳಿಯ ಪದನಿಮಿತ್ತ ಕಾರ್ಯದರ್ಶಿ ಆಗಿರುತ್ತಾರೆ.

ಮಂಡಳಿಯ ಸದಸ್ಯತ್ವದ ಶರತ್ತುಗಳು

**67**. 1. ಈ ಕಾಯಿದೆಯಲ್ಲಿ, ಅನ್ಯಥಾ ಹೇಳದಿದ್ದಲ್ಲಿ, ಸೆಕ್ಷನ್ 66(2) ಖಂಡ (ಇ) ಅಡಿಯಲ್ಲಿ ನೇಮಕಗೊಂಡಿರುವ ರಾಜ್ಯ ಮಂಡಳಿಯ ಸದಸ್ಯರ ಅವಧಿ ನೇಮಕಗೊಂಡ ದಿನದಿಂದ ಮೂರು ವರ್ಷಗಳಾಗಿರುತ್ತದೆ. ಆದರೆ ಕಾಲಾವಧಿಯ ನಂತರ ನಿವೃತ್ತಗೊಳ್ಳಬೇಕಾದ ಸದಸ್ಯರ ಸ್ಥಳಕ್ಕೆ ಮತ್ತೊಬ್ಬ ಸದಸ್ಯರು ನೇಮಕಗೊಂಡು ಪದವಿ ಸ್ವೀಕರಿಸುವ ತನಕ ನಿವೃತ್ತ ಸದ್ಯಸರು ಆ ಸ್ಥಾನದಲ್ಲಿ ಮುಂದುವರೆಯುತ್ತಾರೆ.

2. ರಾಜ್ಯ ಸರಕಾರ ಸೆಕ್ಷನ್ 66(2) ಖಂಡ (ಇ)ನ ಕೆಳಗೆ ನೇಮಕ ಮಾಡಿರುವ ಯಾವುದೇ ಸದಸ್ಯರನ್ನು, ಸೂಕ್ತವೆನಿಸಿದಲ್ಲಿ, ತೆಗೆದು ಹಾಕಬಹುದು. ಆದರೆ ತೆಗೆದು ಹಾಕುವ ಆದೇಶದ ಮುನ್ನ ಅವರಿಗೆ ತಮ್ಮ ಪರವಾಗಿ ಕಾರಣಗಳನ್ನು ಮಂಡಿಸಲು ಸೂಕ್ತ ಅವಕಾಶ ಕೊಡಬೇಕು.

3. ಸೆಕ್ಷನ್ 66(2) ಖಂಡ (ಇ) ಕೆಳಗೆ ನೇಮಕಗೊಂಡಿರುವ ಸದಸ್ಯರು ಯಾವಾಗ ಬೇಕಾದರೂ, ರಾಜ್ಯ ಸರಕಾರಕ್ಕೆ ಪತ್ರ ಮುಖೇನ ತಿಳಿಸಿ, ತಮ್ಮ ಪದವಿಗೆ ರಾಜೀನಾಮೆ ನೀಡಬಹುದು. ಹೀಗಾದಾಗ ಮಂಡಳಿಯಲ್ಲಿ ಅವರ ಸ್ಥಾನ ಖಾಲಿ ಆಗುವುದು.

4. ಮೇಲೆ ಹೇಳಿದಂತೆ, ಮಂಡಳಿಯ ಸದಸ್ಯತ್ವದಲ್ಲಿ ಖಾಲಿಯಾದ ಸ್ಥಳಕ್ಕೆ ರಾಜೀನಾಮೆ ನೀಡಿದ ಸದಸ್ಯರ ಅವಧಿಯಲ್ಲಿ ಉಳಿದ ಕಾಲಾವಧಿಗೆ ರಾಜ್ಯ ಸರಕಾರ ಬೇರೊಬ್ಬರನ್ನು ನೇಮಕ ಮಾಡಬಹುದು

5. ಮೇಲೆ ಹೇಳಿದ ಸೆಕ್ಷನ್ 66(2)ರ ಉಪ ಖಂಡ (i) ಅಥವಾ (iii) ಕೆಳಗೆ ನೇಮಕಗೊಂಡ ಸದಸ್ಯರು (ತಜ್ಞರು ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು) ಮರು ನೇಮಕಕ್ಕೆ ಅರ್ಹರಾಗಿರುತ್ತಾರೆ.

6. ಸೆಕ್ಷನ್ 66 (2)ರ ಉಪ ಖಂಡ (i) ಮತ್ತು (ii) ರ ಕೆಳಗೆ ನೇಮಕ ಗೊಂಡಿರುವ ಸದಸ್ಯರಿಗೆ (ತಜ್ಞರು ಮತ್ತು ಜಿಲ್ಲಾ ಪ್ರತಿನಿಧಿಗಳು) ಸರಕಾರ ವಿಧಿಸಿರುವವಂತೆ ಭತ್ಯೆ ನೀಡಲಾಗುವುದು.

ಅನರ್ಹತೆ

**68**. ರಾಜ್ಯ ಸಲಹಾ ಮಂಡಳಿಯ ಸದಸ್ಯರಾಗಲು ಕೆಳಕಂಡವರು ಅನರ್ಹರಾಗಿರುತ್ತಾರೆ:

(ಎ) ಎಂದಾದರೂ ದಿವಾಳಿ ಎಂದು ಘೋಷಿಸಲ್ಪಟ್ಟವರು ಅಥವಾ ತಮ್ಮ ಸಾಲಗಳನ್ನು ತೀರಿಸುವುದನ್ನು ನಿಲ್ಲಿಸಿದವರು ಅಥವಾ ತಮಗೆ ಸಾಲ ಕೊಟ್ಟವರೊಡನೆ ಅಕ್ರಮವಾಗಿ ರಾಜಿ ಮಾಡಿಕೊಂಡಿರುವವರು; ಅಥವಾ

(ಬಿ) ಮಾನಸಿಕವಾಗಿ ಅಸ್ವಸ್ಥರು ಮತ್ತು ಹಾಗೆಂದು ಸಕ್ಷಮ ನ್ಯಾಯಲಯ ನೀಡಿರುವ ಆದೇಶಕ್ಕೆ ಒಳಗಾದವರು; ಅಥವಾ

(ಸಿ) ರಾಜ್ಯ ಸರಕಾರ ಅಶ್ಲೀಲ ಎಂದು ಪರಿಗಣಿಸುವ ಅಪರಾಧಕ್ಕೆ ದಂಡನೆಗೆ ಒಳಗಾದವರು; ಅಥವಾ

(ಡಿ) ಈ ಕಾಯಿದೆಯಡಿ ಯಾವುದಾದರೂ ಅಪರಾಧಕ್ಕೆ ದಂಡನೆಗೆ ಒಳಗಾದವರು; ಅಥವಾ

ಈ) ಈ ಮಂಡಳಿಯ ಸದಸ್ಯರಾಗಿ ತಮ್ಮ ಪದವಿಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದು, ರಾಜ್ಯ ಸರಕಾರದ ಅಭಿಪ್ರಾಯದಲ್ಲಿ, ಅವರು ಮಂಡಳಿಯ ಸದಸ್ಯರಾಗಿ ಮುಂದುವರೆದರೆ ಸಾರ್ವಜನಿಕರಗೆ ತೊಂದರೆಯಾಗಬಹುದು ಎಂದು ಅನಿಸಿದವರು.

2. ಯಾವುದೇ ಸದಸ್ಯರನ್ನು ಅನರ್ಹರು ಎಂದು ತೆಗೆದುಹಾಕುವ ಆದೇಶ ನೀಡುವ ಮುನ್ನ ಸರಕಾರ ಅವರಿಗೆ ತಮ್ಮ ಪರವಾಗಿ ಕಾರಣಗಳನ್ನು ನೀಡಲು ಸೂಕ್ತ ಅವಕಾಶ ನೀಡಬೇಕು.

3. ಸೆಕ್ಷನ್ 67 ರ ಖಂಡ (1) ಅಥವಾ (5)ರ ಕೆಳಗೆ ಏನೇ ಹೇಳಿದ್ದರೂ, ಈ ಸೆಕ್ಷನ್ ಕೆಳಗೆ ತೆಗೆದು ಹಾಕಲಾಗಿರುವ ಸದಸ್ಯರು ಮರುನೇಮಕಕ್ಕೆ ಅರ್ಹರಲ್ಲ.

ಸ್ಥಳ ಖಾಲಿ ಆಗುವಿಕೆ

**69**. ರಾಜ್ಯ ಸಲಹಾ ಮಂಡಳಿಯ ಸದಸ್ಯರು ಯಾರಾದರೂ ಸೆಕ್ಷನ್ 68ರಲ್ಲಿ ಹೇಳಿರುವ ಕಾರಣಗಳಿಗೆ ಅನರ್ಹರು ಎಂದಾದರೆ ಅವರ ಸ್ಥಳ ಖಾಲಿ ಆಗುವುದು.

ರಾಜ್ಯ ಸಲಹಾ ಮಂಡಳಿಯ ಸಭೆಗಳು

**70**. ರಾಜ್ಯ ಸಲಹಾ ಮಂಡಳಿಯು ಕನಿಷ್ಠ ಆರು ತಿಂಗಳಿಗೊಮ್ಮೆ ಸಭೆ ಸೇರಬೇಕು ಮತ್ತು ಅದರ ಕಾರ್ಯಕಲಾಪಗಳು ಸರಕಾರ ವಿಧಿಸಿರುವ ನಿಯಮಗಳ ಅನುಸಾರ ನಡೆಯಬೇಕು.

ಸಲಹಾ ಮಂಡಳಿಯ ಕರ್ತವ್ಯಗಳು

**71**. (1) ಈ ಕಾಯಿದೆಯಲ್ಲಿ ವಿಧಿಸಿರುವಂತೆ ರಾಜ್ಯ ಸಲಹಾ ಮಂಡಳಿಯು ಅಂಗವಿಕಲತೆಗೆ ಸಂಬಂಧಪಟ್ಟ ವಿಷಯಗಳಿಗೆ ರಾಜ್ಯ ಸಲಹಾ ಮತ್ತು ಸಮಾಲೋಚನಾ ಮಂಡಳಿಯಾಗಿರುತ್ತದೆ. ಇದು ರಾಜ್ಯದಲ್ಲಿ ಅಂಗವಿಕಲರ ಸಬಲೀಕರಣ ಮತ್ತು ಅವರ ಹಕ್ಕುಗಳ ಅನುಷ್ಠಾನಕ್ಕೆ ಸತತವಾಗಿ ಶ್ರಮಿಸುತ್ತಾ ಸಮಗ್ರವಾದ ಕಾರ್ಯನೀತಿಯನ್ನು ರೂಪಿಸುತ್ತಿರಬೇಕು.

2. ಈ ನಿಟ್ಟಿನಲ್ಲಿ ಮಂಡಳಿ ವಿಶೇಷವಾಗಿ ಕೆಳಕಂಡ ಕೆಲಸಗಳನ್ನು ಮಾಡಬೇಕು

(ಎ) ಅಂಗವಿಕಲರ ಏಳಿಗೆಗೆ ಕಾರ್ಯಕ್ರಮಗಳು, ಯೋಜನೆಗಳು, ಕಾನೂನುಗಳು ಮತ್ತು ಕಾರ್ಯನೀತಿ ರೂಪಿಸಲು, ರಾಜ್ಯಸರ್ಕಾರಕ್ಕೆ ಸಲಹೆಗಳನ್ನು ಕೊಡಬೇಕು.

(ಬಿ) ಅಂಗವಿಕಲರ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯದ ಕಾರ್ಯ ನೀತಿಯನ್ನು ರೂಪಿಸಬೇಕು.

(ಸಿ) ಅಂಗವಿಕಲತೆ ಕುರಿತಾದ ಸರಕಾರದ ಎಲ್ಲಾ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಕಾರ್ಯಕ್ರಮಗಳು, ಚಟುವಟಿಕೆಗಳನ್ನು ಸಂಚಾಲನೆ ಮತ್ತು ಪರಿಶೀಲನೆ ಮಾಡುತ್ತಿರಬೇಕು.

(ಡಿ) ಅಂಗವಿಕಲರ ಕುರಿತಾದ ವಿಷಯಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಡನೆ ಚರ್ಚಿಸಿ ಅವರಿಗೆ ಸೂಕ್ತ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರಾಜ್ಯದ ಯೋಜನೆಗಳಲ್ಲಿ ಅಳವಡಿಸಬೇಕು.

(ಇ) ಅಡಚಣೆ ರಹಿತ ಪರಿಸರ, ಯುಕ್ತ ಅವಕಾಶಗಳು, ಎಲ್ಲಾ ಸೇವೆಗಳು, ಮಾಧ್ಯಮಗಳು ಮತ್ತು ಕಟ್ಟಡ ವಿನ್ಯಾಸಗಳಲ್ಲಿ ಅಂಗವಿಕಲರಿಗೆ ಭೇದಭಾವ ಇಲ್ಲದಿರುವಂತೆ, ಅವರು ಸಾಮಾಜಿಕ ಜೀವನದಲ್ಲಿ ಸರಿಸಮವಾಗಿ ಪಾಲ್ಗೊಳ್ಳುವಂತೆ ಖಾತ್ರಿ ಪಡಿಸಬೇಕು.

(ಎಫ್) ಅಂಗವಿಕಲರು ಸಂಪೂರ್ಣವಾಗಿ ಪಾಲ್ಗೊಳ್ಳುವುದರಲ್ಲಿ ಕಾನೂನು, ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳು ಏನು ಪರಿಣಾಮ ಬೀರುತ್ತಿವೆ ಎಂಬುದನ್ನು ವಿಶ್ಲೇಷಣೆ ಮಾಡುತ್ತಿರಬೇಕು.

(ಜಿ) ರಾಜ್ಯ ಸರಕಾರ ಕಾಲಕಾಲಕ್ಕೆ ಮಂಡಳಿಗೆ ಒಪ್ಪಿಸುವಂತಹ ಕೆಲಸಗಳನ್ನು ಮಾಡಬೇಕು.

ಜಿಲ್ಲಾಮಟ್ಟದ ಸಮಿತಿ

**72**. ರಾಜ್ಯ ಸರಕಾರ ಜಿಲ್ಲೆಗಳಲ್ಲಿ ಅಂಗವಿಕಲತೆ ಕುರಿತು ಕೆಲಸ/ಚಟುವಟಿಕೆಗಳನ್ನು ನಿರ್ವಹಿಸಲು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಬೇಕು.

ಸ್ಥಳ ಖಾಲಿ ಇದ್ದ ಮಾತ್ರಕ್ಕೆ ಕಾರ್ಯ ಕಲಾಪಗಳು ಅಸಿಂಧು ಆಗಲಾರವು

**73**. ಕೇಂದ್ರ ಸಲಹಾ ಮಂಡಳಿ ಅಥವಾ ರಾಜ್ಯಸಲಹಾ ಮಂಡಳಿ ಅಥವಾ ಜಿಲ್ಲಾ ಮಟ್ಟದ ಸಮಿತಿಯ ಸದಸ್ಯತ್ವದಲ್ಲಿ ಖಾಲಿ ಸ್ಥಳಗಳಿವೆ ಅಥವಾ ನಿಗದಿತ ಸಂಖ್ಯೆಗಿಂತ ಕಡಿಮೆ ಸದಸ್ಯರಿದ್ದಾರೆ ಅಥವಾ ಮಂಡಳಿ ಅಥವಾ ಸಮಿತಿಯ ರಚನೆಯಲ್ಲಿ ದೋಷವಿದೆ ಎಂಬ ಒಂದೇ ಕಾರಣಕ್ಕೆ ಅದರ ಯಾವುದೇ ಕಾರ್ಯ ಕಲಾಪಗಳನ್ನು ಪ್ರಶ್ನಿಸುವಂತಿಲ್ಲ.

## ಅಧ್ಯಾಯ – 12

## ಅಂಗವಿಕಲರ ಮುಖ್ಯ ಆಯುಕ್ತರು ಮತ್ತು ರಾಜ್ಯ ಆಯುಕ್ತರು

ಆಯುಕ್ತರ ನೇಮಕಾತಿ

**74.** 1) ಕೇಂದ್ರ ಸರ್ಕಾರ, ಈ ಕಾಯಿದೆಯ ಉದ್ದೇಶಗಳನ್ನು ಪೂರೈಸಲು, ಒಬ್ಬ ಮುಖ್ಯ ಆಯುಕ್ತರನ್ನು ನೇಮಿಸುವುದು.

2) ಅಗತ್ಯವೆನಿಸಿದರೆ, ಮುಖ್ಯ ಆಯುಕ್ತರಿಗೆ ನೆರವು ನೀಡಲು ಇಬ್ಬರು ಆಯುಕ್ತರನ್ನು ನೇಮಕ ಮಾಡಬಹುದು. ಈ ಇಬ್ಬರಲ್ಲಿ ಒಬ್ಬರು ಅಂಗವಿಕಲರಾಗಿರಬೇಕು.

3) ಅಂಗವಿಕಲರ ಪುನರ್ವಸತಿ ಕುರಿತು ವಿಶೇಷ ಜ್ಞಾನ ಅಥವಾ ಕಾರ್ಯ ಅನುಭವ ಇದ್ದ ಹೊರತು ಮುಖ್ಯ ಆಯುಕ್ತರಾಗಿ ನೇಮಕವಾಗಲು ಅರ್ಹರಲ್ಲ.

4) ಮುಖ್ಯ ಆಯುಕ್ತರು ಮತ್ತು ಆಯುಕ್ತರ ವೇತನ ಮತ್ತು ಇತರ ಭತ್ಯೆಗಳು, ಅವರ ಪಿಂಚಣಿ ಮತ್ತು ನಿವೃತ್ತಿ ಭತ್ಯೆಗಳು ಇತ್ಯಾದಿಗಳನ್ನು ಹಾಗೂ ಅವರ ಕೆಲಸದ ನಿಬಂಧನೆಗಳು ಮತ್ತು ಶರತ್ತುಗಳನ್ನು ಕೇಂದ್ರ ಸರ್ಕಾರ ನಿಗದಿಸುವುದು.

5) ಮುಖ್ಯ ಆಯುಕ್ತರು ತಮ್ಮ ಕರ್ತವ್ಯಗಳನ್ನು ನಿಭಾಯಿಸಲು ಎಂತಹ ಅಧಿಕಾರಿಗಳು ಮತ್ತು ಸಿಬ್ಬಂದಿ (ಅರ್ಹತೆ ಮತ್ತು ದರ್ಜೆಯ) ವರ್ಗದವರು ಅಗತ್ಯ ಎಂದು ಸರ್ಕಾರ ನಿರ್ಧರಿಸಿ ಅಂತಹವರನ್ನು ಅವರ ಸಹಾಯಕ್ಕೆ ನೇಮಿಸಬೇಕು.

6) ಮೇಲೆ ಹೇಳಿದ ಅಧಿಕಾರಿಗಳು ಮತ್ತು ಸಿಬ್ಬಂದಿ ಮುಖ್ಯ ಆಯುಕ್ತರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುವರು.

7) ಮೇಲೆ ಹೇಳಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳು ಕೇಂದ್ರ ಸರ್ಕಾರ ನಿಗದಿಸಿದಂತೆ ಇರುವುವು.

8) ಮುಖ್ಯ ಆಯುಕ್ತರ ಸಹಾಯಕ್ಕೆ ಹನ್ನೊಂದು ಜನ ತಜ್ಞರ ಸಲಹಾ ಸಮಿತಿಯನ್ನು ರಚಿಸಲಾಗುತ್ತದೆ. ಸರ್ಕಾರ ವಿವಿಧ ರೀತಿಯ ಅಂಗವಿಕಲತೆಯಲ್ಲಿ ತಜ್ಞರಾದವರನ್ನು ಈ ಸಮಿತಿಗೆ ನೇಮಿಸುತ್ತದೆ.

ಮುಖ್ಯ ಆಯುಕ್ತರ ಕಾರ್ಯ, ಕರ್ತವ್ಯಗಳು

**75.** 1) ಮುಖ್ಯ ಆಯುಕ್ತರು

ಎ) ಈ ಕಾಯಿದೆಯ ಯಾವುದೇ ಭಾಗಕ್ಕೆ ವಿರುದ್ಧವಾದ ಕಾನೂನು, ಕಾರ್ಯ ನೀತಿ ಕಾರ್ಯಕ್ರಮ ಅಥವಾ ಪದ್ಧತಿಗಳಿದ್ದರೆ ಅವುಗಳನ್ನು ಸ್ವತಃ ಅಥವಾ ಇತರರ ಹೇಳಿಕೆಯ ಮೇರೆಗೆ ಗುರುತಿಸಿ ಅವುಗಳ ತಿದ್ದುಪಡಿ ಅಥವಾ ರದ್ದತಿಗೆ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ತಿಳಿಸಬೇಕು.

ಬಿ) ಅಂಗವಿಕಲರ ಹಕ್ಕುಗಳ ನಿರಾಕರಣೆ ಮತ್ತು ಅವರ ಸುರಕ್ಷತೆ ಕೇಂದ್ರ ಸರ್ಕಾರದ ಹೊಣೆಯಾಗಿರುವಲ್ಲಿ ಅವುಗಳ ಉಲ್ಲಂಘನೆಯಾಗಿದ್ದು ತಿಳಿದು ಬಂದರೆ ಸ್ವತಃ ಅಥವಾ ಇತರರ ಹೇಳಿಕೆಯ ಮೇರೆಗೆ, ವಿಚಾರಣೆ ಕೈಗೊಳ್ಳಬೇಕು.

ಸಿ) ಈ ಕಾಯಿದೆಯಡಿ ಅಥವಾ ಇನ್ಯಾವುದೇ ಕಾಯಿದೆಯಡಿ ಅಂಗವಿಕಲರ ರಕ್ಷಣೆಗೆಂದು ನಿಗದಿಸಿರುವ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸಬೇಕು.

ಡಿ) ಅಂಗವಿಕಲರು ಅವರ ಹಕ್ಕುಗಳನ್ನು ಅನುಭವಿಸುವುದರಲ್ಲಿ ಅಡ್ಡಿಯಾಗುವಂತಹ ವಿಷಯಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸಬೇಕು.

ಇ) ಅಂಗವಿಕಲರ ಹಕ್ಕುಗಳ ಕುರಿತು ಇರುವ ಅಂತರ್ರಾಷ್ಟ್ರೀಯ ಒಡಂಬಡಿಕೆಗಳು ಮತ್ತು ಒಪ್ಪಂದಗಳನ್ನು ಅಧ್ಯಯನ ಮಾಡಿ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸೂಕ್ತ ಸಲಹೆಗಳನ್ನು ಕೊಡಬೇಕು.

ಎಫ್) ಅಂಗವಿಕಲರ ಹಕ್ಕುಗಳ ವಿಷಯದಲ್ಲಿ ಸಂಶೋಧನೆಯನ್ನು ಕೈಗೊಳ್ಳಬೇಕು.

ಜಿ) ಅಂಗವಿಕಲರ ಹಕ್ಕುಗಳು ಮತ್ತು ಅವರ ಸಂರಕ್ಷಣೆಗೆ ಇರುವ ಸುರಕ್ಷಿತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕು.

ಹೆಚ್) ಈ ಕಾಯಿದೆಯಲ್ಲಿ ಅಂಗವಿಕಲರಿಗೆಂದು ಆಯೋಜಿಸಿರುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಅನುಷ್ಠಾನದ ಮೇಲೆ ನಿಗಾ ಇಡಬೇಕು.

ಐ) ಅಂಗವಿಕಲರಿಗೆಂದು ಕೇಂದ್ರ ಸರ್ಕಾರ ಹಂಚಿಕೆ ಮಾಡಿರುವ ಹಣ ಸರಿಯಾಗಿ ವಿನಿಯೋಗ ಆಗುತ್ತಿದೆಯೇ ಎಂದು ನೋಡಬೇಕು.

ಜೆ) ಕೇಂದ್ರ ಸರ್ಕಾರ ನಿಯೋಜಿಸುವ ಇತರ ಕಾರ್ಯಗಳನ್ನು ಮಾಡಬೇಕು.

2) ಮುಖ್ಯ ಆಯುಕ್ತರು ತಮ್ಮ ಕೆಲಸದ ನಿರ್ವಹಣೆಯಲ್ಲಿ ಅವರ ಸಹಾಯಕ್ಕೆಂದು ನೇಮಕಗೊಂಡಿರುವ ಆಯುಕ್ತರ ಸಲಹೆಗಳನ್ನು ಕೇಳಬೇಕು.

**76**. ಸೆಕ್ಷನ್ 75(ಬಿ) ಕೆಳಗೆ ಮುಖ್ಯ ಆಯುಕ್ತರು ಯಾವುದೇ ಅಧಿಕಾರ ಅಥವಾ ಪ್ರಾಧಿಕಾರಕ್ಕೆ ಸಲಹೆಗಳನ್ನು ನೀಡಿದಲ್ಲಿ, ಆ ಅಧಿಕಾರ ಮೂರು ತಿಂಗಳೊಳಗೆ ಅವಶ್ಯವಾದ ಕ್ರಮಗಳನ್ನು ತೆಗೆದುಕೊಂಡು ಮುಖ್ಯ ಆಯುಕ್ತರಿಗೆ ವರದಿಯನ್ನು ನೀಡಬೇಕು. ಮುಖ್ಯ ಆಯುಕ್ತರ ಸಲಹೆಗಳ ಮೇರೆಗೆ ಅಧಿಕಾರಗಳ ಕ್ರಮ

ಆದರೆ ಅಧಿಕಾರ ಮುಖ್ಯ ಆಯುಕ್ತರ ಸಲಹೆಯನ್ನು ಒಪ್ಪದಿದ್ದರೆ ಮೂರು ತಿಂಗಳುಗಳೊಳಗೆ ಸಲಹೆಯನ್ನು ಏಕೆ ಒಪ್ಪುತ್ತಿಲ್ಲ ಎಂದು ಕಾರಣಗಳನ್ನು ತಿಳಿಸಬೇಕು ಅಂತೆಯೇ ಬಾಧಿತ ವ್ಯಕ್ತಿಗೂ ತಿಳಿಸಬೇಕು.

1908ರ 5 **77**. (1) ಮುಖ್ಯ ಆಯುಕ್ತರಿಗೆ ತಮ್ಮ ಕೆಲಸಗಳನ್ನು ನಿರ್ವಹಿಸುವಲ್ಲಿ 1908 ರ ದಿವಾಣಿ ಪ್ರಕ್ರಿಯಾ ಸಂಹಿತೆ (CPC)ಯಲ್ಲಿ ದಿವಾಣಿ ನ್ಯಾಯಾಧೀಶರಿಗೆ ಕೆಳಕಂಡ ವಿಷಯಗಳಲ್ಲಿ ಇರುವ ಅಧಿಕಾರಗಳೆಲ್ಲವೂ ಇರುತ್ತದೆ:

ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಅವರು ಕಡ್ಡಾಯವಾಗಿ ಬರುವಂತೆ ಆದೇಶಿಸುವುದು.

ಬಿ) ದಾಖಲೆಗಳನ್ನು ಶೋಧಿಸಿ ಹಾಜರುಪಡಿಸಲು ಆದೇಶ ನೀಡುವುದು.

ಸಿ) ಯಾವುದೇ ಕಛೇರಿ ಅಥವಾ ನ್ಯಾಯಾಲಯದಿಂದ ಸಾರ್ವಜನಿಕ ದಾಖಲೆ ಅಥವಾ ದಾಖಲೆಯ ನಕಲು ತರಿಸುವುದು.

ಡಿ) ಶಪಥ ಪತ್ರ (ಅಫಿಡವಿಟ್ಟು) ಮೂಲಕ ಸಾಕ್ಷ್ಯ ಪಡೆಯುವುದು.

ಇ) ಸಾಕ್ಷಿಗಳು ಮತ್ತು ದಾಖಲೆಗಳ ಪರೀಕ್ಷೆಗೆಂದು ನಿಯುಕ್ತ ಅಧಿಕಾರಿ (ವ್ಯಕ್ತಿ)ಗಳನ್ನು ನೇಮಿಸುವುದು

1860ರ 45 (2) ಮುಖ್ಯ ಆಯುಕ್ತರ ಸಮ್ಮುಖದಲ್ಲಿ ನಡೆಯುವ ಕಲಾಪಗಳನ್ನು ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 193 ಮತ್ತು 228ಗಳ ಮಟ್ಟಿಗೆ ನ್ಯಾಯಾಲಯದ ಕಲಾಪ ಎಂದೇ ಪರಿಗಣಿಸಲಾಗುವುದು.

**78**. 1) ಮುಖ್ಯ ಆಯುಕ್ತರು ಕೇಂದ್ರ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಒಪ್ಪಿಸಬೇಕು. ವಾರ್ಷಿಕ ವರದಿಯ ತನಕ ವಿಳಂಬ ಮಾಡಲು ಸಾಧ್ಯವಾಗದ ಯಾವುದಾದರೂ ಮುಖ್ಯವಾದ ಅಥವಾ ಜರೂರಿ ವಿಷಯವಿದ್ದಲ್ಲಿ ವಿಶೇಷ ವರದಿಯನ್ನು ಮಧ್ಯಂತರದಲ್ಲಿ ಒಪ್ಪಿಸಬಹುದು. ಮುಖ್ಯ ಆಯುಕ್ತರ ವಾರ್ಷಿಕ ಹಾಗೂ ವಿಶೇಷ ವರದಿಗಳು

2) ಮುಖ್ಯ ಆಯುಕ್ತರ ವಾರ್ಷಿಕ ಹಾಗೂ ವಿಶೇಷ ವರದಿಗಳನ್ನು ಕೇಂದ್ರ ಸರ್ಕಾರ ಸಂಸತ್ತಿನ ಎರಡೂ ಸಭೆಗಳಲ್ಲಿ ಮಂಡಿಸಬೇಕು. ಅವುಗಳೊಂದಿಗೆ ಆ ವಿಷಯದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ ಅಥವಾ ಆಯುಕ್ತರ ಸಲಹೆಯನ್ನು ಏಕೆ ನಿರಾಕರಿಸಲಾಗಿದೆ ಎಂದು ಕಾರಣಗಳನ್ನು ತಿಳಿಸಬೇಕು.

3) ವಾರ್ಷಿಕ ಮತ್ತು ವಿಶೇಷ ವರದಿಗಳು ಕೇಂದ್ರ ಸರ್ಕಾರ ನಿಗದಿಸಿರುವ ನಮೂನೆಯಲ್ಲಿದ್ದು, ಅಗತ್ಯವಾದ ವಿವರಗಳನ್ನು ನೀಡಬೇಕು.

**79**. 1) ಈ ಕಾಯಿದೆಯ ಉದ್ದೇಶಗಳನ್ನು ಪೂರೈಸಲು ರಾಜ್ಯ ಸರ್ಕಾರ ರಾಜ್ಯದ ಅಂಗವಿಕಲರ ಆಯುಕ್ತರನ್ನು ನೇಮಿಸುವುದು ರಾಜ್ಯ ಆಯುಕ್ತರ ನೇಮಕಾತಿ

2) ಅಂಗವಿಕಲರ ಪುನರ್ವಸತಿಯಲ್ಲಿ ವಿಶೇಷ ಜ್ಞಾನ ಅಥವಾ ಕಾರ್ಯ ಅನುಭವ ಇಲ್ಲದವರು ರಾಜ್ಯ ಆಯುಕ್ತರಾಗಿ ನೇಮಕವಾಗಲು ಅರ್ಹರಲ್ಲ.

3) ರಾಜ್ಯ ಆಯುಕ್ತರ ವೇತನ, ಭತ್ಯೆಗಳು, ಪಿಂಚಣಿ ಮತ್ತು ನಿವೃತ್ತಿ ಭತ್ಯೆಗಳನ್ನು ಹಾಗೂ ಅವರ ಕೆಲಸದ ನಿಬಂಧನೆಗಳು ಮತ್ತು ಶರತ್ತುಗಳನ್ನು ರಾಜ್ಯ ಸರ್ಕಾರ ನಿಗದಿಸುವುದು.

4) ರಾಜ್ಯ ಆಯುಕ್ತರು ತಮ್ಮ ಕರ್ತವ್ಯಗಳನ್ನು ನಿಭಾಯಿಸಲು ಎಂತಹ (ಕ್ಷಮತೆಯುಳ್ಳ ಮತ್ತು ದರ್ಜೆಯ) ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಅಗತ್ಯ ಎಂದು ನಿರ್ಧರಿಸಿ ರಾಜ್ಯ ಸರ್ಕಾರ ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅವರಿಗೆ ಒದಗಿಸಬೇಕು.

5) ಮೇಲೆ ಹೇಳಿದ ಅಧಿಕಾರಿಗಳು ಮತ್ತು ಸಿಬ್ಬಂದಿ ಆಯುಕ್ತರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುವರು.

6) ಮೇಲೆ ಹೇಳಿದ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನ ಮತ್ತು ಭತ್ಯೆಗಳು ರಾಜ್ಯ ಸರ್ಕಾರ ನಿಗದಿಸಿದಂತೆ ಇರುವುವು.

7) ರಾಜ್ಯ ಆಯುಕ್ತರ ಸಹಾಯಕ್ಕೆ ಐದು ಜನ ತಜ್ಞರ ಸಲಹಾ ಮಂಡಳಿಯನ್ನು ರಚಿಸಲಾಗುವುದು. ವಿವಿಧ ರೀತಿಯ ಅಂಗವಿಕಲತೆಯಲ್ಲಿ ತಜ್ಞರಾದವರನ್ನು ಮಂಡಳಿಗೆ ನೇಮಿಸಲಾಗುವುದು.

ರಾಜ್ಯ ಆಯುಕ್ತರ ಕರ್ತವ್ಯಗಳು

**80**. 1. ರಾಜ್ಯ ಆಯುಕ್ತರು

ಎ) ಈ ಕಾಯಿದೆಯ ಯಾವುದೇ ಭಾಗಕ್ಕೆ ವಿರುದ್ಧವಾದ ಕಾನೂನು, ಕಾರ್ಯನೀತಿ, ಕಾರ್ಯಕ್ರಮ ಅಥವಾ ಪದ್ಧತಿಗಳಿದ್ದರೆ, ಅವುಗಳನ್ನು ಸ್ವತಃ ಅಥವಾ ಇತರರ ಹೇಳಿಕೆಯ ಮೇರೆಗೆ ಗುರುತಿಸಿ, ಅವುಗಳ ತಿದ್ದುಪಡಿ ಅಥವಾ ರದ್ದತಿಗೆ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ತಿಳಿಸಬೇಕು.

ಬಿ) ಅಂಗವಿಕಲರ ಹಕ್ಕುಗಳ ನಿರಾಕರಣೆ ಮತ್ತು ಅವರ ಸುರಕ್ಷತೆ ರಾಜ್ಯ ಸರ್ಕಾರದ ಹೊಣೆಯಾಗಿರುವಲ್ಲಿ ಅವುಗಳ ಉಲ್ಲಂಘನೆಯಾಗಿದ್ದು ತಿಳಿದು ಬಂದರೆ ಸ್ವತಃ ಅಥವಾ ಇತರರ ಹೇಳಿಕೆಯ ಮೇರೆಗೆ ವಿಚಾರಣೆ ಕೈಗೊಳ್ಳಬೇಕು.

ಸಿ) ಈ ಕಾಯಿದೆ ಅಥವಾ ಕಾಯಿದೆಯಡಿ ಅಂಗವಿಕಲರ ರಕ್ಷಣೆಗೆಂದು ನಿಗದಿಸಿರುವ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸಬೇಕು.

ಡಿ) ಅಂಗವಿಕಲರು ಅವರ ಹಕ್ಕುಗಳನ್ನು ಅನುಭವಿಸುವುದರಲ್ಲಿ ಅಡ್ಡಿಯಾಗುವಂತಹ ವಿಷಯಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸಬೇಕು.

ಇ) ಅಂಗವಿಕಲರ ಹಕ್ಕುಗಳ ಕುರಿತು ಇರುವ ಅಂತಾರಾಷ್ಟ್ರೀಯ ಒಡಂಬಡಿಕೆಗಳು ಮತ್ತು ಒಪ್ಪಂದಗಳನ್ನು ಅಧ್ಯಯನ ಮಾಡಿ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸೂಕ್ತ ಸಲಹೆಗಳನ್ನು ಕೊಡಬೇಕು.

ಎಫ್) ಅಂಗವಿಕಲರ ಹಕ್ಕುಗಳ ವಿಷಯದಲ್ಲಿ ಸಂಶೋಧನೆಯನ್ನು ಕೈಗೊಳ್ಳಬೇಕು.

ಜಿ) ಅಂಗವಿಕಲರ ಹಕ್ಕುಗಳು ಮತ್ತು ಅವರ ಸಂರಕ್ಷಣೆಗೆ ಇರುವ ಸುರಕ್ಷಿತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕು.

ಎಚ್) ಈ ಕಾಯಿದೆಯಲ್ಲಿ ಅಂಗವಿಕಲರಿಗೆಂದು ಆಯೋಜಿಸಿರುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಅನುಷ್ಠಾನದ ಮೇಲೆ ನಿಗಾ ಇಡಬೇಕು.

ಐ) ಅಂಗವಿಕಲರಿಗೆಂದು ರಾಜ್ಯ ಸರ್ಕಾರ ಹಂಚಿಕೆ ಮಾಡಿರುವ ಹಣ ಸರಿಯಾಗಿ ವಿನಿಯೋಗ ಆಗುತ್ತಿದೆಯೇ ಎಂದು ನೋಡಬೇಕು.

ಜೆ) ರಾಜ್ಯ ಸರ್ಕಾರ ನಿಯೋಜಿಸುವ ಇತರ ಕಾರ್ಯಗಳನ್ನು ಮಾಡಬೇಕು.

**81**. ರಾಜ್ಯ ಆಯುಕ್ತರು ಸೆಕ್ಷನ್ 80 (ಬಿ) ಕೆಳಗೆ ಯಾವುದೇ ಅಧಿಕಾರ/ಪ್ರಾಧಿಕಾರಕ್ಕೆ ಸಲಹೆಗಳನ್ನು ನೀಡಿದಲ್ಲಿ ಆ ಅಧಿಕಾರ ಮೂರು ತಿಂಗಳೊಳಗೆ ಅವಶ್ಯವಾದ ಕ್ರಮಗಳನ್ನು ತೆಗೆದುಕೊಂಡು ರಾಜ್ಯ ಆಯುಕ್ತರಿಗೆ ವರದಿಯನ್ನು ನೀಡಬೇಕು.

ಆದರೆ ಅಧಿಕಾರ ರಾಜ್ಯ ಆಯುಕ್ತರ ಸಲಹೆಯನ್ನು ಒಪ್ಪದಿದ್ದರೆ ಮೂರು ತಿಂಗಳೊಳಗೆ ಸಲಹೆಯನ್ನು ಏಕೆ ಒಪ್ಪುತ್ತಿಲ್ಲ ಎಂದು ಕಾರಣಗಳನ್ನು ತಿಳಿಸಿ ವರದಿ ಸಲ್ಲಿಸಬೇಕು ಮತ್ತು ಬಾಧಿತ ವ್ಯಕ್ತಿಗೂ ತಿಳಿಸಬೇಕು.

1908ರ 5

**82**. 1) ರಾಜ್ಯ ಆಯಕ್ತರಿಗೆ, ತಮ್ಮ ಕೆಲಸಗಳನ್ನು ನಿರ್ವಹಿಸುವಲ್ಲಿ, ಸನ್ 1980ರ ದಿವಾಣಿ ಪ್ರಕ್ರಿಯಾ ಸಂಹಿತೆಯಲ್ಲಿ ದಿವಾಣಿ ನ್ಯಾಯಾಧೀಶರಿಗೆ ಕೆಳಕಂಡ ವಿಷಯಗಳಲ್ಲಿ ಇರುವ ಅಧಿಕಾರಗಳೆಲ್ಲವೂ ಇರುತ್ತದೆ:

(ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಅವರು ಕಡ್ಡಾಯವಾಗಿ ಬರುವಂತೆ ಆದೇಶಿಸುವುದು;

(ಬಿ) ದಾಖಲೆಗಳನ್ನು ಶೋಧಿಸಿ ಹಾಜರು ಪಡಿಸಲು ಆದೇಶಿಸುವುದು;

(ಸಿ) ಯಾವುದೇ ಕಚೇರಿ ಅಥವಾ ನ್ಯಾಯಾಲಯದಿಂದ ಸಾರ್ವಜನಿಕ ದಾಖಲೆ ಅಥವಾ ದಾಖಲೆಯ ನಕಲು ತರಿಸುವುದು;

(ಡಿ) ಶಪಥಪತ್ರ (ಅಫಿಡವಿಟ್ಟು)ದ ಮೂಲಕ ಸಾಕ್ಷ್ಯ ಪಡೆಯುವುದು;

(ಇ) ಸಾಕ್ಷಿಗಳ ಮತ್ತು ದಾಖಲೆಗಳ ಪರೀಕ್ಷೆಗೆಂದು ನಿಯುಕ್ತ ಅಧಿಕಾರಿ/ವ್ಯಕ್ತಿ (Court Commission)ಗಳನ್ನು ನೇಮಿಸುವದು.

1860ರ 45

1974ರ 2

2) ರಾಜ್ಯ ಆಯುಕ್ತರ ಸಮ್ಮುಖದಲ್ಲಿ ನಡೆಯುವ ಕಲಾಪಗಳನ್ನು ಭಾರತೀಯ ದಂಡ ಸಂಹಿತೆ (IPC)ಯ ಸೆಕ್ಷನ್ 193 ಮತ್ತು 228ಗಳ ಮಟ್ಟಿಗೆ ನ್ಯಾಯಾಲಯದ ಕಲಾಪಗಳೆಂದೇ ಪರಿಗಣಿಸಲಾಗುವುದು.

ರಾಜ್ಯ ಆಯುಕ್ತರಿಂದ ವಾರ್ಷಿಕ ಹಾಗೂ ವಿಶೇಷ ವರದಿ

**83**. 1) ರಾಜ್ಯ ಆಯುಕ್ತರು ರಾಜ್ಯ ಸರಕಾರಕ್ಕೆ ವಾರ್ಷಿಕ ವರದಿಯನ್ನು ಒಪ್ಪಿಸಬೇಕು. ವಾರ್ಷಿಕ ವರದಿಯ ತನಕ ವಿಳಂಬ ಮಾಡಲಾಗದ ಯಾವುದಾದರೂ ಮುಖ್ಯವಾದ ಅಥವಾ ಜರೂರಿ ವಿಷಯವಿದ್ದಲ್ಲಿ, ಮಧ್ಯಂತರದಲ್ಲಿ ವಿಶೇಷ ವರದಿಯನ್ನು ಒಪ್ಪಿಸಬಹುದು.

2) ರಾಜ್ಯ ಆಯುಕ್ತರ ವಾರ್ಷಿಕ ಹಾಗೂ ವಿಶೇಷ ವರದಿಗಳನ್ನು ರಾಜ್ಯ ಸರಕಾರ ವಿಧಾನ ಮಂಡಲದ ಎರಡೂ ಸದನಗಳಲ್ಲೂ ಮಂಡಿಸ ಬೇಕು. ಅವುಗಳೊಂದಿಗೆ, ಆ ವಿಷಯದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ ಅಥವ ಆಯುಕ್ತರ ಸಲಹೆಯನ್ನು ಏಕೆ ನಿರಾಕರಿಸಲಾಗಿದೆ ಎಂದು ಕಾರಣಗಳನ್ನು ತಿಳಿಸಬೇಕು.

3) ವಾರ್ಷಿಕ ಹಾಗೂ ವಿಶೇಷ ವರದಿಗಳು ಕೇಂದ್ರ ಸರ್ಕಾರ ನಿಗದಿಸಿರುವ ನಮೂನೆಯಲ್ಲಿದ್ದು ಅಗತ್ಯವಾದ ವಿವರಗಳನ್ನು ನೀಡಬೇಕು.

## ಅಧ್ಯಾಯ – 13
## ವಿಶೇಷ ನ್ಯಾಯಾಲಯ

ವಿಶೇಷ ನ್ಯಾಯಾಲಯ

**84**. ಈ ಕಾಯಿದೆಯ ಉಲ್ಲಂಘನೆಗಳ ಬಗ್ಗೆ ದೂರುಗಳ ವಿಚಾರಣೆಯನ್ನು ತ್ವರಿತವಾಗಿ ಮಾಡಲು ರಾಜ್ಯ ಸರ್ಕಾರ, ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಒಪ್ಪಿಗೆ ಪಡೆದು ಪ್ರತಿ ಜಿಲ್ಲೆಯಲ್ಲಿನ ಒಂದು ಸತ್ರ (ಸೆಕ್ಷನ್ಸ್) ನ್ಯಾಯಾಲಯವನ್ನು ಈ ಕಾಯಿದೆಯ ವಿಶೇಷ ನ್ಯಾಯಾಲಯ ಎಂದು ಘೋಷಿಸಬೇಕು.

ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್

**85**. 1) ಮೇಲೆ ಹೇಳಿದಂತಹ ಪ್ರತಿಯೊಂದು ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲು ರಾಜ್ಯ ಸರ್ಕಾರ ಒಬ್ಬ ಸರ್ಕಾರಿ ಅಭಿಯೋಜಕ (ಪಬ್ಲಿಕ್ ಪ್ರಾಸಿಕ್ಯೂಟರ್)ರನ್ನು ನೇಮಿಸಬಹುದು. ಅಥವಾ ಕನಿಷ್ಠ ಏಳು ವರ್ಷಗಳ ಅನುಭವ ಇರುವ ನ್ಯಾಯವಾದಿಯನ್ನು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಬಹುದು.

2) ಮೇಲೆ ಹೇಳಿದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ನೀಡುವ ಶುಲ್ಕವನ್ನು ರಾಜ್ಯ ಸರ್ಕಾರ ನಿಗದಿಸುವುದು.

## ಅಧ್ಯಾಯ – 14

## ಅಂಗವಿಕಲರಿಗಾಗಿ ರಾಷ್ಟ್ರೀಯ ನಿಧಿ

ವಿಶೇಷ ನ್ಯಾಯಾಲಯ

**86**. 1) ಅಂಗವಿಕಲರಿಗಾಗಿ ಒಂದು ರಾಷ್ಟ್ರೀಯ ನಿಧಿಯನ್ನು ಸ್ಥಾಪಿಸಲಾಗುವುದು.

ಎ) ಈ ನಿಧಿಗೆ ಅಂಗವಿಕಲರಿಗೆಂದು ಲಭ್ಯವಿರುವ ಎಲ್ಲಾ ಹಣ ಮೊತ್ತಗಳನ್ನು ಸೇರಿಸಲಾಗುವುದು. ಸರ್ಕಾರದ 11.8.1983ರ ಪ್ರಕಟಣೆ ಸಂಖ್ಯೆ S.O. 573 (E)ಯ ಪ್ರಕಾರ ಅಂಗವಿಕಲರ ನಿಧಿ ಎಂದು ನಿಗದಿಸಲಾದ ಎಲ್ಲಾ ಮೊತ್ತ ಮತ್ತು 21.11.2004ರ ಧರ್ಮದತ್ತಿ ಕಾಯಿದೆ (1890)ರ ಕೆಳಗೆ ಪ್ರಕಟಣೆ ಸಂಖ್ಯೆ 30–03/2004–DD II ಕೆಳಗಿನ ಅಂಗವಿಕಲರ ಸಬಲೀಕರಣ ನ್ಯಾಸ ನಿಧಿ. 1890ರ 6

ಬಿ) ಸರ್ವೋಚ್ಚ ನ್ಯಾಯಾಲಯದಲ್ಲಿ 16.04.2004ರಂದು ನಿಷ್ಕರ್ಷೆಯಾದ ದಾವೆ ಸನ್ 2000ರ (ಸಂಖ್ಯೆ 4655 ಮತ್ತು 5218)ಯ ಪ್ರಕಾರ ಬ್ಯಾಂಕುಗಳು ಕಾರ್ಪೋರೇಶನ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಜಮೆ ಆಗಿರುವ ಎಲ್ಲಾ ಮೊತ್ತಗಳು.

ಸಿ) ಎಲ್ಲಾ ಅನುದಾನ, ಕೊಡುಗೆ, ಕಾಣಿಕೆ, ಉಯಿಲು ಕೊಡುಗೆ ಇತ್ಯಾದಿಗಳಿಂದ ಬಂದಿರುವ ಹಣ ಮತ್ತು

ಡಿ) ಕೇಂದ್ರ ಸರ್ಕಾರದ ನಿರ್ಧರಿಸುವ ಇನ್ನಾವುದೇ ಮೂಲದ ಹಣ/ಮೊತ್ತಗಳು.

ಇ) ಮೇಲೆ ಹೇಳಿದ ಅಂಗವಿಕಲರ ನಿಧಿಯ ಬಳಕೆ ಮತ್ತು ನಿರ್ವಹಣೆ ಕೇಂದ್ರ ಸರಕಾರ ರೂಪಿಸುವ ನಿಯಮಗಳನುಸಾರ ಇರುವುದು.

ಲೆಕ್ಕ ಮತ್ತು ಲೆಕ್ಕ ಪರಿಶೋಧನೆ

**87**. 1) ಕೇಂದ್ರ ಸರ್ಕಾರ, ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕರೊಡನೆ ಸಮಾಲೋಚಿಸಿ ಅಗತ್ಯವಿರುವ ಎಲ್ಲಾ ಲೆಕ್ಕ ಪತ್ರಗಳು ದಾಖಲೆಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿಟ್ಟು ನಿಗದಿತ ಮಾದರಿಯಲ್ಲಿ ವಾರ್ಷಿಕ ಆಯ–ವ್ಯಯದ ಲೆಕ್ಕ ವಿವರಣೆಯನ್ನು ತಯಾರಿಸಬೇಕು.

2) ಅಂಗವಿಕಲರ ನಿಧಿಯ ಲೆಕ್ಕವನ್ನು ಭಾರತದ ನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕರು ಅವರೇ ನಿಗದಿಸುವ ಅವಧಿಗಳಲ್ಲಿ ಪರಿಶೋಧಿಸುವರು ಈ ಪರಿಶೋಧನೆಯ ವೆಚ್ಚವನ್ನು ಸರಕಾರ ಸಲ್ಲಿಸಬೇಕು.

3) ನಿಧಿಯ ಲೆಕ್ಕ ಪರಿಶೋಧನೆಯ ವಿಷಯದಲ್ಲಿ ನಿಯಂತ್ರಕ ಮಹಾ ಲೆಕ್ಕ ಪರಿಶೋಧಕರಿಗೆ ಅಥವಾ ಅವರು ನೇಮಿಸಿದವರಿಗೆ ಲೆಕ್ಕ ಪರಿಶೋಧನೆ ಸಂಬಂಧವಾಗಿ ಇರುವ ಎಲ್ಲಾ ಅಧಿಕಾರಗಳೂ ಇರುವುವು. ವಿಶೇಷವಾಗಿ, ಎಲ್ಲಾ ಲೆಕ್ಕ ಪುಸ್ತಕಗಳು, ರಶೀದಿಗಳು, ಸಲ್ಲಿಕೆ ಚೀಟಿಗಳು (ವೌಚರ್) ಮುಂತಾದ ಪತ್ರಗಳೆಲ್ಲ ಕರೆಸಿ ಪಡೆಯುವ, ತಪಾಸಣೆ ಮಾಡುವ ಮತ್ತು ಕಛೇರಿಗಳನ್ನು ವೀಕ್ಷಿಸುವ ಎಲ್ಲಾ ಹಕ್ಕುಗಳೂ ಇರುವುವು.

4) ಮಹಾ ಲೆಕ್ಕ ಪರಿಶೋಧಕರು ಅಥವಾ ಅವರು ನೇಮಿಸಿರುವ ಇತರ ಅಧಿಕಾರಿಗಳು ಪ್ರಮಾಣೀಕರಿಸಿದ ನಿಧಿಯ ಲೆಕ್ಕ ಮತ್ತು ಪರಿಶೋಧನಾ ವರದಿಯನ್ನು ಕೇಂದ್ರ ಸರ್ಕಾರ ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಬೇಕು.

## ಅಧ್ಯಾಯ – 15

## ಅಂಗವಿಕಲರ ರಾಜ್ಯ ನಿಧಿ

ಅಂಗವಿಕಲರ ರಾಜ್ಯನಿಧಿ

**88**. 1) ಅಂಗವಿಕಲರಿಗಾಗಿ ಪ್ರತಿ ರಾಜ್ಯವೂ ನಿಯಮಾನುಸಾರ ಒಂದು ರಾಜ್ಯ ನಿಧಿಯನ್ನು ಸ್ಥಾಪಿಸಬೇಕು.

2) ರಾಜ್ಯದ ನಿಧಿಯ ಬಳಕೆ ಮತ್ತು ನಿರ್ವಹಣೆ ರಾಜ್ಯ ಸರ್ಕಾರ ವಿಧಿಸುವ ನಿಯಮಗಳನುಸಾರ ಇರಬೇಕು.

3) ರಾಜ್ಯ ಸರ್ಕಾರ ನಿಯಂತ್ರಕ ಮಹಾ ಲೆಕ್ಕ ಪರಿಶೋಧಕರೊಡನೆ ಸಮಾಲೋಚಿಸಿ ಅಗತ್ಯವಿರುವ ಎಲ್ಲಾ ಲೆಕ್ಕ ಪತ್ರಗಳು ದಾಖಲೆಗಳನ್ನೂ ಸರಿಯಾದ ರೀತಿಯಲ್ಲಿ ನಿರ್ವಹಿಸಿಟ್ಟು ನಿಗದಿತ ಮಾದರಿಯಲ್ಲಿ ವಾರ್ಷಿಕ ಆಯ–ವ್ಯಯದ ಲೆಕ್ಕ ವಿವರಣೆಯನ್ನು ತಯಾರಿಸಬೇಕು.

4) ರಾಜ್ಯದ ಅಂಗವಿಕಲರ ನಿಧಿಯ ಲೆಕ್ಕವನ್ನು ಭಾರತದ ನಿಯಂತ್ರಕ ಮಹಾಲೆಕ್ಕ ಪರಿಶೋಧಕರು, ಅವರೇ ನಿಗದಿಸುವ ಅವಧಿಗಳಲ್ಲಿ ಪರಿಶೋಧಿಸುವರು. ಈ ಪರಿಶೋಧನೆಯ ವೆಚ್ಚವನ್ನು ರಾಜ್ಯದ ಅಂಗವಿಕಲರ ನಿಧಿಯಿಂದ ಅವರಿಗೆ ಭರಿಸಲಾಗುವುದು.

5) ರಾಜ್ಯದ ನಿಧಿಯ ಲೆಕ್ಕ ಪರಿಶೋಧನೆಯ ವಿಷಯದಲ್ಲಿ ನಿಯಂತ್ರಕ ಮಹಾ ಲೆಕ್ಕ ಪರಿಶೋಧಕರಿಗೆ ಅಥವಾ ಅವರು ನೇಮಿಸಿದವರಿಗೆ ಲೆಕ್ಕ ಪರಿಶೋಧನೆ ಸಂಬಂಧವಾಗಿ ಇರುವ ಎಲ್ಲಾ ಅಧಿಕಾರಗಳೂ ಇರುವುವು. ವಿಶೇಷವಾಗಿ, ಎಲ್ಲಾ ಲೆಕ್ಕ ಪುಸ್ತಕಗಳು, ರಶೀದಿಗಳು, ಸಲ್ಲಿಕೆ ಚೀಟಿಗಳು ಮುಂತಾದ ಪತ್ರಗಳನ್ನೆಲ್ಲ ಕರೆಸಿ ಪಡೆಯುವ, ತಪಾಸಣೆ ಮಾಡುವ ಮತ್ತು ಕಚೇರಿಗಳನ್ನು ವೀಕ್ಷಿಸುವ ಎಲ್ಲಾ ಹಕ್ಕುಗಳೂ ಇರುವುವು.

6) ಮಹಾಲೆಕ್ಕ ಪರಿಶೋಧಕ ಅಥವಾ ಅವರು ನೇಮಿಸಿದ ಇತರ ಅಧಿಕಾರಿಗಳು ಪ್ರಮಾಣೀಕರಿಸಿದ ನಿಧಿಯ ಲೆಕ್ಕ ಮತ್ತು ಅದರ ಪರಿಶೋಧನಾ ವರದಿಯನ್ನು ರಾಜ್ಯ ಸರ್ಕಾರ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮಂಡಿಸಬೇಕು. ಶಾಸನಸಭೆ ಒಂದೇ ಸಭೆಯಾಗಿದ್ದಲ್ಲಿ ಆ ಸಭೆಯಲ್ಲಿ ಮಂಡಿಸಬೇಕು.

## ಅಧ್ಯಾಯ – 16
## ಅಪರಾಧಗಳು ಮತ್ತು ದಂಡನೆಗಳು

**89**. ಈ ಕಾಯಿದೆಯ ಯಾವುದೇ ಖಂಡದ ಉಲ್ಲಂಘನೆ ಮಾಡಿದರೆ ಮೊದಲ ಬಾರಿಗೆ ಗರಿಷ್ಠ 10,000/– ರೂಪಾಯಿಗಳ ದಂಡ ವಿಧಿಸಲಾಗುವುದು. ನಂತರದ ಉಲ್ಲಂಘನೆಗೆ ಕನಿಷ್ಠ 50,000/– ರೂಪಾಯಿ ಮತ್ತು ಗರಿಷ್ಠ ಐದು ಲಕ್ಷ ರೂಪಾಯಿ ದಂಡ ವಿಧಿಸಲಾಗುವುದು.

ಕಾಯಿದೆಯ ಉಲ್ಲಂಘನೆಗೆ ದಂಡನೆ

**90**. 1) ಕಾಯಿದೆಯ ಉಲ್ಲಂಘನೆ ಕಂಪನಿ ಅಥವಾ ಸಂಸ್ಥೆಯಿಂದ ಆಗಿದ್ದಲ್ಲಿ ಉಲ್ಲಂಘನೆಯಾದ ಸಮಯದಲ್ಲಿ ಕಂಪನಿಗೆ ಜವಾಬ್ದಾರರಾಗಿರುವ ಎಲ್ಲರೂ ಮತ್ತು ಕಂಪನಿಯೂ ಸಹ ತಪ್ಪಿತಸ್ಥರಾಗುವರು ಮತ್ತು ದಂಡನೆಗೆ ಅರ್ಹರಾಗುವರು.

ಕಂಪನಿಗಳಿಂದ ಉಲ್ಲಂಘನೆ

(ಅಪವಾದ) ಆದರೆ ಕಾಯಿದೆಯ ಉಲ್ಲಂಘನೆ ತನಗೆ ತಿಳಿಯದೇ ಆದದ್ದು ಅಥವಾ ಅವರು ತಮಗೆ ಸಾಧ್ಯವಿದ್ದ ಎಲ್ಲ ಎಚ್ಚರಿಕೆಯನ್ನು ವಹಿಸಿದ್ದೂ ತಪ್ಪು ಆಗಿದೆ ಎಂದು ಸಾಬೀತು ಮಾಡಿದರೆ ದಂಡನೆಯಿಂದ ಪಾರಾಗಬಹುದು.

2) ಆದರೆ, ಒಂದು ಕಂಪನಿಯಿಂದ ಈ ಕಾಯಿದೆಯ ಉಲ್ಲಂಘನೆ ಆಗಿದ್ದು, ಅಪರಾಧದಲ್ಲಿ ಯಾವುದೇ ನಿರ್ದೇಶಕ ಕಾರ್ಯನಿರ್ವಾಹಕ (ಮ್ಯಾನೇಜರ್) ಕಾರ್ಯದರ್ಶಿ ಅಥವಾ ಇನ್ಯಾವುದೇ ಅಧಿಕಾರಿಯ ಕೈವಾಡವಿದೆ ಅಥವಾ ಅಪರಾಧದ ಬಗ್ಗೆ ಅವರಿಗೆ ಅರಿವಿತ್ತು ಎಂದು ಸಾಬೀತಾದರೆ. ಅಂತಹ ವ್ಯಕ್ತಿಯ ವಿರುದ್ಧ ಅಪರಾಧಕ್ಕೆ ಕ್ರಮ ತೆಗೆದುಕೊಂಡು ಶಿಕ್ಷೆ ಮತ್ತು ದಂಡ ವಿಧಿಸಬಹುದು.

ವಿವರಣೆ: ಎ) ಈ ಸೆಕ್ಷನ್‌ನಲ್ಲಿ ಬಳಸಲಾಗಿರುವ ಕಂಪನಿ ಎಂಬ ಶಬ್ದ ಸಂಸ್ಥೆ, ಸಂಘಟನೆ, ಸಂಘ, ಪಾಲುದಾರಿಕೆ ಸಂಸ್ಥೆ ಎಲ್ಲವನ್ನೂ ಒಳಗೊಳ್ಳುವುದು.

ಬಿ) ನಿರ್ದೇಶಕ ಎಂಬುದನ್ನು ಪಾಲುದಾರ ಎಂದು ಅರ್ಥೈಸಬೇಕು.

**91**. ಯಾವುದೇ ವ್ಯಕ್ತಿ ಅಂಗವಿಕಲರಿಗೆ ಎಂದು ಇರುವ ಸವಲತ್ತು ಸೌಲಭ್ಯಗಳನ್ನು ವಂಚನೆಯಿಂದ (ಸುಳ್ಳು ಹೇಳಿ) ಪಡೆದುಕೊಂಡರೆ ಅವರಿಗೆ ಗರಿಷ್ಠ ಎರಡು ವರ್ಷಗಳ ಜೈಲುವಾಸ ಅಥವಾ ಒಂದು ಲಕ್ಷ ರೂಪಾಯಿ ಜುಲ್ಮಾನೆ ಅಥವಾ ಎರಡೂ ಶಿಕ್ಷೆಗಳನ್ನೂ ವಿಧಿಸಬಹುದು.

ಅಂಗವಿಕಲರಿಗೆ ಎಂದು ಇರುವ ಸೌಲಭ್ಯಗಳನ್ನು ವಂಚನೆಯಿಂದ ಪಡೆದುಕೊಂಡರೆ

ದೌರ್ಜನ್ಯದ ಅಪರಾಧಗಳು ಮತ್ತು ದಂಡನೆ

**92**. ಯಾರಾದರೂ

(ಎ) ಉದ್ದೇಶಪೂರ್ವಕವಾಗಿ ಅಂಗವಿಕಲರನ್ನು ಸಾರ್ವಜನಿಕವಾಗಿ ಅವಮಾನಿಸುವ ಉದ್ದೇಶದಿಂದ ಬೆದರಸಿದರೆ, ಅಂಗವಿಕಲರ ಮೇಲೆ ದಬ್ಬಾಳಿಕೆ ಮಾಡಿ ಅಥವಾ ಒತ್ತಡ ಹೇರಿ ಅಗೌರವ ತೋರಿಸಿದರೆ ಅಥವಾ ಅಂಗವಿಕಲ ಮಹಿಳೆಯ ಮಾನಭಂಗ ಮಾಡಿದರೆ.

ಬಿ) ಅಂಗವಿಕಲ ವ್ಯಕ್ತಿಯ ಕೈ, ಕಾಲು, ಕಣ್ಣು, ಕಿವಿ, ಮೂಗು, ಬಾಯಿಗಳಿಗೆ, ಆಘಾತ ಉಂಟು ಮಾಡಿದರೆ ಅಥವಾ ಅವರು ಬಳಸುವ ಸಾಧನಗಳನ್ನು ಹಾಳುಗೆಡವಿದರೆ,

ಸಿ) ಅಂಗವಿಕಲ ಮಹಿಳೆಯ ಒಪ್ಪಿಗೆ ಇಲ್ಲದೆ ಆಕೆಯ ಗರ್ಭ ಇಳಿಸುವಂತಹ ಚಿಕಿತ್ಸೆಗೆ ಆಕೆಯನ್ನು ಒಳಪಡಿಸಿದರೆ; (ಮಹಿಳೆಗೆ ಅಂಗವಿಕಲತೆ ಇದ್ದರೆ ನೋಂದಾಯಿತ ವೈದ್ಯರ ಸಲಹೆಯ ಮೇರೆಗೆ, ಆಕೆಯ ಪೋಷಕರ ಒಪ್ಪಿಗೆ ಪಡೆದು, ಗರ್ಭ ಇಳಿಸುವುದು ಶಿಕ್ಷಾರ್ಹವಲ್ಲ.)

ಮೇಲೆ ಹೇಳಿರುವಂತಹ ಅಪರಾಧವನ್ನು ಮಾಡಿದರೆ, ಅವರಿಗೆ ಆರು ತಿಂಗಳಿಂದ ಐದು ವರ್ಷಗಳವರೆಗೆ ಜೈಲುವಾಸ ಮತ್ತು ದಂಡವನ್ನೂ ವಿಧಿಸಬಹುದು.

ಮಾಹಿತಿ ನೀಡದಿದ್ದರೆ ದಂಡನೆ

**93**. ಯಾರಾದರೂ ಈ ಕಾಯಿದೆ ಅಥವಾ ಕಾಯಿದೆಯನ್ವಯ ನೀಡಿರುವ ಆದೇಶದ ಪ್ರಕಾರ ನೀಡಬೇಕಾದ ದಾಖಲೆ, ಲೆಕ್ಕ ಪತ್ರಗಳು ಅಥವಾ ಯಾವುದೇ ಮಾಹಿತಿಯನ್ನು ನೀಡದಿದ್ದರೆ ಅಥವಾ ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡದಿದ್ದರೆ ಅವರಿಗೆ ಪ್ರತಿ ನಿರಾಕರಣೆಗೂ 25000 ರೂಪಾಯಿಗಳಷ್ಟು ದಂಡ ವಿಧಿಸಬಹುದು. ದಂಡ ವಿಧಿಸಿದ ನಂತರವೂ ಮಾಹಿತಿ ದಾಖಲೆ ಇತ್ಯಾದಿ ನೀಡದೇ ಇದ್ದರೆ ಪ್ರತಿ ದಿನಕ್ಕೆ ಒಂದು ಸಾವಿರ ರೂಪಾಯಿಗಳಂತೆ ಹೆಚ್ಚುವರಿ ದಂಡವನ್ನು ವಿಧಿಸಲಾಗುವುದು.

ಸರ್ಕಾರದಿಂದ ಪೂರ್ವ ಅನಮತಿ

**94**. ಈ ಕಾಯಿದೆಯಡಿ ಎಸಗಲಾಗಿದೆ ಎನ್ನುವ ಯಾವುದೇ ಅಪರಾಧಕ್ಕೆ ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಬೇಕಾದರೆ, ಸರ್ಕಾರದ ಪೂರ್ವ ಅನುಮತಿ ಅವಶ್ಯ. ಅಥವಾ ಸರ್ಕಾರದಿಂದ ಅಧಿಕೃತ ಅಧಿಕಾರಿಯ ದೂರಿನ ಮೇರೆಗೆ ಕಾನೂನಿನ ಕ್ರಮ ತೆಗೆದುಕೊಳ್ಳಬಹುದು.

ಪರ್ಯಾಯ ದಂಡನೆ

**95**. ಯಾವುದೇ ಅಪರಾಧ ಈ ಕಾಯಿದೆಯಡಿ ಅಥವಾ ಬೇರೆ ಕೇಂದ್ರದ ಅಥವಾ ರಾಜ್ಯದ ಕಾಯಿದೆಯಡಿ ದಂಡನೆಗೆ ಅರ್ಹವಾಗಿದ್ದರೆ, ತಪ್ಪಿತಸ್ಥರಿಗೆ ಯಾವ ದಂಡನೆ ಹೆಚ್ಚಾಗಿರುವುದೋ ಆ ದಂಡನೆಯನ್ನು ವಿಧಿಸಲಾಗುವುದು.

## ಅಧ್ಯಾಯ 17

## ಇತರೆ ವಿಷಯಗಳು

ಇತರ ಕಾಯಿದೆಗಳೂ ಅನ್ವಯಿಸುವುವು.

**96**. ಈ ಕಾಯಿದೆ, ಇತರ ಜಾರಿಯಲ್ಲಿರುವ ಕಾಯಿದೆಗಳೊಂದಿಗೆ ಕೂಡಿ ಅನ್ವಯಿಸುವುದು. ಅವುಗಳನ್ನು ನಿರಸನಗೊಳಿಸುವುದಿಲ್ಲ.

ಸದುದ್ದೇಶದಿಂದ ತೆಗೆದುಕೊಂಡ ಕ್ರಮಕ್ಕೆ ರಕ್ಷಣೆ

**97**. ಈ ಕಾಯಿದೆ ಮತ್ತು ಅದರ ಕೆಳಗಿನ ನಿಯಮಗಳಡಿ ಸರಕಾರ, ಸರಕಾರಿ ನೌಕರರು, ಕೇಂದ್ರ ಅಥವಾ ರಾಜ್ಯ ಆಯುಕ್ತರ ಸಿಬ್ಬಂದಿ, ಸದುದ್ದೇಶದಿಂದ ಕೈಗೊಂಡ ಅಥವಾ ಕೈಗೊಳ್ಳಲ್ಲಿರುವ ಯಾವುದೇ ಕಾರ್ಯ ಅಥವಾ ಕ್ರಮಕ್ಕೆ ಅವರನ್ನು ಕಾನೂನಿನ ಕ್ರಮಕ್ಕೆ ಒಳಪಡಿಸಲಾಗದು.

ತೊಂದರೆ ನಿವಾರಣೆ

**98**. (1) ಈ ಕಾಯಿದೆಯ ಯಾವುದೇ ಭಾಗವನ್ನು ಕಾರ್ಯಗತಗೊಳಿಸಲು ಏನಾದರೂ ಅಡಚಣೆ ಉಂಟಾದರೆ, ಕೇಂದ್ರ ಸರಕಾರ ಗೆಜೆಟ್ ಪ್ರಕಟಣೆಯ ಮೂಲಕ, ಕಾಯಿದೆಯ ಯಾವುದೇ ಖಂಡಗಳಿಗೆ ವಿರೋಧಾಭಾಸ ಉಂಟುಮಾಡದೆ, ಅಂತಹ ತೊಂದರೆಯ ನಿವಾರಣೆಗೆ ಅಗತ್ಯವಾದ ಆದೇಶ ನೀಡಬಹುದು.

ಆದರೆ, ಮೇಲೆ ಹೇಳಿದಂತಹ ಆದೇಶವನ್ನು ಈ ಕಾಯಿದೆ ಜಾರಿಗೆ ಬಂದು ಎರಡು ವರ್ಷಗಳ ನಂತರ ಮಾಡಲಾಗದು.

(2) ಈ ಸೆಕ್ಷನ್ ಕೆಳಗೆ ಮಾಡಿದ ಆದೇಶಗಳನ್ನು, ಸರಕಾರ, ಆದಷ್ಟು ಬೇಗ ಸಂಸತ್ತಿನ ಎರಡೂ ಸಭೆಗಳ ಮುಂದೆ ಮಂಡಿಸಬೇಕು.

ಅನುಸೂಚಿಯ ತಿದ್ದುಪಡಿ

**99**. ಯಾವುದೇ (ರಾಜ್ಯ) ಸರಕಾರದ ಸಲಹೆಯ ಮೇರೆಗೆ, ಕೇಂದ್ರ ಸರಕಾರಕ್ಕೆ ಅಗತ್ಯವೆನಿಸಿದಲ್ಲಿ, ಅದು ಪ್ರಕಟಣೆಯ ಮೂಲಕ, ಅನುಸೂಚಿಯಲ್ಲಿ ತಿದ್ದುಪಡಿಗಳನ್ನು ತರಬಹುದು. ಪ್ರಕಟಣೆ ಆದ ನಂತರ ಅನುಸೂಚಿಯಲ್ಲಿನ ತಿದ್ದುಪಡಿ ಜಾರಿಗೆ ಬರುವುದು.

ಕೇಂದ್ರ ಸರಕಾರದ ನಿಯಮಗಳನ್ನು ರೂಪಿಸುವ ಅಧಿಕಾರ

**100**. (1) ಕೇಂದ್ರ ಸರಕಾರ, ಗೆಜೆಟ್‌ನಲ್ಲಿ ಪ್ರಕಟಿಸುವ ಮೂಲಕ, ಈ ಕಾಯಿದೆಯನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರೂಪಿಸಬಹುದು.

(2) ನಿಯಮಗಳನ್ನು ರೂಪಿಸುವ ಅಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡವೂ ಬರುತ್ತವೆ.

(a) ಸೆಕ್ಷನ್ 6(2)ರ ಕೆಳಗೆ ಅಂಗವಿಕಲತೆ ಕುರಿತು ಸಂಶೋಧನೆ ಮಾಡುವ ಮಂಡಳಿಯನ್ನು ರಚಿಸುವ ವಿಧಾನ;

(b) ಸೆಕ್ಷನ್ 21(1)ರ ಕೆಳಗೆ ಸಮಾನ ಅವಕಾಶ ಪ್ರಕಟಿಸುವ ವಿಧಾನ.

(c) ಸೆಕ್ಷನ್ 22(1)ರ ಕೆಳಗೆ ಸ್ಥಾಪನೆಗಳು ದಾಖಲೆಗಳನ್ನು ಹೇಗೆ ನಿರ್ವಹಿಸಬೇಕು ಎನ್ನುವ ವಿಧಾನ.

(d) ಸೆಕ್ಷನ್ 23(3)ರ ಕೆಳಗೆ ಕುಂದುಕೊರತೆಯ ದೂರುಗಳ ದಾಖಲೆ ನಿರ್ವಹಿಸುವ ವಿಧಾನ;

(e) ಸೆಕ್ಷನ್ 36ರ ಕೆಳಗೆ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಸ್ಥಾಪನೆಗಳು ಮಾಹಿತಿ ಒದಗಿಸಬೇಕಾದ ವಿಧಾನ.

(f) ಸೆಕ್ಷನ್ 38 (2)ರ ಕೆಳಗೆ ವಿಶ್ಲೇಷಣಾ ಮಂಡಳಿಯ ರಚನೆ ಮತ್ತು 38(3)ರ ಕೆಳಗೆ ವಿಶ್ಲೇಷಣಾ ಮಂಡಳಿ ಹೇಗೆ ವಿಶ್ಲೇಷಣೆ ಮಾಡಬೇಕು ಎನ್ನುವ ವಿಧಾನ;

(g) ಸೆಕ್ಷನ್ 40ರ ಕೆಳಗೆ ಅಂಗವಿಕಲರು ಅವರಿಗೆ ಅಡಚಣೆ ರಹಿತ ಪರಿಸರವನ್ನು ಕಲ್ಪಿಸಲು ಮಾನದಂಡಗಳನ್ನು ಸೂಚಿಸುವ ವಿಧಾನ.

(h) ಸೆಕ್ಷನ್ 58(1)ರಡಿಯಲ್ಲಿ ಅಂಗವಿಕಲತೆ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸುವ ವಿಧಾನ ಮತ್ತು 58(2)ರ ಕೆಳಗೆ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸುವ ವಿಧಾನ ಮತ್ತು 58(2)ರ ಕೆಳಗೆ ಪ್ರಮಾಣ ಪತ್ರದ ನಮೂನೆ.

(i) ಕೇಂದ್ರ ಸಲಹಾ ಮಂಡಳಿಯ ನೇಮಕಗೊಂಡ ಸದಸ್ಯರಿಗೆ, ಸೆಕ್ಷನ್ 61 (6)ರ ಕೆಳಗೆ ನೀಡಬೇಕಾದ ಭತ್ಯೆಗಳ ಬಗ್ಗೆ;

(j) ಸೆಕ್ಷನ್ 64ರ ಕೆಳಗೆ ಕೇಂದ್ರ ಸಲಹಾ ಮಂಡಳಿಯ ಸಭೆಗಳನ್ನು ನಡೆಸುವ ವಿಧಾನ;

(k) ಸೆಕ್ಷನ್ 74(4)ರ ಕೆಳಗೆ ಮುಖ್ಯ ಆಯುಕ್ತರು ಮತ್ತು ಆಯುಕ್ತರುಗಳ ಸಂಬಳ, ಭತ್ಯೆ ಮತ್ತು ಕೆಲಸದ ನಿಯಮಗಳು.

(l) ಸೆಕ್ಷನ್ 74(7)ರ ಕೆಳಗೆ ಮುಖ್ಯ ಆಯುಕ್ತರ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಬಳ ಮತ್ತು ಭತ್ಯೆ ಮತ್ತು ಅವರ ಕೆಲಸದ ನಿಯಮಗಳು.

(m) ಸೆಕ್ಷನ್ 74(8)ರ ಕೆಳಗೆ ಸಲಹಾ ಮಂಡಳಿಗೆ ಎಷ್ಟು ತಜ್ಞರನ್ನು ಮತ್ತು ಹೇಗೆ ನೇಮಕ ಮಾಡಬೇಕು ಎಂಬುದರ ವಿಧಾನ.

(n) ಸೆಕ್ಷನ್ 78(3)ರ ಕೆಳಗೆ ಮುಖ್ಯ ಆಯುಕ್ತರು ನೀಡಬೇಕಾದ ವಾರ್ಷಿಕ ವರದಿಯ ಒಳಾಂಶಗಳು ಮತ್ತು ನಮೂನೆ.

(o) ಸೆಕ್ಷನ್ 86(2)ರ ಕೆಳಗೆ ಹಣದ ವಿನಿಯೋಗ, ಅದರ ನಿರ್ವಹಣೆ ಮತ್ತು

(p) ಸೆಕ್ಷನ್ 87(1)ರ ಕೆಳಗಿನ ಹಣದ ಲೆಕ್ಕ, ತಯಾರಿಸುವುದರ ಬಗ್ಗೆ ವಿಧಾನ.

(3) ಈ ಕಾಯಿದೆಯಡಿ ಮಾಡುವ ನಿಯಮಗಳನ್ನು ಸಂಸತ್ತಿನ ಎರಡೂ ಸಭೆಗಳ ಮುಂದೆ ಕನಿಷ್ಠ 30 ದಿನಗಳ ಅವಧಿಗೆ ಇಡಬೇಕು. ಈ 30 ದಿನಗಳು ಒಂದೇ ಅಧಿವೇಶನದಲ್ಲಾದರೂ ಇರಬಹುದು ಅಥವಾ ಸಾಲಾಗಿ ಎರಡು ಅಥವಾ ಮೂರು ಅಧಿವೇಶನಗಳಲ್ಲಿ ಹಂಚಿರಬಹುದು. ಎರಡೂ ಸಂಸತ್ ಸಭೆಗಳು ನಿಯಮಗಳಿಗೆ ಏನಾದರೂ ತಿದ್ದುಪಡಿಗಳನ್ನು ಸೂಚಿಸಿದರೆ ಅಂತಹ ತಿದ್ದುಪಡಿಗಳು ಸೇರ್ಪಡೆಯಾಗಬೇಕು. ಎರಡೂ ಸಭೆಗಳು ಯಾವುದಾದರೂ ನಿಯಮಗಳನ್ನು

ತಿರಸ್ಕರಿಸಿದರೆ, ಅಂತಹ ನಿಯಮಗಳನ್ನು ಕೈಬಿಡಬೇಕಾಗುತ್ತದೆ. ಇಂತಹ ತಿದ್ದುಪಡಿ ಅಥವಾ ರದ್ದು ಆದಲ್ಲಿ, ಆ ನಿಯಮದಡಿ ಅದಕ್ಕೂ ಮುಂಚೆ ತೆಗೆದುಕೊಂಡಿರುವ ಕ್ರಮಗಳಾವುವನ್ನೂ ಬಾಧಿಸುವುದಿಲ್ಲ.

ರಾಜ್ಯ ಸರಕಾರದ ನಿಯಮಗಳನ್ನು ರೂಪಿಸುವ ಅಧಿಕಾರ

**101**. (1) ರಾಜ್ಯ ಸರಕಾರ, ಈ ಕಾಯಿದೆ ಜಾರಿಗೆ ಬಂದ ಆರು ತಿಂಗಳುಗಳೊಳಗೆ, ಗಜೆಟ್‌ನಲ್ಲಿ ಪ್ರಕಟಿಸಿದ ತರುವಾಯ, ಈ ಕಾಯಿದೆಗೆ ನಿಯಮಗಳನ್ನು ರೂಪಿಸಬಹುದು.

(2) ನಿಯಮಗಳನ್ನು ರೂಪಿಸುವ ಅಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ವಿಷಯಗಳೂ ಬರುತ್ತದೆ;

(ಎ) ಸೆಕ್ಷನ್ 5(2)ರ ಕೆಳಗೆ ಅಂಗವಿಕಲತೆ ಕುರಿತು ಸಂಶೋಧನಾ ಮಂಡಳಿಯ ರಚನೆಯ ವಿಧಾನ.

(ಬಿ) ಸೆಕ್ಷನ್ 14(1)ರ ಕೆಳಗೆ 'ಸೀಮಿತ ಪಾಲಕ'ರನ್ನು ನೇಮಿಸುವ ವಿಧಾನ.

(ಸಿ) ಸೆಕ್ಷನ್ 51(1)ರ ಕೆಳಗೆ ನೋಂದಣಿಗೆ ಅರ್ಜಿ ಹಾಕುವ ನಮೂನೆ ಹಾಗೂ ವಿಧಾನ

(ಡಿ) ಸೆಕ್ಷನ್ 51(3)ರ ಕೆಳಗೆ ಸ್ಥಾಪನೆ/ಸಂಸ್ಥೆಗಳು ನೋಂದಣಿ ಪಡೆಯಲು ಅನುಸರಿಸಬೇಕಾದ ಮಾನದಂಡಗಳ ಬಗ್ಗೆ.

(ಇ) ಸೆಕ್ಷನ್ 51(4)ರ ಕೆಳಗೆ ನೋಂದಣಿ ಪತ್ರದ ಮಾನ್ಯತೆ ಮತ್ತು ಅದರೊಡನೆ ವಿಧಿಸಲಾಗಿರುವ ಶರತ್ತುಗಳ ಬಗ್ಗೆ.

(ಎಫ್) ಸೆಕ್ಷನ್ 51(7)ರ ಕೆಳಗೆ ನೋಂದಣಿಗೆಂದು ಹಾಕಿರುವ ಅರ್ಜಿಯನ್ನು ವಿಲೇವಾರಿ ಮಾಡಬೇಕಾದ ಅವಧಿ.

(ಜಿ) ಸೆಕ್ಷನ್ 53(1)ರ ಕೆಳಗೆ ಮಾಡಬಹುದಾದ ಮೇಲ್ಮನವಿಗೆ ಕಾಲಾವಧಿ.

(ಹೆಚ್) ಸೆಕ್ಷನ್ 59(1) ಕೆಳಗೆ ನೋಂದಣಿ ಅಧಿಕಾರದ ಆದೇಶದ ವಿರುದ್ಧ ಮೇಲ್ಮನವಿ ಮಾಡುವ ವಿಧಾನ ಮತ್ತು ಕಾಲಾವಧಿ ಹಾಗೂ ಸೆಕ್ಷನ್ 59(2)ರ ಕೆಳಗೆ ಮೇಲ್ಕಂಡ ಅರ್ಜಿಯನ್ನು ವಿಲೇವಾರಿ ಮಾಡುವ ವಿಧಾನ;

(ಐ) ಸೆಕ್ಷನ್ 67(6)ರ ಕೆಳಗೆ ರಾಜ್ಯ ಸಲಹಾ ಮಂಡಳಿಯ ನೇಮಕಗೊಂಡ ಸದಸ್ಯರಿಗೆ ನೀಡಬೇಕಾದ ಭತ್ಯೆಗಳ ಬಗ್ಗೆ;

(ಜೆ) ಸೆಕ್ಷನ್ 70ರ ಕೆಳಗೆ ನಡೆಸಬೇಕಾದ ರಾಜ್ಯ ಸಲಹಾ ಮಂಡಳಿಯ ಸಭೆಗಳನ್ನು ನಡೆಸಲು ವಿಧಿ ವಿಧಾನಗಳು.

(ಕೆ) ಸೆಕ್ಷನ್ 72ರ ಕೆಳಗೆ ರಚಿಸಬೇಕಾಗಿರುವ ಜಿಲ್ಲಾಮಟ್ಟದ ಸಮಿತಿಗಳ ಸದಸ್ಯತ್ವ ಮತ್ತು ಕಾರ್ಯಗಳು.

(ಎಲ್) ಸೆಕ್ಷನ್ 79(3)ರ ಕೆಳಗೆ ರಾಜ್ಯ ಆಯುಕ್ತರ ಸಂಬಳ, ಭತ್ಯೆಗಳು ಮತ್ತು ಕೆಲಸದ ನಿಯಮಗಳು; ಮತ್ತು

(ಎಂ) ರಾಜ್ಯ ಆಯುಕ್ತರ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನಗಳು, ಭತ್ಯೆಗಳು ಮತ್ತು ಕೆಲಸದ ನಿಯಮಗಳು.

(ಎನ್) ಸೆಕ್ಷನ್ 79(7)ರ ಕೆಳಗೆ ರಚಿಸಬೇಕಾದ ರಾಜ್ಯ ಸಲಹಾ ಮಂಡಳಿಯ ಸದಸ್ಯರ ಸಂಖ್ಯೆ ಮತ್ತು ಅವರ ನೇಮಕಾತಿಯ ವಿಧಾನ.

(ಓ) ಸೆಕ್ಷನ್ 83(3)ರ ಕೆಳಗೆ ರಾಜ್ಯ ಆಯುಕ್ತರು ನೀಡಬೇಕಾದ ವಿಶೇಷ ವರದಿಯ ಒಳಾಂಶಗಳು ಮತ್ತು ನಮೂನೆ.

(ಪಿ) ಸೆಕ್ಷನ್ 85(2)ರ ಕೆಳಗೆ ವಿಶೇಷ ಪ್ರಾಸಿಕ್ಯೂಟರ್‌ಗೆ ನೀಡಬೇಕಾದ ಶುಲ್ಕದ ಬಗ್ಗೆ.

(ಕ್ಯು) ಸೆಕ್ಷನ್ 88(1)ರ ಕೆಳಗೆ ರಚಿಸಬೇಕಾದ ರಾಜ್ಯ ಅಂಗವಿಕಲರ ನಿಧಿಯ ರಚನೆಯ ವಿಧಾನ ಮತ್ತು ಅದೇ ಸೆಕ್ಷನ್ ಖಂಡ (2)ರ ಕೆಳಗೆ ಆ ನಿಧಿಯ ನಿರ್ವಹಣೆ ಮತ್ತು ವಿನಿಯೋಗದ ವಿಧಾನ.

(ಆರ್) ಸೆಕ್ಷನ್ 88(3)ರ ಕೆಳಗೆ ರಾಜ್ಯ ಅಂಗವಿಕಲರ ನಿಧಿಯ ಲೆಕ್ಕವನ್ನು ಬರೆಯಬೇಕಾದ ವಿಧಾನ

(3) ಈ ಕಾಯಿದೆಯಡಿ ರಾಜ್ಯ ಸರಕಾರ ರೂಪಿಸುವ ಪ್ರತಿಯೊಂದು ನಿಯಮವನ್ನೂ ಒಡನೆಯೇ ರಾಜ್ಯದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳ ಮುಂದೆ ಮಂಡಿಸಬೇಕು. ರಾಜ್ಯದಲ್ಲಿ ಒಂದೇ ಸಭೆ ಇದ್ದಲ್ಲಿ ಆ ಸಭೆಯ ಮುಂದೆ ಮಂಡಿಸಬೇಕು.

1996ರ 1 **102**. (1) ಸನ್ 1995ರ ಅಂಗವಿಕಲರ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ವಿಕಾಸ) ಕಾಯಿದೆಯನ್ನು ಈ ಮೂಲಕ ರದ್ದು ಮಾಡಲಾಗಿದೆ. ರದ್ದತಿ ಮತ್ತು ಉಳಿಸುವಿಕೆ

(2) ಮೇಲೆ ಹೇಳಿದೆ ಕಾಯಿದೆ ರದ್ದಾಗಿದ್ದರೂ, ಆ ಕಾಯಿದೆಯಡಿ ತೆಗೆದುಕೊಂಡಿರುವ ಎಲ್ಲಾ ಕ್ರಮಗಳನ್ನು ಈ ಕಾಯಿದೆಯಲ್ಲಿನ ಸಂವಾದಿ ಸೆಕ್ಷನ್ ಅಥವಾ ಖಂಡದ ಕೆಳಗೆ ತೆಗೆದುಕೊಳ್ಳಲಾಗಿದೆ ಎಂದು ಪರಿಗಣಿಸಲಾಗುವುದು.

## ಅನುಸೂಚಿ

### (ಸೆಕ್ಷನ್ 21ರ ಕಲಂ 2ಸಿ ನೋಡಿ)

### ನಿರ್ದಿಷ್ಟ ಅಂಗವಿಕಲತೆ

1. ದೈಹಿಕ ಅಂಗವಿಕಲತೆ:–

ಎ. ಚಲನೆಯಲ್ಲಿ ನ್ಯೂನತೆ: (ವ್ಯಕ್ತಿ ತನ್ನ ಶರೀರ ಅಥವಾ ಅದರ ಭಾಗಗಳನ್ನು ಅಥವಾ ವಸ್ತುಗಳನ್ನು ನಿರ್ದಿಷ್ಟವಾಗಿ ಚಲಿಸಲು ಅಶಕ್ಯರಾಗಿ ಇರುವುದು. ಈ ಅಶಕ್ಯತೆ ಅವರ ಸ್ನಾಯು, ಮೂಳೆ ಅಥವಾ ನರಮಂಡಲದ ವ್ಯವಸ್ಥೆ ಅಥವಾ ರಚನೆಯಲ್ಲಿ ಇರುವ ಏರುಪೇರಿನಿಂದ ಉಂಟಾಗುತ್ತದೆ). ಈ ಪಂಕ್ತಿಯಲ್ಲಿ ಕೆಳಕಂಡವೂ ಇರುತ್ತವೆ:

(ಎ) "ಕುಷ್ಠರೋಗದಿಂದ ಗುಣವಾಗಿರುವವರು" ಎಂದರೆ ಕುಷ್ಠರೋಗದಿಂದ ಗುಣವಾಗಿದ್ದು ಕೆಳಕಂಡ ಸ್ಥಿತಿಯಲ್ಲಿ ಇರುವವರು:

(i) ಹೊರನೋಟಕ್ಕೆ ಏನೂ ಕಾಣದಿದ್ದರೂ, ಕೈ ಕಾಲುಗಳಲ್ಲಿ ಸ್ಪರ್ಶ ಸಂವೇದನೆ ಇಲ್ಲದಿರುವುದು, ಕಣ್ಣು ಮತ್ತು ಕಣ್ಣಿನ ರೆಪ್ಪೆಗಳಲ್ಲಿ ಚಲನೆ ಇಲ್ಲದಿರುವುದು;

(ii) ಹೊರನೋಟಕ್ಕೆ ಊನ ಮತ್ತು ಲಕ್ವ ಹೊಡೆದಿರುವಂತೆ ಕಂಡರೂ, ಕೈ ಕಾಲುಗಳಲ್ಲಿ ಸಾಕಷ್ಟು ಚಲನೆ ಇದ್ದು, ಸಾಧಾರಣ ಆರ್ಥಿಕ (ಹಣ ಸಂಪಾದನೆ ಮಾಡುವಂತಹ) ಚಟುವಟಿಕೆಗಳಲ್ಲಿ ತೊಡಗಬಹುದಾದವರು;

(iii) ತೀವ್ರತರವಾದ ಊನಗಳಾಗಿದ್ದು, ವಯಸ್ಸೂ ಹೆಚ್ಚಾಗಿದ್ದು ಏನೂ ಹಣ ಸಂಪಾದನೆ ಮಾಡಲು ಅಶಕ್ಯರಾಗಿರುವುದು.

(ಬಿ) ಮಿದುಳುವಾತ: ಎಂದರೆ ಕಾಲಾನುಕ್ರಮದಲ್ಲಿ ಉಲ್ಬಣಗೊಳ್ಳದಂತಹ ನರಮಂಡಲದ ತೊಂದರೆ ಶರೀರದ ಚಲನೆ ಮತ್ತು ಸ್ನಾಯುಗಳ ಸಂಚಲನೆಯನ್ನು ಬಾಧಿಸುವುದು. ಇದು ಜನನಕ್ಕೂ ಮುಂಚೆ, ಪ್ರಸೂತಿ ಸಮಯದಲ್ಲಿ ಅಥವಾ ಜನಿಸಿದ ಒಡನೆ ಶಿಶುವಿನ ಮಿದುಳಿನ ಕೆಲವು ಭಾಗಗಳಿಗೆ ಹಾನಿ/ಆಘಾತ ಆದ ಕಾರಣದಿಂದ ಉಂಟಾಗುವ ಸ್ಥಿತಿ.

(ಸಿ) "ಕುಬ್ಜತೆ" : ಅನುವಂಶಿಕವಾಗಿ ಅಥವಾ ದೈಹಿಕ ತೊಂದರೆ ಇಂದ ವಯಸ್ಕ ವ್ಯಕ್ತಿಯ ಎತ್ತರ ನಾಲ್ಕು ಅಡಿ ಹತ್ತು ಅಂಗುಲ ಅಥವಾ ಅದಕ್ಕೂ ಕಡಿಮೆ ಆಗಿರುವುದು.

(ಡಿ) "ಮಸ್ಕ್ಯುಲರ್ ಡಿಸ್‌ಟ್ರೋಫಿ': ಅನುವಂಶಿಕವಾಗಿ ಉಂಟಾಗುವ ಒಂದು ತರಹದ ಮಾಂಸಖಂಡದ ಖಾಯಿಲೆಗಳು. ಇದರಿಂದ ವ್ಯಕ್ತಿಯ ಚಲನೆಗೆ ಅಗತ್ಯವಾದ ಮಾಂಸಖಂಡಗಳು ದುರ್ಬಲವಾಗುತ್ತಾ ಹೋಗುತ್ತವೆ. ಮಲ್ಟಿಪಲ್ ಡಿಸ್ ಟ್ರೋಫಿ ಇರುವವರಿಗೆ ವಂಶವಾಹಿನಿಗಳಲ್ಲಿ ಏರುಪೇರಿದ್ದು ಅವರ ಶರೀರದಲ್ಲಿ ಆರೋಗ್ಯವಾದ ಮಾಂಸಖಂಡಗಳನ್ನು ನಿರ್ಮಿಸಲು ಅಗತ್ಯವಾದ ಪ್ರೋಟೀನ್ ಉತ್ಪತ್ತಿ ಆಗುವುದಿಲ್ಲ. ಇದರಿಂದ ಕ್ರಮೇಣ ಮೂಳೆ ಮತ್ತು ಮಾಂಸಖಂಡದ ಅಂಗಾಂಶಗಳು ಮತ್ತು ಕೋಶಗಳು ಸಾಯುತ್ತವೆ.

(ಇ) "ಆಸಿಡ್ ದಾಳಿಗೆ ತುತ್ತಾದವರು" – ಅಂದರೆ ಆಸಿಡ್ ಅಥವಾ ಸುಡುವ ರಾಸಾಯನಿಕ ಎಸೆಯಲ್ಪಟ್ಟು ವಿಕೃತವಾಗಿರುವವರು.

ಬಿ. ದೃಷ್ಟಿ ದೋಷ:

(ಎ) "ಕುರುಡು" ಎಂದರೆ ಈ ಕೆಳಕಂಡ ಸ್ಥಿತಿಯಲ್ಲಿ ಇರುವವರು:

(i) ಸಂಪೂರ್ಣವಾಗಿ ಕಣ್ಣುಗಳಲ್ಲಿ ದೃಷ್ಟಿ ಇಲ್ಲದವರು;

(ಬಿ) "ಮಂದ ದೃಷ್ಟಿ" ಎಂದರೆ ಈ ಕೆಳಗಿನ ಸ್ಥಿತಿ ಇರುವುದು:

(i) ಎರಡರಲ್ಲಿ ಉತ್ತಮವಾಗಿರುವ ಕಣ್ಣಿಗೆ ಅತ್ಯುತ್ತಮ ದೃಷ್ಟಿ ಸುಧಾರಣಾ ಮಸೂರ/ಕನ್ನಡಕ ಹಾಕಿಯೂ 6/18ಗಿಂತ ಹೆಚ್ಚಿಲ್ಲದೆ, 20/60ಗಿಂತ ಕಡಿಮೆ ಇಲ್ಲದೆ 3/60ವರೆಗೆ, 10/200 ಸ್ನೆಲೆನ್ ಇರುವವರು.

(ii) ದೃಷ್ಟಿಯ ಹರವು 40ರಿಂದ 10 ಡಿಗ್ರಿಗಳವರೆಗೆ ಇರುವವರು.

(ಸಿ) ಶ್ರವಣ ದೋಷ

(i) **"ಕಿವುಡು"** ಎಂದರೆ ಎರಡೂ ಕಿವಿಗಳಲ್ಲಿ ಮಾತಿನ ತರಂಗಗಳಲ್ಲಿ 70DB ಕಡಿಮೆ ಕೇಳಿಸುವವರು;

(ii) **"ಮಂದಕಿವಿ"** ಎಂದರೆ ಎರಡೂ ಕಿವಿಗಳಲ್ಲಿ ಮಾತಿನ ತರಂಗಗಳಲ್ಲಿ 60 DB ಇಂದ 70 DB ಕಡಿಮೆ ಕೇಳಿಸುವವರು.

(ಡಿ) **"ಮಾತು ಮತ್ತು ಭಾಷಾ ದೋಷ"** – ಗಂಟಲು/ಧ್ವನಿ ಪೆಟ್ಟಿಗೆಯ ಶಸ್ತ್ರಚಿಕಿತ್ಸೆ ಆದಾಗ ಮಿದುಳಿಗೆ ಲಕ್ವ ಹೊಡೆದಾಗ ಮಾತನಾಡುವಲ್ಲಿ ಉಂಟಾಗುವ ದೋಷ ಅಥವಾ ಇನ್ನಾವುದೇ ಶಾರೀರಿಕ ಅಥವಾ ನರ–ಸಂಬಂಧಿತ ಕಾರಣಗಳಿಂದ ಉಂಟಾಗುವ ವಾಕ್ (ಮಾತಿನಲ್ಲಿ) ದೋಷ.

2. **"ಬೌದ್ಧಿಕ ವಿಕಲತೆ"**:

ವಿಚಾರ ಮಾಡುವುದು, ಕಲಿಯುವುದು, ಸಮಸ್ಯೆ ಬಗೆಹರಿಸುವುದು ಮತ್ತು ಸಾಮಾಜಿಕ ವರ್ತನೆಯಲ್ಲಿ ಗಮನಾರ್ಹ ಕೊರತೆ ಇರುವ ಸ್ಥಿತಿ. ಇದರಿಂದ ದೈನಂದಿನ ಸಾಮಾಜಿಕ ಮತ್ತು ವ್ಯಾವಹಾರಿಕ ವಿಷಯಗಳಲ್ಲಿ ಈ ಕೆಳಗಿನ ಕೊರತೆ ಕಂಡುಬರುವುದು:

(ಎ) ವಿಶಿಷ್ಟ ಕಲಿಕೆ ತೊಂದರೆಗಳು: ಮಾತು ಅಥವಾ ಬರವಣಿಗೆಯ ಭಾಷೆಯನ್ನು ಅರ್ಥ ಮಾಡಿಕೊಂಡು ಗ್ರಹಿಸುವಲ್ಲಿ ಅಡಚಣೆ ಇದ್ದು, ಮಾತು, ಓದು, ಬರವಣಿಗೆ, ಕಾಗುಣಿತ, ವ್ಯಾಕರಣ ಮತ್ತು ಲೆಕ್ಕ ಇವೆಲ್ಲದರಲ್ಲೂ ವ್ಯಕ್ತಿಗೆ ಅಶಕ್ಯತೆ ಇರುತ್ತದೆ. ಇದರೊಂದಿಗೆ ಸಂದರ್ಭವನ್ನು ಅರ್ಥ ಮಾಡಿಕೊಳ್ಳುವುದರಲ್ಲೂ ವ್ಯಕ್ತಿಗೆ ತೊಂದರೆ ಇರುತ್ತದೆ.

(ಬಿ) **"ಆಟಿಸಂ"** (ಅಂತರ್ಮುಖಿ) ತೊಂದರೆಯಲ್ಲೂ ದೊಡ್ಡ ವ್ಯತ್ಯಾಸಗಳಿರುತ್ತವೆ. ಇದು ಮಗುವಿನ ಮೊದಲ ಮೂರು ವರ್ಷಗಳಲ್ಲಿ ಕಾಣಿಸಿಕೊಳ್ಳುವ ವಿಕಲತೆ. ವ್ಯವಹಾರ, ಸಂಭಾಷಣೆ ಮತ್ತು ವಿಶೇಷವಾಗಿ ಇತರರೊಡನೆ ಸಂಬಂಧಿಸುವಲ್ಲಿ ತೊಂದರೆ ಇದ್ದು ಮಗು ವಿಚಿತ್ರವಾದ, ಪದೇ ಪದೇ ಮಾಡಿದ್ದನ್ನೇ ಮಾಡುವ ವರ್ತನೆಯನ್ನು ತೋರುತ್ತದೆ.

3. ಮಾನಸಿಕ ವರ್ತನೆ:

**"ಮಾನಸಿಕ ಅಸ್ವಸ್ಥತೆ"**ಯಲ್ಲಿ ಆಲೋಚನೆ, ವರ್ತನೆ, ಭಾವನೆ, ಗ್ರಹಿಕೆ, ನೆನಪು ಮುಂತಾದುವುಗಳಲ್ಲಿ ಗಮನಾರ್ಹವಾದ ಏರುಪೇರಿದ್ದು, ವ್ಯಕ್ತಿಯ ವಿವೇಚನೆ, ನೈಜತೆಯ ಅರಿವು ಹಾಗೂ ವಿಚಾರ ಮಾಡುವ ರೀತಿಗಳು ಆತ ಜೀವನದ ಸಾಧಾರಣ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ತೀವ್ರ ಕೊರತೆ ಇರುತ್ತದೆ.

**"ಬುದ್ಧಿ ಮಾಂದ್ಯತೆ"** ಅಸ್ವಸ್ಥತೆ ಅಲ್ಲ. ಅದು ಕುಂಠಿತ ಬುದ್ಧಿ ಬೆಳವಣಿಗೆ.

4. (ಎ) ದೀರ್ಘಕಾಲೀನ, ಕ್ರಮೇಣ ಹೆಚ್ಚುತ್ತಾ ಹೋಗುವ ನರಮಂಡಲದ ಕಾಯಿಲೆಗಳಿಂದ ಉಂಟಾಗುವ ಅಂಗವಿಕಲತೆಗಳು:

(i) ಮಲ್ಟಿಪಲ್ ಸ್ಕ್ಲೀರೋಸಿಸ್ (ಎಂ.ಎಸ್): ನರಮಂಡಲದ ಉರಿಯೂತದಿಂದ ಮಿದುಳು ಮತ್ತು ಬೆನ್ನು ಹುರಿಯ ನರಕೋಶಗಳ ಮೇಲ್ಪದರಕ್ಕೆ ಹಾನಿ ಉಂಟಾಗಿ (ಮೈಲಿನೇಶನ್), ನರಕೋಶಗಳು ಒಂದರೊಡನೆ ಒಂದು ಸಂಪರ್ಕ ಕಡಿದುಕೊಳ್ಳುತ್ತವೆ. (ಇದರಿಂದ ನರ ಹಾಗೂ ಸ್ನಾಯುಗಳಲ್ಲಿ ಕ್ರಮೇಣ ಶಕ್ತಿ ಕುಂದುತ್ತದೆ).

(ii) ಪಾರ್ಕಿನ್ಸನ್ ಕಾಯಿಲೆ: (ಅದುರು ವಾಯು) ಶರೀರದಲ್ಲಿ ಅದುರುವಿಕೆ, ಸ್ನಾಯುಗಳ ಸೆಟೆತ, ನಿಧಾನವಾದ, ನಿಖರವಾಗಿಲ್ಲದ ಚಲನೆ ಇರುತ್ತದೆ. ಇದು ಮಿದುಳಿನ ಬುಡಭಾಗದಲ್ಲಿ ಉಂಟಾಗುವ ಹಾನಿಯಿಂದ ಮತ್ತು ಮಿದುಳಿನಲ್ಲಿ ಉತ್ಪತ್ತಿಯಾಗುವ, ನರತಂತುಗಳಲ್ಲಿ ಸಂಪರ್ಕ ಏರ್ಪಡಿಸುವ ರಾಸಾಯನಿಕ ಡೊಪಮಿನ್‌ನ ಕೊರತೆ ಏರ್ಪಡುತ್ತದೆ. ಇದು, ಪ್ರಧಾನವಾಗಿ ಮಧ್ಯ ವಯಸ್ಸಿನಲ್ಲಿ ಮತ್ತು ವೃದ್ಧಾಪದಲ್ಲಿ ಬರುವ ಕಾಯಿಲೆ.

(ಬಿ) ದೀರ್ಘಕಾಲೀನ ರಕ್ತಸಂಬಂಧಿತ ಕಾಯಿಲೆಗಳಿಂದ ಉಂಟಾಗುವ ಅಂಗವಿಕಲತೆಗಳು:

(i) **"ಹೀಮೊಫಿಲಿಯ"**: ಅನುವಂಶೀಯವಾಗಿ, ಸಾಧಾರಣವಾಗಿ ಗಂಡು ಮಕ್ಕಳಿಗೆ ಅವರ ತಾಯಿಯಿಂದ ಬರುವ ಕಾಯಿಲೆ. ಇವರಲ್ಲಿ ರಕ್ತವನ್ನು ಹೆಪ್ಪುಗಟ್ಟಿಸುವ ನೈಸರ್ಗಿಕವಾದ ರಸಾಯನಿಕ ಇಲ್ಲದೆ, ಒಂದು ಸಣ್ಣ ಗಾಯದಿಂದಲೂ ರಕ್ತವೆಲ್ಲ ಸೋರಿಹೋಗಿ ಸಾವೂ ಬರಬಹುದು.

(ii) **"ತ್ಯಾಲೆಸೀಮಿಯ"**: ರಕ್ತದಲ್ಲಿ ಕಬ್ಬಿಣಾಂಶ ತೀರಾ ಕಡಿಮೆ ಅಥವಾ ಇಲ್ಲದೆಯೇ ಇರುವ ಒಂದು ಅನುವಂಶೀಯ ಕಾಯಿಲೆ.

(iii) **"ಸಿಕ್ಲ್ ಸೆಲ್ ಎನೀಮಿಯ"** – ಕೆಂಪು ರಕ್ತಕಣಗಳ ಹೊರ ಪದರ ಒಡೆದು ಹೋಗುವುದರಿಂದ ಸತತವಾಗಿ ಕೆಂಪು ಕಣಗಳೊಳಗಿನ ಕಬ್ಬಿಣದ ಅಂಶ ಸೋರಿಹೋಗುತ್ತಿರುತ್ತದೆ. ಇವರಿಗೆ ಸತತವಾದ ಕಬ್ಬಿಣದ ಕೊರತೆ, ಮೈ ಕೈ ನೋವು ಮತ್ತಿತರ ತೊಂದರೆಗಳು ಇರುತ್ತವೆ.

5. **"ಬಹುವಿಧ ಅಂಗವಿಕಲತೆ"** ಮೇಲೆ ಹೇಳಿರುವ ಅಂಗವಿಕಲತೆಗಳಲ್ಲಿ ಒಂದಕ್ಕಿಂತ ಹೆಚ್ಚು ಇರುವ ಸ್ಥಿತಿ. ಕಿವುಡು – ಕುರುಡು ಎರಡೂ ಇದ್ದು ಬೆಳವಣಿಗೆ, ಶಿಕ್ಷಣ ಮತ್ತು ಸಂವಾದದಲ್ಲಿ ತೀವ್ರ ತೊಂದರೆಗಳು ಇರುವವರು.

6. ಕೇಂದ್ರ ಸರಕಾರ ಸೂಚಿಸುವ ಇನ್ನ್ಯಾವುದೇ ತೊಂದರೆಗಳು.

**ಡಾ|| ಜಿ. ನಾರಾಯಣರಾಜು**
ಕಾರ್ಯದರ್ಶಿ, ಭಾರತ ಸರ್ಕಾರ.